ಸಂಪುಟ: 05 ಸಂಚಿಕೆ: 232 ಪುಟಗಳು: 08 ಗುರುವಾರ 06 ನವೆಂಬರ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಯಾರ ಮಾತಿಗೂ ನೀ ಅಂಜಬೇಡ, ಯಾರ ಆಸೆಯಂತೆಯೂ ನೀ ಇರಬೇಡ, ಯಾರನ್ನು ನಂಬಿ ನೀ ಬದುಕಬೇಡ ನಿನ್ನ ಜೀವನ ನಿನಗೆ ನೀ ಮರೆಯಬೇಡ

## ನವೆಂಬರ್ ಕ್ರಾಂತಿಯ ಚರ್ಚೆ ಬಲ ಪ್ರದರ್ಶನಕ್ಕೆ ಅಹಿಂದ ಸಮಾವೇಶ

• ಉದಯವಾಹಿನಿ, ಬೆಂಗಳೂರು

ನವೆಂಬರ್ ಕ್ರಾಂತಿಯ ಸದ್ದಿನ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಬಲಿಗರು ಅಹಿಂದ ಸಮಾ ವೇಶಕ್ಕೆ ತಯಾರಿ ಆರಂಭಿಸಿದ್ದಾರೆ. ಈ ಮೊದಲು 2023, 2024ರಲ್ಲಿ ರಾಜ್ಯದ ಹಲವು ಭಾಗಗಳಲ್ಲಿ ಅಹಿಂದ ಸಮಾವೇಶಗಳನ್ನು ಆಯೋಜಿಸಲಾಗಿತ್ತು 2025ರಲ್ಲಿ ಇದೇ ಮಾದರಿಯ ಸಮಾವೇಶಗಳನ್ನು ನಡೆಸಲು ಪ್ರಯತ್ನಿಸಿದಾಗ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಡ್ಡಗಾಲು ಹಾಕಿದರು. ಕಾಂಗ್ರೆಸ್ ಪಕ್ಷದ ಮುಖಂಡರು, ಸರ್ಕಾರದ ಸಂಪನೂಲ ಬಳಸಿ ನಡೆಸಲಾಗುವ ಈ ಕಾರ್ಯಕ್ರಮವನ್ನು ಪಕ್ಷೇತರವಾಗಿ ಬಿಂಬಿಸುವ ಬದಲಾಗಿ ಕಾಂಗ್ರೆಸ್ಸಿನ ವೇದಿಕೆಯಲ್ಲೇ ಮಾಡಬೇಕೆಂದು ಪಟ್ಟು ಹಿಡಿದರು. ಹೀಗಾಗಿ ಹಾಸನದಲ್ಲಿನ ಸಮಾವೇಶ ಕಾಂಗ್ರೆಸ್ ಕಾರ್ಯಕ್ರಮವಾಗಿ ಪರಿವರ್ತನೆಯಾಯಿತು. ಅಲ್ಲಿಂದಾಚೆಗೆ ಅಹಿಂದ ಸಮಾವೇಶಗಳು ಕಾಂಗ್ರೆಸ್ ಕಾರ್ಯಕ್ರಮಗಳಾಗಿ ಬದಲಾಗಿವೆ. ಸಿದ್ದರಾಮಯ್ಯ ಅವರಿಗೆ ರಾಜಕೀಯ ಅಸ್ಥಿರತೆ ಕಾಡಿದಾಗಲೆಲ್ಲ ಅಹಿಂದ ಸಮಾವೇಶಗಳ ಮೂಲಕ ಶಕ್ತಿ ಪ್ರದರ್ಶನ ಮಾಡಿದ್ದಾರೆ. ಅದರ ಬೆನ್ನಲ್ಲೇ ಸಿದ್ದರಾಮಯ್ಯ ಅವರಿಗೆ ಎದುರಾದ ಅಡೆ-ತಡೆಗಳು ನಿವಾರಣೆಯಾಗಿವೆ.

## ಗುಂಡಿ ಮುಚ್ಚಲು ಮತ್ತೆ ಡೆಡ್‌ಲೈನ್ ವಿಸ್ತರಣೆ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಗುಂಡಿಗಳಿಂದ ಜನ ರೋಸಿ ಹೋಗಿದ್ದಾರೆ. ಗ್ಯಾರಂಟಿ ಯೋಜನೆಗಳ ಜೊತೆಗೆ ಮತ್ತೊಂದು ಗುಂಡಿ ಭಾಗ್ಯವನ್ನೂ ಕೊಟ್ಟಿದ್ದಾರೆಂದು ಸರ್ಕಾರವನ್ನ ಜನ ಹಿಗ್ಗಾಮುಗ್ಗಾ ಜಾಡಿಸ್ತಿದ್ದಾರೆ. ನಗರವನ್ನ ಗುಂಡಿಮುಕ್ತ ಮಾಡಲು ಕೊಟ್ಟಿದ್ದ ಡೆಡ್ ಲೈನ್ ನಿನ್ನೆಗೆ ಮುಗಿದಿದೆ. ಗುಂಡಿಗಳನ್ನ ಇನ್ನೂ ಮುಚ್ಚದ ಕಾರಣ ನವೆಂಬರ್ 10ನೇ ತಾರೀಖಿನ ವರೆಗೆ ಡೆಡ್‌ಲೈನ್ ವಿಸ್ತರಣೆ ಮಾಡಿದ್ದಾರೆ. ಈಗ ಸಿಎಂ, ಡಿಸಿಎಂ ಆದೇಶಕ್ಕೆ ಕೇರ್ ಮಾಡದವ್ರು ಜಿಬಿಎ ಆಯುಕ್ತರ ಆದೇಶಕ್ಕೆ ಸೊಪ್ಪು ಹಾಕ್ತಾರಾ ಅನ್ನೋದು ಮುಂದಿರುವ ಪ್ರಶ್ನೆ.

ನಗರದಲ್ಲಿ 16 ಸಾವಿರಕ್ಕೂ ಹೆಚ್ಚು ಗುಂಡಿಗಳಿವೆ. ಮುಖ್ಯರಸ್ತೆ, ಉಪರಸ್ತೆ, ವಾರ್ಡ್‌ಗಳಲ್ಲೂ ಸಾವಿರಾರು ಗುಂಡಿಗಳು ಬಿದ್ದಿದ್ದು ಅವುಗಳಿಗೆ ಇನ್ನೂ ಟಾರು ಭಾಗ್ಯ ಸಿಕ್ಕಿಲ್ಲ. ಕಳೆದ ತಿಂಗಳು ಮಳೆ ಬಿದ್ದ ಕಾರಣ, ಗುಂಡಿ ಮುಚ್ಚಲು ಆಗಿಲ್ಲ ಅನ್ನೋ ಸಮಜಾಯಿಷಿಯನ್ನ ಜಿಬಿಎ ಕಮಿಷನರ್ ಮಹೇಶ್ವರ್ ರಾವ್ ಹೇಳ್ತಿದ್ದಾರೆ.

ಗುಂಡಿಗಳನ್ನ ತುರ್ತಾಗಿ ಮುಚ್ಚಲು ಸಿಎಂ, ಡಿಸಿಎಂ ಹಲವು ಡೆಡ್‌ಲೈನ್‌ಗಳನ್ನ ನೀಡಿದ್ರೂ, ನಗರವನ್ನ ಗುಂಡಿ ಮುಕ್ತ ಮಾಡಲು ಆಗಿಲ್ಲ. ಕಳೆದ ಎರಡು ದಿನಗಳ ಹಿಂದೆ ಜಿಬಿಎ ಅಧಿಕಾರಿಗಳನ್ನ ಕರೆದು ಮುಖ್ಯ ಆಯುಕ್ತರು ಒಂದು ವಾರದಲ್ಲಿ ಎಲ್ಲಾ ಗುಂಡಿಗಳನ್ನ ಮುಚ್ಚಲು ತಾಕೀತು ಮಾಡಿದ್ದಾರೆ. ಆದ್ರೆ ಅಧಿಕಾರಿ, ಸಿಬ್ಬಂದಿ ಎಷ್ಟರಮಟ್ಟಿಗೆ ರೀಚ್ ಆಗ್ತಾರೆ ಅನ್ನೋದೆ ಕುತೂಹಲ.

## ಮಕ್ಕಳ ದಿನಾಚರಣೆ ಬಂಪರ್ ಗಿಫ್ಟ್

• ಉದಯವಾಹಿನಿ, ಬೆಂಗಳೂರು

ಇಷ್ಟು ದಿನ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ಬಿಸಿಯೂಟ ಯೋಜನೆಯನ್ನು ಇದೀಗ ಪಿಯುಸಿ ವಿದ್ಯಾರ್ಥಿಗಳಿಗೂ ಸಹ ನೀಡಲು ಕರ್ನಾಟಕ ಸರ್ಕಾರ ಚಿಂತನೆ ನಡೆಸಿದೆ. ಹೌದು, ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೂ ಮಧ್ಯಾಹ್ನದ ಬಿಸಿಯೂಟ ನೀಡಲು ತೀರ್ಮಾನಿಸಿದ್ದು, ನವೆಂಬರ್ 14 ಮಕ್ಕಳ ದಿನಾಚರಣೆದಂದು ಸರ್ಕಾರದಿಂದ ಅಧಿಕೃತ ಘೋಷಣೆಯಾಗುವ ಸಾಧ್ಯತೆಗಳಿವೆ.

ಸದ್ಯ 1ರಿಂದ 10ನೇ ತರಗತಿ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟ ನೀಡಲಾಗುತ್ತಿದೆ. ಈ ಯೋಜನೆಯನ್ನು ಪಿಯು ವಿದ್ಯಾರ್ಥಿಗಳಿಗೆ ವಿಸ್ತರಣೆ ಮಾಡಲು ಸಿಎಂ ಸಿದ್ದರಾಮಯ್ಯ ಸರ್ಕಾರ ಚಿಂತನೆ ನಡೆಸಿದೆ. ರಾಜ್ಯದಲ್ಲಿ ಸುಮಾರು 3 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಸರ್ಕಾರಿ ಕಾಲೇಜುಗಳಲ್ಲಿ ಓದುತ್ತಿದ್ದಾರೆ. ಅದರಲ್ಲಿಯೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಸರ್ಕಾರಿ ಕಾಲೇಜ್‌ಗೆ ದಾಖಲಾತಿ ಪಡೆದುಕೊಂಡಿದ್ದಾರೆ. ಹಾಗಾಗಿ ಈ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆ ವಿಸ್ತರಣೆಗೆ ಸರ್ಕಾರ ಮುಂದಾಗಿದ್ದು, ಈ ಬಗ್ಗೆ ಶಿಕ್ಷಣ ಇಲಾಖೆ ಈಗಾಗಲೇ ಇಲಾಖೆಯಿಂದ ಸರ್ಕಾರಿ ಪದವಿ ಪೂರ್ವ ವಿದ್ಯಾರ್ಥಿಗಳ ಸಂಖ್ಯೆ ಮಾಹಿತ ಪಡೆದುಕೊಂಡಿದೆ.

# ಕಹಿಯಾದ ಕಬ್ಬು ರೈತರು ತಬ್ಬಿಬ್ಬು

## ಸರ್ಕಾರದ ನಿದ್ದೆಗೆಡಿಸಿದೆ ಕಬ್ಬು ಕಿಚ್ಚು



1 ರಾಜ್ಯ ಸರ್ಕಾರದ ನಿದ್ದೆಗೆಡಿಸಿದ ಕಬ್ಬು ಬೆಳೆಗಾರರು
2 ಬೆಳಗಾವಿಯಲ್ಲಿ ನಡೆಯುತ್ತಿದೆ ತೀವ್ರ ಹೋರಾಟ
3 ಸಮಸ್ಯೆ ಬಗೆಹರಿಸಲು ರಾಜ್ಯ ಸರ್ಕಾರದ ಕ್ರಮ ಏನು?



• ಉದಯವಾಹಿನಿ, ಬೆಳಗಾವಿ:

ಕಬ್ಬಿಗೆ 3,500 ರೂ. ದರ ನಿಗದಿಗೆ ಆಗ್ರಹಿಸಿ ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಕ್ರಾಸ್‌ನಲ್ಲಿ ರೈತರು ಕಳೆದ 7 ದಿನಗಳಿಂದ ನಡೆಸುತ್ತಿರುವ ಅಹೋರಾತ್ರಿ ಪ್ರತಿಭಟನೆಗೆ ಕರ್ನಾಟಕ ರಕ್ಷಣಾ ವೇದಿಕೆ ಬೆಂಬಲ ಸೂಚಿಸಿದ್ದು, ಬೆಳಗಾವಿ ಸುವರ್ಣ ವಿಧಾನಸೌಧ ಮುಂಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜಿಲ್ಲಾದ್ಯಂತ ಕಬ್ಬು ಬೆಳೆಗಾರರ ಹೋರಾಟ ತೀವ್ರಗೊಂಡಿದ್ದು, ಬಹುತೇಕ ಎಲ್ಲಾ ತಾಲ್ಲೂಕುಗಳಲ್ಲಿ ದಿನನಿತ್ಯ ಪ್ರತಿಭಟನೆಗಳು ನಡೆಯುತ್ತಿವೆ. ಈಗ ರೈತರ ಹೋರಾಟಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಕೂಡ ಮುಂದಾಗಿದೆ. ಕರವೇ ನಾರಾಯಣಗೌಡ ಬಣದ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿ-4 ಅನ್ನು ತಡೆದು ರಸ್ತೆ ಮೇಲೆಯೇ ಧರಣಿ ಕುಳಿತರು. ರಾಜ್ಯ ಸರ್ಕಾರದ ವಿರುದ್ಧ ದಿಕ್ಕಾರದ ಘೋಷಣೆ ಮೊಳಗಿಸಿದರು. ಟೈರ್‌ಗೆ ಬೆಂಕಿ ಹಚ್ಚಲು ಪ್ರತಿಭಟನಾಕಾರರು ಮುಂದಾದರು. ಈ ವೇಳೆ ಹೋರಾಟಗಾರರು ಮತ್ತು ಪೊಲೀಸರ ನಡುವೆ ವಾಗ್ವಾದ ಉಂಟಾಯಿತು. ಹೆದ್ದಾರಿ ತಡೆದ ಪರಿಣಾಮ ರಸ್ತೆ ಸಂಚಾರ ಸ್ಥಗಿತವಾಗಿ ನೂರಾರು ವಾಹನಗಳು ಸಾಲುಗಟ್ಟಿ ನಿಂತು ಪ್ರಯಾಣಿಕರು ಕೆಲಕಾಲ ಪರದಾಡಿದರು. ಸರ್ವೀಸ್ ರಸ್ತೆಯಲ್ಲೂ ವಾಹನಗಳನ್ನು ತಡೆದ ಕರವೇ ಕಾರ್ಯಕರ್ತರು, ಕಬ್ಬು ಬೆಳೆಗಾರರ ಬೇಡಿಕೆ ತಕ್ಷಣ ಈಡೇರಿಸುವಂತೆ ಆಗ್ರಹಿಸಿದರು. ಪ್ರತಿಭಟನೆ ವಿಕೋಪಕ್ಕೆ ಹೋಗುತ್ತಿದ್ದಂತೆ ಕರವೇ ಜಿಲ್ಲಾಧ್ಯಕ್ಷ ದೀಪಕ ಗುಡಗನಟ್ಟಿ, ರಾಜ್ಯ ಸಂಚಾಲಕ ಸುರೇಶ ಗವನ್ನವರ ಸೇರಿ ಇನ್ನಿತರ ಮುಖಂಡರು ಮತ್ತು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ತಮ್ಮ ವಾಹನದಲ್ಲಿ ಕರೆದೊಯ್ದರು.

ಕರವೇ ಜಿಲ್ಲಾಧ್ಯಕ್ಷ ದೀಪಕ ಗುಡಗನಟ್ಟಿ ಮಾತನಾಡಿ, ಈ ನಾಡಿಗೆ ಅನ್ನ ನೀಡುವ ರೈತರ ಹೋರಾಟಕ್ಕೆ ಕರವೇ ಬೆಂಬಲ ಸೂಚಿಸಿದೆ. ಗುರ್ಲಾಪುರ ಕ್ರಾಸ್‌ನಲ್ಲಿ ರೈತರು ಕ್ರಾಂತಿಯ ಕಿಡಿ ಹೊತ್ತಿಸಿದ್ದಾರೆ. ಇದು ರಾಜ್ಯವ್ಯಾಪಿ ವಿಸ್ತರಿಸುವ ಮುನ್ನ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ಕಬ್ಬಿಗೆ 3,500 ರೂ. ಬೆಂಬಲ ಬೆಲೆ ಘೋಷಿಸಬೇಕು. ಇಲ್ಲದಿದ್ದರೆ ಮುಂದೆ ಆಗುವ ಅನಾಹುತಕ್ಕೆ ರಾಜ್ಯ ಸರ್ಕಾರವೇ ನೇರ ಹೊಣೆ ಆಗುತ್ತದೆ ಎಂದು ಎಚ್ಚರಿಸಿದರು.

ಕರವೇ ರಾಜ್ಯ ಸಂಚಾಲಕ ಸುರೇಶ ಗವನ್ನವರ ಮಾತನಾಡಿ, ರಾತ್ರಿ-ಹಗಲು, ಚಳಿ-ಮಳೆ-ಬಿಸಿಲು ಎನ್ನದೇ ಕಳೆದ 7 ದಿನಗಳಿಂದ ರೈತರು ಪ್ರತಿಭಟನೆ ಮಾಡುತ್ತಿದ್ದಾರೆ. ಜೈ ಜವಾನ್-ಜೈ ಕಿಸಾನ್ ಎನ್ನುವ ಸರ್ಕಾರಗಳು ರೈತರ ಬೇಡಿಕೆ ಈಡೇರಿಸಲು ಮುಂದಾಗದೇ ಇರುವುದು ನಾಚಿಕೆಗೇಡಿನ ಸಂಗತಿ. ದೇಶದ ಅಸ್ಮಿತೆ ಆಗಿರುವ ರೈತರನ್ನು ಬದುಕಿಸುವ ಕೆಲಸವನ್ನು ಶಾಸಕರು, ಸಚಿವರು ಮಾಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಕರವೇ ಮುಖಂಡರಾದ ಗಣೇಶ ರೋಕಡೆ, ಹೊಳೆಪ್ಪ ಸುಲಧಾಳ, ಭೂಪಾಲ್ ಅತ್ತು, ಸಿದ್ರಾಯ ನಾಯಿಕ, ರಮೇಶ ಯರಗನ್ನವರ, ಮಧು ಇಟಗಿ ಸೇರಿ ಮತ್ತಿತರರು ಪಾಲ್ಗೊಂಡಿದ್ದರು.

**ಬುತ್ತಿ ತಂದು ಬೆಂಬಲ:** ಕಬ್ಬಿಗೆ ಸೂಕ್ತ ಬೆಲೆ ನಿಗದಿ ಪಡಿಸುವಂತೆ ಕಳೆದ ಏಳು ದಿನಗಳಿಂದ ಗುರ್ಲಾಪುರ ಗ್ರಾಮದಲ್ಲಿ ನಡೆಯುವ ಹೋರಾಟಕ್ಕೆ ರಾಯಭಾಗ ತಾಲ್ಲೂಕಿನ ಮುಗಳಖೋಡ ಗ್ರಾಮದ ರೈತ ಮಹಿಳೆಯರು ತಲೆ ಮೇಲೆ ಬೃಹತ್ ರೊಟ್ಟಿ ಬುತ್ತಿ ಹೊತ್ತುಕೊಂಡು ಬಂದು ಬೆಂಬಲ ನೀಡಿದರು. ಮಧ್ಯಾಹ್ನದ ಊಟಕ್ಕೆ ಸಾವಿರಾರು ರೊಟ್ಟಿ ತೆಗೆದುಕೊಂಡು ಬಂದು ರೈತ ಮಹಿಳೆಯರು, ಹೋರಾಟಕ್ಕೆ ಪುರುಷರು ಅಷ್ಟೇ ಅಲ್ಲ ನಾವು ನಿಮ್ಮ ಜೊತೆ ಇರುತ್ತೇವೆಂದು ಸಂದೇಶ ನೀಡಿದರು. ಹೋರಾಟದ ವೇದಿಕೆಯಲ್ಲಿ ವಿಜಯೇಂದ್ರ ಅವರ ಹುಟ್ಟುಹಬ್ಬವನ್ನು ರೈತರು ಬೆಲ್ಲ ಹಾಗೂ ಕಬ್ಬಿನ ಜೊತೆಗೆ ಪೇಡಾ ತಿನ್ನಿಸಿ ಸರಳವಾಗಿ ಆಚರಣೆ ಮಾಡಿದರು. ಬೃಹತ್ ರೊಟ್ಟಿ ಬುತ್ತಿ ತಂದ ರೈತ ಮಹಿಳೆಯರನ್ನು ನೋಡಿದ ವಿಜಯೇಂದ್ರ, ಅವರಿಗೆ ಅಭಿನಂದನೆ ಸಲ್ಲಿಸಿದರು.

ಪ್ರತಿ ಕೋರ್ಟ್ ಕಲಾಪವನ್ನು ಬಿಟ್ಟು ವಕೀಲರ ಸಂಘಗಳು ಪ್ರತಿಭಟನೆಯಲ್ಲಿ ಭಾಗಿಯಾಗುವ ಮೂಲಕ ರೈತರಿಗೆ ಬೆಂಬಲ ಸೂಚಿಸಿದ್ದಾರೆ. ರೈತರು ವಂತಿಕೆ ಮಾಡಿಕೊಂಡು ರಸ್ತೆ ಮೇಲೆ ಬಗೆ ಬಗೆ ಆಹಾರ ತಯಾರಿಸಿ ಊಟವನ್ನು ಮಾಡುತ್ತಿದ್ದಾರೆ ಎಂದಿದ್ದಾರೆ. ಇದು ನನ್ನ 50ನೇ ಹುಟ್ಟುಹಬ್ಬ. ನಾಡಿನ ಅನ್ನದಾತರ ಜೊತೆಗೆ ಆಚರಿಸಿಕೊಂಡಿರುವುದು ನನಗೆ ತುಂಬಾ ಸಂತೋಷವಾಗಿದೆ. ರಾಜ್ಯ ಸರ್ಕಾರಕ್ಕೆ ರೈತರ ಕೂಗು ಕೇಳಿಲ್ಲವೆಂದರೆ ಅಧಿಕಾರದ ಮದ ಏರಿದೆ ಎಂದರ್ಥ. ಇವರ ಈ ದರ್ಪದಿಂದ ರೈತರ ಹೋರಾಟಕ್ಕೆ ಕಿಮ್ಮತ್ತು ಸಿಗುತ್ತಿಲ್ಲ. ಕಬ್ಬು ಬೆಳೆಗಾರರ ಹೋರಾಟಕ್ಕೆ ಸಂಪೂರ್ಣ ಬೆಂಬಲ ಕೊಡಬೇಕೆಂಬ ಕಾರಣಕ್ಕೆ ನಾನಿಲ್ಲಿಗೆ ಬಂದಿರುವೆ ಎಂದರು

ಸರ್ಕಾರಕ್ಕೆ ನಿಮ್ಮ ಹೋರಾಟದ ಬಿಸಿ ಮುಟ್ಟಿದೆ. ಅಲ್ಲದೇ, ರಾಜಕಾರಣಿಯಾಗಿ ನಾನಿಂದು ಈ ಹೋರಾಟಕ್ಕೆ ಬಂದಿಲ್ಲ, ಈ ನಾಡು ಕಂಡ ಧೀಮಂತ ಹೋರಾಟಗಾರ ಯಡಿಯೂರಪ್ಪ ಅವರ ಮಗನಾಗಿ ಈ ಹೋರಾಟಕ್ಕೆ ಬಂದಿದ್ದೇನೆ. 10 ಕಿ.ಮೀ ದೂರದಲ್ಲಿರುವ ಉಸ್ತುವಾರಿ ಸಚಿವರು ಬರ್ತಾರೆ, ಹೋರಾಟಕ್ಕೆ ಸಹಕಾರ ನೀಡ್ತಾರೆ ಅಂದುಕೊಂಡಿದ್ದೆ. 50 ಕಿ.ಮೀ ದೂರದಲ್ಲಿರುವ ಸಕ್ಕರೆ ಸಚಿವರು ತಕ್ಷಣ ಬಂದು ಅಹವಾಲು ಸ್ವೀಕರಿಸುತ್ತಾರೆ ಅಂತಾ ಕಾತುರದಿಂದ ಕಾದೆವು. ಆದರೆ, 6ನೇ ದಿನಕ್ಕೆ ಹೋರಾಟ ಕಾಲಿಟ್ಟರೂ ಯಾರು ಕೂಡ ಇತ್ತಕಡೆ ಗಮನ ನೀಡುತ್ತಿಲ್ಲ. ರಾಜ್ಯ ಸರ್ಕಾರದ ವರ್ತನೆ ಬೇಸರ ತರಿಸಿದೆ ಎಂದು ವಿಜಯೇಂದ್ರ ಹೇಳಿದರು.

### ಮಹಾರಾಷ್ಟ್ರದಲ್ಲಿ ಅಧಿಕ

ರಾಜ್ಯದಲ್ಲಿ ಕಬ್ಬಿಗೆ ಪ್ರತಿ ಟನ್‌ಗೆ 3010 ರೂಪಾಯಿ ನೀಡಲಾಗುತ್ತಿದೆ. ಆದರೆ ನೆರೆ ರಾಜ್ಯ ಮಹಾರಾಷ್ಟ್ರದಲ್ಲಿ ಪ್ರತಿ ಟನ್‌ಗೆ 3,410 ರೂಪಾಯಿ ನೀಡಲಾಗುತ್ತಿದೆ. ಇದನ್ನು ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಕಬ್ಬು ಬೆಳೆಗಾರರಿಗೆ ಇಲ್ಲಿಯ ಸಕ್ಕರೆ ಕಾರ್ಖಾನೆಗಳು ಕಡಿಮೆ ದರವನ್ನು ನೀಡುತ್ತಿವೆ. ಅಷ್ಟೇ ಅಲ್ಲದೆ, ಬಾಕಿ ಪಾವತಿಯನ್ನು ಸರಿಯಾದ ಸಮಯದಲ್ಲಿ ನೀಡುತ್ತಿಲ್ಲ ಎಂಬ ಆರೋಪವೂ ಇದೆ.

### ರೈತರಿಗೆ ಪಾವತಿ ಇನ್ನೂ ಬಾಕಿ

ರೈತರಿಗೆ ಕಡಿಮೆ ದರ ನೀಡುತ್ತಿರುವುದು ಮಾತ್ರವಲ್ಲದೆ, ಪಾವತಿಯನ್ನು ರಾಜ್ಯದ ಸಕ್ಕರೆ ಕಾರ್ಖಾನೆಗಳು ಸರಿಯಾದ ಸಮಯದಲ್ಲಿ ನೀಡುತ್ತಿಲ್ಲ. ಸರ್ಕಾರವೇ ಕೊಟ್ಟ ಅಧಿಕೃತ ಮಾಹಿತಿಯ ಪ್ರಕಾರ, 2024-25 ನೇ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳಿಂದ ರಾಜ್ಯದ ರೈತರಿಗೆ 38 ಕೋಟಿ ಪಾವತಿ ಬಾಕಿ ಇವೆ. 5 ಸಕ್ಕರೆ ಕಾರ್ಖಾನೆಗಳು ರೈತರಿಗೆ ಬಾಕಿ ಮೊತ್ತವನ್ನು ಪಾವತಿಸಿಲ್ಲ.

### ರಾಜ್ಯದ ಕಾರ್ಖಾನೆಗಳ ಬಗ್ಗೆ ರೈತರಲ್ಲಿ ಅಸಮಾಧಾನ

ರಾಜ್ಯದ ಸಕ್ಕರೆ ಕಾರ್ಖಾನೆಗಳ ಬಗ್ಗೆ ರೈತರಲ್ಲಿ ಅಸಮಾಧಾನ ಭುಗಿಲೆದ್ದಿದೆ. ಕಡಿಮೆ ದರ ಅಷ್ಟೇ ಅಲ್ಲ, ಸರಿಯಾದ ಸಮಯಕ್ಕೆ ಬಾಕಿ ಪಾವತಿ ಇಲ್ಲ ಹಾಗೂ ತೂಕ, ಇಳುವರಿಯಲ್ಲೂ ಮೋಸ ಆಗುತ್ತಿದೆ ಎಂಬ ಆರೋಪ ಕೇಳಿಬರುತ್ತಿದೆ.ರಾಜ್ಯದಲ್ಲಿ ಒಟ್ಟು 81 ಸಕ್ಕರೆ ಕಾರ್ಖಾನೆಗಳು ಇವೆ. ಬಹುತೇಕ ಕಾರ್ಖಾನೆಗಳು ರಾಜಕಾರಣಿಗಳ ಒಡೆತನದಲ್ಲಿದೆ. ಇದರಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪ್ರಭಾವಿ ರಾಜಕಾರಣಿಗಳು ಇದ್ದಾರೆ. ಕಬ್ಬು ಮಂಡಳಿಯನ್ನು ಹಿಡಿತದಲ್ಲಿ ಇಟ್ಟುಕೊಂಡು ದರ ಪರಿಷ್ಕರಣೆ ಆಗದಂತೆ ನೋಡಿಕೊಳ್ಳುತ್ತಿದ್ದರೆ ಎಂಬ ಆರೋಪ ಕೇಳಿ ಬರುತ್ತಿದೆ. ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳು ಟನ್‌ಗೆ 3400 ನೀಡಿದರೆ ರಾಜ್ಯದಲ್ಲಿ 2,700 ರಿಂದ 3,100 ರೂಪಾಯಿ ನೀಡಲಾಗುತ್ತಿದೆ. ಅಲ್ಲದೆ, ಕಬ್ಬಿನ ಕಟಾವು ಮತ್ತು ಸಾಗಣೆ ವೆಚ್ಚವನ್ನು ಲೆಕ್ಕ ಹಾಕಿ ಅಲ್ಲೂ ರೂಪಾಯಿ 800, 900 ಕಡಿತ ಮಾಡಲಾಗುತ್ತಿದೆ.

### ಬಾರುಕೋಲು ಬೀಸಿ ಸರ್ಕಾರದ ವಿರುದ್ಧ ಘೋಷಣೆ

# ಮೇದಾರ ಅಭಿವೃದ್ಧಿ ನಿಗಮ ಪ್ರಾರಂಭಕ್ಕೆ ಮುಂದಾದ ರಾಜ್ಯ ಸರ್ಕಾರ

## ಅಂದಿನ ಮುಖ್ಯಮಂತ್ರಿಗಳಾದ ಬಸವರಾಜ್ ಬೊಮ್ಮಾಯಿ ಘೋಷಣೆ

• ಉದಯವಾಹಿನಿ, ಚಿತ್ರದುರ್ಗ

ಕಳೆದ ಸರ್ಕಾರದಲ್ಲಿ ಘೋಷಣೆಯಾಗಿದ್ದ ಕರ್ನಾಟಕ ಮೇದಾರ ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ ಅಂದಿನ ಮುಖ್ಯಮಂತ್ರಿಗಳಾದ ಬಸವರಾಜ್ ಬೊಮ್ಮಾಯಿ ಘೋಷಣೆ ಮಾಡಿದ್ದರು. ಚಿತ್ರದುರ್ಗದಲ್ಲಿ ನಡೆದಿದ್ದ ಅಖಿಲ ಭಾರತ ಮೇದಾರ ಬುಡಕಟ್ಟು ಸಮುದಾಯದ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ್ದ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಯವರು ವೃತ್ತಿಪರ ಮೇದಾರ ನಿಗಮ ಸ್ಥಾಪನೆ ಮಾಡುವುದಾಗಿ ಭರವಸೆ ನೀಡಿದ್ದರು ಘೋಷಣೆಯಾದ ನಂತರ ನಿಗಮ ಪ್ರಾರಂಭವಾಗಿ ಸಮುದಾಯದ ನಾಗರೀಕರಿಗೆ ಸೇವೆ ಸಿಗುವಲ್ಲಿ ವಿಳಂಬವಾಗಿತ್ತು.

ಆದರೆ ಇತ್ತೀಚಿಗೆ ಚಿತ್ರದುರ್ಗದ ಶ್ರೀ ಇಮ್ಮಡಿ ಬಸವ ಮೇದಾರ ಕೇತೇಶ್ವರ ಸ್ವಾಮೀಜಿಗಳು ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಇವರಿಗೆ ಒತ್ತಡ ಕೂಡಲೇ ಕಚೇರಿ ಪ್ರಾರಂಭ ಮಾಡಿ ರಾಜ್ಯದಲ್ಲಿ ಇರುವ ಮೇದಾರ ಸಮುದಾಯದ ಜನರಿಗೆ ಸರ್ಕಾರದ ಸವಲತ್ತುಗಳನ್ನು ಕೂಡಲೇ ಕಲ್ಪಿಸಿ ಕೊಡುವಂತೆ ಸರ್ಕಾರದ ಮೇಲೆ ಒತ್ತಡ ತಂದಿದ್ದರು.

ಇದರಿಂದ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಬೆಂಗಳೂರಿನ ಅಂಬೇಡ್ಕರ್ ಬೀದಿ ವಿಶ್ವೇಶ್ವರಯ್ಯ ದೊಡ್ಡ ಗೋಪುರ, 8 ನೇ ಮಹಡಿ ಇಲ್ಲಿ ಕಚೇರಿ ಪ್ರಾರಂಭಿಸುವಂತೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಸರ್ಕಾರದಿಂದ ಆದೇಶವಾಗಿತ್ತು ಇದರಿಂದ ಕಾರ್ಯಗನ್ನುಖವಾದ ಅಧಿಕಾರಿಗಳು ಕಚೇರಿ ಪ್ರಾರಂಭ ಮಾಡಿ ಮೇದಾರ ಜನಾಂಗದ ಜನರಿಗೆ ಸರ್ಕಾರದ ಸವಲತ್ತುಗಳು ಸಿಗುವಂತೆ ಮಾಡಲು ಸರ್ಕಾರ ಮುಂದಾಗಿರುವುದಕ್ಕೆ ಚಿತ್ರದುರ್ಗದ ಶ್ರೀ ಮೇದಾರ ಕೇತೇಶ್ವರ ಮಠದ ಶ್ರೀ ಶ್ರೀ ಇಮ್ಮಡಿ ಬಸವ ಮೇದಾರ ಕೇತೇಶ್ವರ ಸ್ವಾಮೀಜಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ರವರಿಗೆ ಅಭಿನಂದಿಸಿದ್ದಾರೆ.






### ಚಿತ್ರದುರ್ಗದ ಶ್ರೀಗಳ ಮನವಿ

ಶ್ರೀ ಶ್ರೀ ಇಮ್ಮಡಿ ಬಸವ ಮೇದಾರಕೇ ತೇಶ್ವರ ಸ್ವಾಮೀಜಿಗಳು ಮಾತನಾಡಿ ಸರ್ಕಾರ ಮೇದಾರ ಕೇತೇಶ್ವರ ಜಯಂತಿಯನ್ನು ನಡೆಸಬೇಕು ಇದನ್ನು ರಜಾ ರಹಿತವಾಗಿ ಸರ್ಕಾರ ನಡೆಸಬೇಕೆಂದು ಶ್ರೀಗಳು ಒತ್ತಾಯಿಸಿದ್ದಾರೆ.

# ಹರಿಯಾಣದಲ್ಲಿ 25 ಲಕ್ಷ ಮತಗಳು ಕಳ್ಳತನ: ರಾಹುಲ್ ಬಾಂಬ್

• ಉದಯವಾಹಿನಿ, ನವದೆಹಲಿ

2024ರ ವಿಧಾನಸಭಾ ಚುನಾವಣೆ ವೇಳೆ ಹರಿಯಾಣದಲ್ಲಿ ಬರೋಬ್ಬರಿ 25 ಲಕ್ಷ ಮತಗಳು ಕಳ್ಳತನ ಆಗಿದೆ ಎಂದು ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹೊಸ ಬಾಂಬ್ ಸಿಡಿಸಿದರು.

ನವದೆಹಲಿಯ ಎಐಸಿಸಿ ಕಚೇರಿಯಲ್ಲಿಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, 2024ರ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಭಾರೀ ಪ್ರಮಾಣದ ಅಕ್ರಮ ನಡೆದಿದೆ. ಬಿಜೆಪಿ ಗೆದ್ದಿರೋದು ನಕಲಿ ಮತಗಳಿಂದ ಅನ್ನೋದು ಖಚಿತವಾಗಿದೆ. ಮಹಾದೇವಪುರ, ಆಳಂದ ಆದ್ಮೇಲೆ ಇದು ಕೆಲವು ಕ್ಷೇತ್ರಗಳಿಗಷ್ಟೇ ಸೀಮಿತವಾಗಿಲ್ಲ, ಇಡೀ ರಾಜ್ಯ, ದೇಶವನ್ನೇ ಆವರಿಸಿಕೊಂಡಿದೆ ಅನಿಸಿತು. ಹರಿಯಾಣ, ಮಧ್ಯಪ್ರದೇಶ, ಮಹಾರಾಷ್ಟ್ರ, ಛತ್ತೀಸ್ ಗಢದಲ್ಲೂ ಇದೇ ರೀತಿಯ ದೂರು ಬಂದಿದ್ದವು. ಈಗ ನಾವು ಹರಿಯಾಣವನ್ನ ಕೇಂದ್ರೀಕರಿಸಿದ್ದೇವೆ ಎಂದು ತಿಳಿಸಿದ್ರು.

ಹರಿಯಾಣ ಚುನಾವಣೆ ವೇಳೆ ಎಲ್ಲಾ ಸಮೀಕ್ಷೆಗಳಲ್ಲೂ ಕಾಂಗ್ರೆಸ್ 52 ರಿಂದ 62 ಸ್ಥಾನಗಳಷ್ಟು ಮುಂದಿತ್ತು. ಅದರಂತೆ ಹರಿಯಾಣ ಚುನಾವಣಾ ಪೂರ್ವ ಸಮೀಕ್ಷೆಯಲ್ಲಿ ಸ್ವಿಪ್ ಮಾಡಲಿದೆ ಎಂದು ನಿರೀಕ್ಷೆ ಮಾಡಲಾಗಿತ್ತು.

ಆದ್ರೆ ಫಲಿತಾಂಶ ಸಂಪೂರ್ಣ ವಿಭಿನ್ನವಾಗಿತ್ತು. ಹರಿಯಾಣದಲ್ಲಿ ಫಸ್ಟ್ ಟೈಮ್ ಅಂಚೆ ಮತಗಳು ಮತ್ತು ಸಾಮಾನ್ಯ ಮತಗಳಲ್ಲಿ ವ್ಯತ್ಯಾಸ ಆಗಿರುವುದು ಕಂಡುಬಂದಿತು ಎಂದು ಆರೋಪಿಸಿದರು. ಕಾಂಗ್ರೆಸ್ ಕೇವಲ 22,779 ಮತಗಳಿಂದ ಸೋತಿದೆ. ಆದ್ರೆ ಒಟ್ಟು 1.18 ಲಕ್ಷ ಮತಗಳು ವ್ಯತ್ಯಾಸ ಇದೆ. ಅಷ್ಟೇ ಅಲ್ಲ ಹರಿಯಾಣದಲ್ಲಿ 25 ಲಕ್ಷ ಮತಗಳ ಕಳ್ಳತನ ನಡೆದಿದೆ. ಶೇ.12.5 ರಷ್ಟು ನಕಲಿ ಮತಗಳು, 93,000 ವಿಳಾಸಗಳು ಅಮಾನ್ಯವಾದವುಗಳು ಎಂದು ದಾಖಲೆ ಸಮೇತ ಮಾಹಿತಿ ನೀಡಿದ್ದಾರೆ.

**22 ಬಾರಿ ವೋಟ್:** ಒಬ್ಬ ಮಹಿಳೆ ಸೀಮಾ, ಸ್ವೀಟಿ, ಸರಸ್ವತಿ ಸೇರಿದಂತೆ ಹಲವು ಹೆಸರಿನಲ್ಲಿ 22 ಬಾರಿ ಮತ ಚಲಾಯಿಸಿದ್ದಾಳೆ, 10 ಬೂತ್ ನಲ್ಲಿ ಮತ ಚಲಾವಣೆಯಾಗಿದೆ. ಈ ಮಹಿಳೆ ಬ್ರೇಜಿಲ್‌ನ ಮಾಡೆಲ್ ಅನ್ನೋದು ನಂತರ ಗೊತ್ತಾಗಿದೆ. 25 ಲಕ್ಷ ಮತ ಕಳ್ಳತನ ಆಗಿದೆ ಅನ್ನೋದಕ್ಕೆ ಈಕೆಯೇ ಉದಾಹರಣೆ ಎಂದು ದಾಖಲೆ ಸಮೇತ ಸತ್ಯ ಸಂಗತಿಯನ್ನ ಬಿಚ್ಚಿಟ್ಟರು. ಒಂದೇ ಗುರುತಿನಲ್ಲಿ ಹಲವು ಮತಗಳನ್ನ ಚಲಾಯಿಸಲು ನಕಲಿ ಫೋಟೋಗಳನ್ನ ಬಳಸಲಾಗಿದೆ. ಹರಿಯಾಣ ಚುನಾವಣೆಯ 2 ಕೋಟಿ ಮತಗಳಲ್ಲಿ 25 ಲಕ್ಷ ಮತಗಳು ಕಳ್ಳತನವಾಗಿದೆ. ಪ್ರತಿ 8 ಮತದಾರರಲ್ಲಿ ಒಂದು ಮತ ನಕಲಿ ಆಗಿದೆ. ಒಂದು ಗುರುತಿನ ಚೀಟಿಯಲ್ಲಿ ಒಂದೇ ಕ್ಷೇತ್ರದಲ್ಲಿ ನೂರು ಮತಗಳು ಕಂಡುಬಂದಿವೆ ಇವೆಲ್ಲವೂ ಮತಗಳ್ಳತನಕ್ಕೆ ಉದಾಹರಣೆ ಎಂದು ರಾಗಾ ಬಾಂಬ್ ಹಾಕಿದರು.

**ರಾಹುಲ್ ಗಾಂಧಿ ಆರೋಪಕ್ಕೆ ಬಿಜೆಪಿ ಲೇವಡಿ**

ರಾಹುಲ್ ಗಾಂಧಿಯವರ ಆರೋಪಕ್ಕೆ ಕೇಂದ್ರ ಸಚಿವ ಕಿರಣ್ ರಿಜಿಜು ಕೂಡ ಪ್ರತಿಕ್ರಿಯಿಸಿದ್ದು, ''ರಾಹುಲ್ ಗಾಂಧಿ ಪ್ರತಿ ಬಾರಿ ತಾವು ಸಿಡಿಸುವ ಪರಮಾಣು ಬಾಂಬ್ ಸ್ಫೋಟಗೊಳ್ಳುತ್ತದೆ ಎಂದು ಹೇಳುತ್ತಾರೆ. ಆದರೆ ಅವರ ಪರಮಾಣು ಬಾಂಬ್ ಎಂದಿಗೂ ಸ್ಫೋಟಗೊಳ್ಳುವುದೇ ಇಲ್ಲ ಏಕೆ? ಅವರು ಯಾವುದೇ ವಿಷಯವನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ'' ಎಂದು ಅವರು ಟೀಕಿಸಿದ್ದಾರೆ.

''ಬಿಹಾರದ ಚುನಾವಣೆ ಸಮೀಪದಲ್ಲಿದೆ. ಬಿಹಾರದಲ್ಲಿ ಕಾಂಗ್ರೆಸ್ ಗಮನಸೆಳೆಯಲು ಏನೂ ಉಳಿದಿಲ್ಲ ಎಂಬುದು ಅವರಿಗೂ ಗೊತ್ತಿದೆ. ಹೀಗಾಗಿ, ಜನರ ಗಮನವನ್ನು ಬೇರೆಡೆ ಸೆಳೆಯಲು ಅವರು ಈಗ ಹರಿಯಾಣದ ವಿಷಯವನ್ನು ಪ್ರಸ್ತಾಪಿಸುತ್ತಿದ್ದಾರೆ. ಅವರು ಹೇಳಿದ್ದೆಲ್ಲ ಸುಳ್ಳು ಆರೋಪವಾದ್ದರಿಂದ ನಾನು ಆ ಬಗ್ಗೆ ಪ್ರತಿಕ್ರಿಯಿಸಲು ಬಯಸುವುದಿಲ್ಲ'' ಎಂದಿದ್ದಾರೆ.

''ರಾಹುಲ್ ಗಾಂಧಿ ಬ್ರೆಜಿಲ್ ಮಾಡೆಲ್‌ನದ್ದು ಎಂಬ ವಿದೇಶಿ ಮಹಿಳೆಯ ಉಲ್ಲೇಖವನ್ನೂ ಮಾಡಿದ್ದಾರೆ. ಚುನಾವಣೆಗಳ ಸಮಯದಲ್ಲಿ ರಾಹುಲ್ ಗಾಂಧಿ ವಿದೇಶಕ್ಕೆ ಹೋಗುತ್ತಾರೆ. ಸಂಸತ್ತಿನ ಅಧಿವೇಶನಗಳ ಸಮಯದಲ್ಲಿ ಅವರು ಕಾಂಬೋಡಿಯಾ ಮತ್ತು ಥೈಲ್ಯಾಂಡ್‌ನಂತಹ ಸ್ಥಳಗಳಿಗೆ ರಹಸ್ಯವಾಗಿ ಭೇಟಿ ನೀಡಿದ್ದರು. ಈಗ, ಬಿಹಾರ ಚುನಾವಣೆಯ ಸಮಯದಲ್ಲಿ ಅವರು ಕೊಲಂಬಿಯಾಕ್ಕೆ ಹೋಗಿದ್ದರು. ಆದ್ದರಿಂದ, ಅವರು ವಿದೇಶಕ್ಕೆ ಹೋದಾಗ ಅಲ್ಲಿಂದ ಕೆಲವು ವಿಚಾರಗಳನ್ನು ಇಲ್ಲಿಗೆ ತೆಗೆದುಕೊಂಡು ಬರುತ್ತಾರೆ. ಅವುಗಳನ್ನು ತಮ್ಮ ತಂಡಕ್ಕೆ ನೀಡುತ್ತಾರೆ.

ಅವರು ಈ ಆಧಾರರಹಿತ ನಿರೂಪಣೆಗಳನ್ನು ಸಿದ್ಧಪಡಿಸುತ್ತಾರೆ. ಈ ಮೂಲಕ ಅವರು ಎಲ್ಲರ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ. ರಾಜಕಾರಣಿಗಳು ಗಂಭೀರ ವಿಷಯಗಳ ಬಗ್ಗೆ ಮಾತನಾಡಬೇಕೇ ವಿನಃ ಇಂತಹ ವ್ಯರ್ಥ ವಿಷಯಗಳಲ್ಲಿ ತೊಡಗಬಾರದು. ಇದು ರಾಹುಲ್ ಗಾಂಧಿಯವರಿಗೆ ನನ್ನ ಮೊದಲ ಸಲಹೆ'' ಎಂದು ಕಿರಣ್ ರಿಜಿಜು ಹೇಳಿದ್ದಾರೆ. ಹಾಗೇ, ''ರಾಹುಲ್ ಗಾಂಧಿ ಭಾರತ ವಿರೋಧಿ ಶಕ್ತಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಆದರೆ, ಅವರು ಆಡುತ್ತಿರುವ ಆಟಗಳು ಎಂದಿಗೂ ಯಶಸ್ವಿಯಾಗುವುದಿಲ್ಲ'' ಎಂದು ಸಚಿವ ಕಿರಣ್ ರಿಜಿಜು ಆರೋಪಿಸಿದ್ದಾರೆ.



### ರಾಹುಲ್ ಗಾಂಧಿ ವಿದೇಶಕ್ಕೆ ಹೋಗುತ್ತಾರೆ



''ರಾಹುಲ್ ಗಾಂಧಿ ಬ್ರೆಜಿಲ್ ಮಾಡೆಲ್‌ನದ್ದು ಎಂಬ ವಿದೇಶಿ ಮಹಿಳೆಯ ಉಲ್ಲೇಖವನ್ನೂ ಮಾಡಿದ್ದಾರೆ. ಚುನಾವಣೆಗಳ ಸಮಯದಲ್ಲಿ ರಾಹುಲ್ ಗಾಂಧಿ ವಿದೇಶಕ್ಕೆ ಹೋಗುತ್ತಾರೆ. ಸಂಸತ್ತಿನ ಅಧಿವೇಶನಗಳ ಸಮಯದಲ್ಲಿ ಅವರು ಕಾಂಬೋಡಿಯಾ ಮತ್ತು ಥೈಲ್ಯಾಂಡ್‌ನಂತಹ ಸ್ಥಳಗಳಿಗೆ ರಹಸ್ಯವಾಗಿ ಭೇಟಿ ನೀಡಿದ್ದರು. ಈಗ, ಬಿಹಾರ ಚುನಾವಣೆಯ ಸಮಯದಲ್ಲಿ ಅವರು ಕೊಲಂಬಿಯಾಕ್ಕೆ ಹೋಗಿದ್ದರು. ಆದ್ದರಿಂದ, ಅವರು ವಿದೇಶಕ್ಕೆ ಹೋದಾಗ ಅಲ್ಲಿಂದ ಕೆಲವು ವಿಚಾರಗಳನ್ನು ಇಲ್ಲಿಗೆ ತೆಗೆದುಕೊಂಡು ಬರುತ್ತಾರೆ. ಅವುಗಳನ್ನು ತಮ್ಮ ತಂಡಕ್ಕೆ ನೀಡುತ್ತಾರೆ. ಅವರು ಈ ಆಧಾರರಹಿತ ನಿರೂಪಣೆಗಳನ್ನು ಸಿದ್ಧಪಡಿಸುತ್ತಾರೆ. ಈ ಮೂಲಕ ಅವರು ಎಲ್ಲರ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ. ರಾಜಕಾರಣಿಗಳು ಗಂಭೀರ ವಿಷಯಗಳ ಬಗ್ಗೆ ಮಾತನಾಡಬೇಕೇ ವಿನಃ ಇಂತಹ ವ್ಯರ್ಥ ವಿಷಯಗಳಲ್ಲಿ ತೊಡಗಬಾರದು. ಇದು ರಾಹುಲ್ ಗಾಂಧಿಯವರಿಗೆ ನನ್ನ ಮೊದಲ ಸಲಹೆ'' ಎಂದು ಕಿರಣ್ ರಿಜಿಜು ಹೇಳಿದ್ದಾರೆ.



ರಾಹುಲ್ ಗಾಂಧಿಯದ್ದು ಚೈಲ್ಡಿಶ್ ಹೇಳಿಕೆ. ರಾಹುಲ್ ಗಾಂಧಿ ಕರ್ನಾಟಕದಲ್ಲಿ ಒಂದು ಕ್ಷೇತ್ರ ಆಯ್ಕೆ ಮಾಡಿಕೊಂಡು ವೋಟ್‌ಚೋರಿ ಆಗಿದೆ ಅಂತ ಆರೋಪ ಮಾಡಿದ್ದರು. ಬಿ.ಆರ್ ಪಾಟೀಲ್ ಆಯ್ಕೆ ಮಾಡಿರುವ ಆಳಂದ ಕ್ಷೇತ್ರದ ಬಗ್ಗೆ ಮಾತಾಡಿದ್ದರು. ರಾಹುಲ್ ಗಾಂಧಿ ವೋಟ್‌ಚೋರಿ ಆಗಿ ನಮ್ಮವರು ಸೋತಿದ್ದಾರೆ. ಬೇರೆ ಯಾರೋ ಗೆದ್ದಿದ್ದಾರೆ ಅಂತ ಕ್ಷೇತ್ರ ಪಾಯಿಂಟ್ ಮಾಡಿ ಹೇಳ್ತಿಲ್ಲ. ರಾಹುಲ್ ಗಾಂಧಿ ಏನ್ ಮಾಡ್ತಾ ಇದ್ದಾರೆ. ಬಿಹಾರ ಚುನಾವಣೆಯಲ್ಲಿ ರಾಹುಲ್ ಗಾಂಧಿ ಆರ್ ಜೆಡಿ ಜೊತೆ ಕೈ ಜೋಡಿಸಿದ್ದಾರೆ. ಬಿಹಾರದಲ್ಲಿ ಆರ್ ಜೆಡಿ ತೀರಿಸೋಕೆ ರಾಹುಲ್ ಗಾಂಧಿ ಒಬ್ಬರೇ ಸಾಕು. ಅವರ ಮಾತುಗಳು, ಅವರ ಚೈಲ್ಡಿಶ್, ಬಾಲಿಶವಾದ ಹೇಳಿಕೆಗಳು ಅವರಿಬ್ಬರೇ ಬಿಹಾರ ಚುನಾವಣೆಯಲ್ಲಿ ಆರ್‌ಜೆಡಿಯನ್ನು ತೀರಿಸುತ್ತಾರೆ

-ನಿಖಿಲ್ ಕುಮಾರಸ್ವಾಮಿ
ಜೆಡಿಎಸ್ ಯುವ ಘಟಕದ ಅಧ್ಯಕ್ಷ

| | | | | |
|---|---|---|---|---|
| ಈ ದಿನದ ದರ | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹12,148/Gram24ct ₹11,135/Gram22ct | ಬೆಳ್ಳಿ: ₹150.50/Gram |



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ

### ಸೈಯದ್ ಅವರಿಂದ ದೇಗುಲ ಜೀರ್ಣೋದ್ಧಾರ

ಮುಸ್ಲಿಂ ಉದ್ಯಮಿ ಸೈಯದ್ ಸಾದತ್ ಉಲ್ಲಾ ಸಖಾಫ್ ಚನ್ನಪಟ್ಟಣದ ಬಸವೇಶ್ವರ ದೇಗುಲವನ್ನು 2 ಕೋಟಿ ವೆಚ್ಚದಲ್ಲಿ ನವೀಕರಿಸಿದ್ದು ಪ್ರತಿಯೊಬ್ಬರೂ ಅಭಿನಂದಿಸಲೇಬೇಕು. ಹಿಂದು-ಮುಸ್ಲಿಂ, ಹಿಂದು- ಕ್ರೈಸ್ತ, ವೀರಶೈವ ಲಿಂಗಾಯತ ಹಿಂದು ದ್ವೇಷದ ದುಳ್ಳುರಿಯಲ್ಲಿ ಬೆಂದ ನೊಂದ ಸಮಾಜಕ್ಕೆ ಇಂಥ ಪ್ರಕರಣಗಳು ದ್ವೇಷ ಮರೆಸಿ ಸಾಮರಸ್ಯದ ನೆಮ್ಮದಿಯ ಉಸಿರ ನೀಡುವವು. ಧರ್ಮವೆಂಬುದು ಕತ್ತಲೆಯ ಬದುಕಿಗೆ ಬೆಳಕ ಚೆಲ್ಲುವ ದೀವಿಗೆಯೇ ಹೊರತು ಕತ್ತಲೆ ತರುವ ಕಾರ್ಮೋಡವಲ್ಲ. ಚಾಮುಂಡೀ ಬೆಟ್ಟ ಹಿಂದುಗಳ ಸ್ವತ್ತಲ್ಲ, ಕುಂಕುಮಧಾರಣೆ ಇಸ್ಲಾಂ ನಲ್ಲಿ ಹೇಳಿಲ್ಲ ಎಂಬಂಥ ಹೇಳಿಕೆ ನೀಡಿದ್ದ ಜನನಾಯಕರಿಗೆ ಸೈಯದ್ ಸಾದತ್ ಅವರ ಈ ನಡೆ ಕಣ್ಣು ತೆರೆಸಲಿ. ಕುಂಕುಮ ಹಚ್ಚಿದರೆ, ಮೂರ್ತಿಪೂಜೆ ಮಾಡಿದರೆ ಬದುಕು ಕುಸಿಯುವುದೇ? ಇಂಥ ಸಾಮರಸ್ಯಕ್ಕೆ ಸಯ್ಯದರೇ ಮೊದಲಲ್ಲ. ಶಿಶುನಾಳ ಶರೀಫರು ಗೋವಿಂದ ಭಟ್ಟರ ಶಿಷ್ಯರಾಗಿ ಶಿವಯೋಗಿಯಾದರು. ನಿಜಾಮನ ಸಂಬಂಧಿ ಸಯ್ಯದ್ ಅಮೀನ್ ಸಿದ್ಧಾರೂಢರಿಂದ ಸಂನ್ಯಾಸ ಪಡೆದು ಕಬೀರದಾಸನಾಗಿ ಉಪನಿಷತ್ತುಗಳನ್ನು ಕನ್ನಡಿಸಿದನು. ಮಹಾಲಿಂಗಪುರದ ಇಬ್ರಾಹೀಂ ಸುತಾರ ಕನ್ನಡದ ಕಬೀರರೆನಿಸಿ ವೇದಾಂತದ ಪ್ರವಚನಗೈದರು. ಹೆತ್ತ ತಾಯಿ ಹೊತ್ತ ಭೂಮಿ ಸ್ವರ್ಗಕ್ಕಿಂತ ಹೆಚ್ಚು. ಈ ನೆಲದಲ್ಲಿ ಹುಟ್ಟಿ ಉಂಡುಟ್ಟು ಬೆಳೆದ ಪ್ರತಿಯೊಬ್ಬರೂ ಈ ನೆಲದ ಧರ್ಮಕ್ಕೆ ಕೃತಜ್ಞರಾಗಿರಬೇಕಾದುದು ನ್ಯಾಯ – ಕರ್ತವ್ಯ!

# ಮಾಜಿ ಮುಖ್ಯಮಂತ್ರಿ ಸಂಸದ ಬೊಮ್ಮಾಯಿ ಆರೋಪ


## ಕಬ್ಬಿನ ದರ ನಿಗದಿ ಪಡಿಸಲು ತಕ್ಷಣ ಸಿಎಂ ಮಧ್ಯ ಪ್ರವೇಶಿಸಲಿ: ಬಸವರಾಜ ಬೊಮ್ಮಾಯಿ ಆಗ್ರಹ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ಕಬ್ಬು ಬೆಳೆಗಾರರ ಬೇಡಿಕೆಯಂತೆ ಪ್ರತಿ ಟನ್ ಕಬ್ಬಿಗೆ 3500 ರೂ. ದರ ನೀಡಲು ಸ್ವತಃ ಸಿದ್ದರಾಮಯ್ಯ ಕೂಡಲೇ ಮಧ್ಯಪ್ರವೇಶ ಮಾಡಬೇಕು. ಸಕ್ಕರೆ ಕಾರ್ಖಾನೆ ಮಾಲೀಕರು ಪ್ರತಿ ಟನ್ ಕಬ್ಬಿಗೆ 3300 ರೂ. ಹಾಗೂ ರಾಜ್ಯ ಸರ್ಕಾರ 200. ರೂ. ನೀಡಿ, ರೈತರ ಬೇಡಿಕೆ ಈಡೇರಿಸಬೇಕು ಎಂದು ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ರಾಜ್ಯದ ಕಬ್ಬು ಬೆಳೆಗಾರರು ನ್ಯಾಯ ಸಮ್ಮತ ಬೆಲೆ ನಿಗದಿ ಆಗಬೇಕೆಂದು ಏಳನೇ ದಿನ ಹೋರಾಟ ಮಾಡುತ್ತಿದ್ದಾರೆ. ವ್ಯಾಪಕ ಹೋರಾಟ ಆಗುತ್ತಿದೆ. ನಾನು ಈಗಾಗಲೇ ಪ್ರತಿ ಟನ್ ಕಬ್ಬಿಗೆ 3500 ರೂ. ದರ ನಿಗದಿ ಮಾಡುವಂತೆ ಮುಖ್ಯಮಂತ್ರಿಗಳಿಗೆ ಆಗ್ರಹಿಸಿದ್ದೇನೆ. ಆದರೆ, ಸಿಎಂ ರೈತರ ಬಗ್ಗೆ ಅಸಡ್ಡೆ ಭಾವನೆ ವ್ಯಕ್ತಪಡಿಸಿ ತಮ್ಮ ರಾಜಕಾರಣವನ್ನು ಸಿಎಂ ಸ್ಥಾನ ಉಳಿಸಿಕೊಳ್ಳಲು ಸಮಯ ಸಿಗುತ್ತಿಲ್ಲ ಹೀಗಾಗಿ ರೈತರ ಸಮಸ್ಯೆ ಪರಿಹರಿಸಲು ಅವರಿಗೆ ಆಗುತ್ತಿಲ್ಲ ಎಂದು ಆರೋಪಿಸಿದ್ದಾರೆ. ರೈತರ ಕಬ್ಬು ಬೆಳೆಗಾರರ ಸಮಸ್ಯೆ ಪ್ರತಿ ವರ್ಷ ಆಗುತ್ತಿರುವುದು ಗಮನಾರ್ಹ.

**ರೈತರ ಬೇಡಿಕೆ ತಕ್ಕಂತೆ ದರ ನಿಗದಿ**

ಕೇಂದ್ರ ಸರ್ಕಾರ ಎಫ್‌ಆರ್‌ಪಿ ನಿಗದಿ ಮಾಡಿದ ನಂತರ ಸಕ್ಕರೆ ಕಾರ್ಖಾನೆಗಳು ಎಥೆನಾಲ್, ವಿದ್ಯುತ್ ಸೇರಿದಂತೆ ಇತರೆ ಉಪ ಉತ್ಪನ್ನ ತಯಾರಿಸುತ್ತಾರೆ. ಹೀಗಾಗಿ ರೈತರು ಕೇಳುವ ದರವನ್ನು ನೀಡಲು ಸಾಧ್ಯವಿದೆ. ರಾಜ್ಯ ಸರ್ಕಾರ ಕಬ್ಬಿನ ದರವನ್ನು ನಿಗದಿ ಮಾಡಬೇಕು. ರಾಜ್ಯ ಸರ್ಕಾರಕ್ಕೆ ಕಾನೂನು ಪ್ರಕಾರ ದರ ನಿಗದಿ ಮಾಡಲು ಅಧಿಕಾರ ಇದೆ. ರೈತರ ಬೇಡಿಕೆ ತಕ್ಕಂತೆ ದರ ನಿಗದಿ ಮಾಡಿ ಸರ್ಕಾರ ಆದೇಶ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ಸರ್ಕಾರ 2 ರೀತಿಯಲ್ಲಿ ಪರಿಹಾರ ಕೊಡಬಹುದು ಸುಮಾರು 27 ಸಾವಿರ ಕೋಟಿ ರೂ. ಸರ್ಕಾರಕ್ಕೆ ಸಕ್ಕರೆ ಹಾಗೂ ಇತರ ಉಪ ಉತ್ಪನ್ನಗಳ ಮೂಲಕ ಆದಾಯ ಬರುತ್ತದೆ. ಇದರಲ್ಲಿ ಸರ್ಕಾರ ಪ್ರತಿ ಟನ್‌ಗೆ 200 ರೂಪಾಯಿ ಕೊಡಬೇಕು. ಸಕ್ಕರೆ ಕಾರ್ಖಾನೆ ಮಾಲಿಕರು ಪ್ರತಿ ಟನ್ ಕಬ್ಬಿಗೆ 3300 ರೂ. ಕೊಡಲು ಮುಂದೆ ಬರಬೇಕು. ಇದರಿಂದ ರೈತರಿಗೆ ಪ್ರತಿ ಟನ್ ಕಬ್ಬಿಗೆ 3500 ರೂ. ದರ ನೀಡಲು ಸಾಧ್ಯವಾಗುತ್ತದೆ. ಎರಡನೇಯದಾಗಿ ಸಕ್ಕರೆಯ ಜತೆಗೆ ವಿದ್ಯುತ್ ಉತ್ಪಾದನೆಯಾಗುತ್ತದೆ. ಮಹಾರಾಷ್ಟ್ರದಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಪಿಪಿಎ ಅಗ್ರಿಮೆಂಟ್ ಆಗಿದೆ. ಅಲ್ಲಿ ಕಾರ್ಖಾನೆ ಮಾಲೀಕರಿಗೆ ಪ್ರತಿ ಯುನಿಟ್‌ಗೆ 5.5 ರೂ. ಸಿಗುತ್ತದೆ. ಅದೇ ರೀತಿ ರಾಜ್ಯದಲ್ಲಿ ಒಪ್ಪಂದ ಮಾಡಿಕೊಂಡರೆ ಈಗ ನೀಡುತ್ತಿರುವ ಪ್ರತಿ ಯುನಿಟ್‌ಗೆ 3 ರೂ ಬದಲು 5.5 ರೂ. ದೊರೆಯುತ್ತದೆ. ಇದರಿಂದ ಕಬ್ಬಿಗೆ ಹೆಚ್ಚಿಗೆ ದರ ಕೊಡಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ತನಗಿರುವ ಅಧಿಕಾರ ಚಲಾವಣೆ ಮಾಡಿ, ಕಬ್ಬಿನ ಕಾರ್ಖಾನೆ ಮಾಲೀಕರ ಜತೆ ಸಭೆ ನಡೆಸಿ ದರ ಪಟ್ಟಿಯನ್ನು ರೈತರ ನ್ಯಾಯ ಸಮ್ಮತ ಬೇಡಿಕೆಯಂತೆ 3500 ರಿಂದ ದರ ಪಟ್ಟಿ ನಿಗದಿ ಮಾಡಬೇಕು. ಇಲ್ಲದಿದ್ದರೆ ರೈತರ ಕಟ್ಟೆ ಒಡೆದರೆ ರಾಜ್ಯದ ರೈತರ ಮೇಲೆ ದೊಡ್ಡ ಪರಿಣಾಮ ಬಿರುತ್ತದೆ. ವಿಳಂಬ ಮಾಡದೇ ಸರ್ಕಾರ ಪರಿಹರಿಸಬೇಕು ಎಂದು ಒತ್ತಾಯಿಸಿದ್ದಾರೆ.



**ರೈತರ ಪರ ಹೋರಾಟ**

ಬಿಜೆಪಿ ಯಾವಾಗಲೂ ರೈತರ ಪರ ಹೋರಾಟದಲ್ಲಿ ನಿಲ್ಲುತ್ತದೆ. ಈಗಾಗಲೇ ಬಿಜೆಪಿ ರಾಜ್ಯಾಧ್ಯಕ್ಷರು ಪ್ರತಿಭಟನೆಯಲ್ಲಿ ಪಾಲ್ಗೊಂಡಿರುವುದು ಸಾಕ್ಷಿ. ಇದರ ಜತೆಗೆ ಇನ್ನಿತರ ವಿಚಾರಗಳನ್ನು ಚರ್ಚೆ ಮಾಡಬೇಕು. ಸಕ್ಕರೆ ನುರಿಸಲು ಕೂಡಲೇ ಆರಂಭಿಸಬೇಕು. ಈ ವಿಚಾರದಲ್ಲಿ ಸಿಎಂ ಕೂಡಲೇ ಮಧ್ಯ ಪ್ರವೇಶ ಮಾಡಬೇಕು. ಸರ್ಕಾರದ ಮಂತ್ರಿಗಳು ಒಂದಿಲ್ಲೊಂದು ರೀತಿಯಲ್ಲಿ ಸಕ್ಕರೆ ವ್ಯವಹಾರದ ಹಿತಾಸಕ್ತಿಯಲ್ಲಿ ಭಾಗಿಯಾಗಿರುವುದರಿಂದ ಸ್ವತಃ ಮುಖ್ಯಮಂತ್ರಿ ಮಧ್ಯಸ್ಥಿಕೆ ವಹಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

## ಮಹಿಳೆ ಮೇಲೆ ಹಲ್ಲೆ: ಮೂವರು ಪೊಲೀಸರ ಅಮಾನತು, ಪಿಎಸ್‌ಐ ಲೋಪ ಪತ್ತೆ

• **ಉದಯವಾಹಿನಿ, ಬೆಂಗಳೂರು**

ಶೋಭಾ ಡ್ರಿಮ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ವೊಂದರಲ್ಲಿ ಮನೆ ಕೆಲಸದಾಕೆಯನ್ನು ಕಳ್ಳತನ ಪ್ರಕರಣದಲ್ಲಿ ಠಾಣೆಗೆ ಕರೆದೊಯ್ದು ಹಲ್ಲೆ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ವರ್ತೂರು ಪೊಲೀಸ್ ಠಾಣೆಯ ಅಪರಾಧ ವಿಭಾಗದ ಮೂವರು ಪೊಲೀಸರನ್ನು ವೈಟ್ ಫೀಲ್ಡ್ ಡಿಸಿಪಿ ಪರಶುರಾಮ್ ಅವರು ಅಮಾನತುಗೊಳಿಸಿ ರಾತ್ರಿ ಆದೇಶಿಸಿದ್ದಾರೆ.ಗೃಹ ಸಚಿವ ಜಿ.ಪರಮೇಶ್ವರ ಹಾಗೂ ಸೀಮಾಂತ್ ಕುಮಾರ್ ಸಿಂಗ್ ಅವರು ಪ್ರಕರಣದ ತನಿಖೆಗೆ ಆದೇಶಿಸಿದ್ದರು. ಮಾರತ್‌ಹಳ್ಳಿ ವಿಭಾಗದ ಎಸಿಪಿಯವರು ತನಿಖೆ ನಡೆಸಿ ವರದಿ ಸಲ್ಲಿಸಿದ ಬೆನ್ನಲ್ಲೇ ಸಂಜಯ್ ರಾಥೋಡ್, ಸಂತೋಷ್ ಕುದ್ರಿ ಅರ್ಚನಾ ಅವರನ್ನು ಅಮಾನತು ಮಾಡಲಾಗಿದೆ. ಪಿಎಸ್‌ಐ ಮೌನೇಶ್ ದೊಡ್ಡಮನಿ ಅವರು ಎನ್‌ಸಿಆರ್ ದಾಖಲಿಸಿಕೊಂಡು ಠಾಣೆಯಿಂದ ಹೊರಹೋಗಿ ಲೋಪ ಎಸಗಿದ್ದಾರೆ. ಅವರ ವಿರುದ್ಧ ರೂಲ್ಸ್ 7 ಜಾರಿ ಮಾಡಲಾಗಿದೆ ಎಂದು ಡಿಸಿಪಿ ತಿಳಿಸಿದ್ದಾರೆ. ಶೋಭಾ ಡ್ರಿಮ್ ಅಪಾರ್ಟ್‌ಮೆಂಟ್‌ನಲ್ಲಿ ಪ್ರಿಯಾಂಕಾ ಅವರಿಗೆ ಸೇರಿದ ಫ್ಲ್ಯಾಟ್‌ನಲ್ಲಿ ಹೊರರಾಜ್ಯದ ಸುಂದರಿ ಬೀಬಿ (34) ಅವರು ಕೆಲಸ ಮಾಡುತ್ತಿದ್ದರು. ಫ್ಲ್ಯಾಟ್‌ನಲ್ಲಿ ಕಸ ಗುಡಿಸುವಾಗ ಅವರಿಗೆ ರೂ.100 ಸಿಕ್ಕಿತ್ತು. ಅದನ್ನು ಮಾಲೀಕರಿಗೆ ವಾಪಸ್ ಕೊಟ್ಟಿದ್ದರು. ಆದರೆ, ಹಣದ ಜೊತೆಗೆ ಮನೆಯಲ್ಲಿ ವಜ್ರದ ಉಂಗುರ ಸಹ ಕಳ್ಳತನವಾಗಿದೆ ಎಂದು ಆರೋಪಿಸಿದ್ದ ಮಾಲೀಕರು, ವರ್ತೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಬಳಿಕ ಸುಂದರಿ ಬೀಬಿ ಹಾಗೂ ಅವರ ಪತಿಯನ್ನು ಠಾಣೆಗೆ ಕರೆದೊಯ್ದು ಪೊಲೀಸರು ಹಲ್ಲೆ ನಡೆಸಿದ್ದಾರೆ ಎಂಬ ಆರೋಪವಿತ್ತು. ಪ್ರಕರಣದ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ರಾಜ್ಯ ಮಹಿಳಾ ಆಯೋಗವೂ ಸೂಚನೆ ನೀಡಿತ್ತು.

## ಪೊಲೀಸ್ ಠಾಣೆಯಲ್ಲಿ ಮನೆ ಕೆಲಸದಾಕೆ ಮೇಲೆ ಹಲ್ಲೆ, ಮೂವರು ಪೊಲೀಸರ ಅಮಾನತು!

• **ಉದಯವಾಹಿನಿ, ಬೆಂಗಳೂರು**

ಕಳ್ಳತನದ ಆರೋಪದ ಮೇಲೆ ಪೊಲೀಸ್ ಠಾಣೆಯೊಳಗೆ 34 ವರ್ಷದ ಮನೆಕೆಲಸದಾಕೆಯ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಮೂವರು ಪೊಲೀಸರನ್ನು ಅಮಾನತುಗೊಳಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ. ವರ್ತೂರು ಪೊಲೀಸ್ ಠಾಣೆಗೆ ಸೇರಿದ ಸಂಜಯ್ ರಾಥೋಡ್, ಸಂತೋಷ್ ಕುದರಿ ಮತ್ತು ಅರ್ಚನಾ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಮಾರತ್ ಹಳ್ಳಿಯ ಸಹಾಯಕ ಪೊಲೀಸ್ ಆಯುಕ್ತೆ ಪ್ರಿಯದರ್ಶಿನಿ ಮಂಗಳವಾರ ಸಲ್ಲಿಸಿದ ತನಿಖಾ ವರದಿಯ ಆಧಾರದ ಮೇಲೆ ಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಕ್ಟೋಬರ್ 30 ರಂದು ಮಹಿಳೆಯೊಬ್ಬರು ತಮ್ಮ ಮನೆಕೆಲಸದಾಕೆ ಪಶ್ಚಿಮ ಬಂಗಾಳ ಮೂಲದ ಸುಂದರಿ ಬೀಬಿ ವಜ್ರದ ಉಂಗುರವನ್ನು ಕದ್ದಿದ್ದಾರೆ ಎಂದು ಆರೋಪಿಸಿ ವರ್ತೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ದೂರಿನ ನಂತರ ಪೊಲೀಸರು ಎನ್ ಸಿಆರ್ ಗಂಭೀರವಲ್ಲದ ಪ್ರಕರಣ ದಾಖಲಿಸಿದ್ದರು. ತದನಂತರ ಕಳೆದ ಮೂರು ತಿಂಗಳಿನಿಂದ ಟೆಕ್ಕಿ ದಂಪತಿಗಳ ಬಳಿ ಕೆಲಸ ಮಾಡುತ್ತಿದ್ದ ಬೀಬಿಯನ್ನು ಪೊಲೀಸ್ ಠಾಣೆಗೆ ಕರೆಸಲಾಗಿದೆ. ಅವರು ತಮ್ಮ ಪತಿಯೊಂದಿಗೆ ಠಾಣೆಗೆ ಹೋದಾಗ ಮೊದಲ ಮಹಡಿಯಲ್ಲಿ ಪೊಲೀಸ್ ಸಿಬ್ಬಂದಿ ಅವರನ್ನು ಬಂಧಿಸಿ ಹಲ್ಲೆ ನಡೆಸಿದ್ದಾರೆ ಎಂದು ಅಧಿಕಾರಿ ಹೇಳಿದರು.

## ಸಾರ್ವಜನಿಕ ಆಸ್ತಿ ಬಳಸಲು ಪೂರ್ವಾನುಮತಿ ಕಡ್ಡಾಯ: ಆದೇಶ ಕಾಯ್ದಿರಿಸಿದ ಹೈಕೋರ್ಟ್

• **ಉದಯವಾಹಿನಿ, ಬೆಂಗಳೂರು**

ಖಾಸಗಿ ಸಂಘ ಸಂಸ್ಥೆಗಳು, ಸಂಘಟನೆಗಳು ಸರ್ಕಾರದ ಸ್ಥಳ, ಆವರಣ, ಸಾರ್ವಜನಿಕ ಆಸ್ತಿಗಳನ್ನು ಬಳಸುವ ಮುನ್ನ ಕಡ್ಡಾಯವಾಗಿ ಪೂರ್ವಾನುಮತಿ ಪಡೆಯಬೇಕು' ಎಂಬ ರಾಜ್ಯ ಸರ್ಕಾರದ ಆದೇಶದ ಅನುಷ್ಠಾನಕ್ಕೆ ತಡೆ ನೀಡಿರುವುದನ್ನು ಪ್ರಶ್ನಿಸಲಾದ ಮೇಲ್ಮನವಿ ವಿಚಾರಣೆ ಪೂರ್ಣಗೊಳಿಸಿರುವ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಆದೇಶ ಕಾಯ್ದಿರಿಸಿದೆ.ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿರುವ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಸ್.ಜಿ. ಪಂಡಿತ್ ಹಾಗೂ ಕೆ.ಬಿ. ಗೀತಾ ಅವರಿದ್ದ ವಿಭಾಗೀಯ ನ್ಯಾಯಪೀಠ (ಧಾರವಾಡ) ವಿಚಾರಣೆ ನಡೆಸಿ ಈ ಕುರಿತ ಆದೇಶ ಕಾಯ್ದಿರಿಸಿದೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಚಟುವಟಿಕೆಗಳಿಗೆ ನಿರ್ಬಂಧ ಹೇರುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ 2025ರ ಅಕ್ಟೋಬರ್ 18ರಂದು ಈ ಸಂಬಂಧ ಆದೇಶ ಹೊರಡಿಸಿತ್ತು. ರಾಜ್ಯ ಸಚಿವ ಸಂಪುಟದ ಈ ನಿರ್ಣಯವನ್ನು ಪ್ರಶ್ನಿಸಿ ಹುಬ್ಬಳ್ಳಿಯ, ಪುನಃಶ್ಚತನ ಸೇವಾ ಸಂಸ್ಥೆ' ಅಧ್ಯಕ್ಷ ವಿನಾಯಕ ಮತ್ತು ವಿ ಕೇರ್ ಫೌಂಡೇಷನ್' ಅಧ್ಯಕ್ಷ ಗಂಗಾಧರಯ್ಯ, ಧಾರವಾಡದ ರಾಜೀವ ಮಲ್ಹಾರ ಕುಲಕರ್ಣಿ ಹಾಗೂ ಬೆಳಗಾವಿಯ ಉಮಾ ಸತ್ಯಜಿತ್ ಚವಾಣ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಧ್ಯಂತರ ತಡೆ ನೀಡಿತ್ತು.

## ರೂ.75 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

• **ಉದಯವಾಹಿನಿ, ಬೆಂಗಳೂರು**

ಬಂಡೇಪಾಳ್ಯ, ಮಲ್ಲೇಶ್ವರ ಠಾಣೆ ಪೊಲೀಸರು ನಾಲ್ಕು ಪ್ರತ್ಯೇಕ ಪ್ರಕರಣಗಳಲ್ಲಿ ಕಾರ್ಯಾಚರಣೆ ನಡೆಸಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ವಿದೇಶಿ ಪ್ರಜೆ ಸೇರಿ ಐವರನ್ನು ಬಂಧಿಸಿದ್ದಾರೆ. ನೈಜೀರಿಯಾ ದೇಶದ ಇಬಾನುಗೊ(35) ಎಂಬಾತನನ್ನು ಬಂಡೇಪಾಳ್ಯ ಠಾಣೆ ಪೊಲೀಸರು ಬಂಧಿಸಿ 75 ಲಕ್ಷ ಮೌಲ್ಯದ 752 ಗ್ರಾಂ ಎಂಡಿಎಂಎ, 8 ಗ್ರಾಂ ಕೋಕೇನ್ ಹಾಗೂ ಒಂದು ಬೈಕ್ ವಶಕ್ಕೆ ಪಡೆದುಕೊಂಡಿದ್ದಾರೆ. 2018ರಲ್ಲಿ ವ್ಯವಹಾರಿಕ ವೀಸಾ ಪಡೆದು ಭಾರತಕ್ಕೆ ಬಂದಿದ್ದ ಆರೋಪಿ, ದೆಹಲಿಯಲ್ಲಿ ಬಟ್ಟೆ ವ್ಯಾಪಾರ ಮಾಡಿಕೊಂಡಿದ್ದ. ಬಳಿಕ ಮೂರು ತಿಂಗಳ ಹಿಂದೆ ನಗರಕ್ಕೆ ಬಂದು ಬಂಡೇಪಾಳ್ಯದಲ್ಲಿ ಸ್ನೇಹಿತರ ಮನೆಯಲ್ಲಿ ವಾಸವಾಗಿದ್ದ. ಅಪರಿಚಿತರ ಮೂಲಕ ಮಾದಕ ವಸ್ತುಗಳಾದ ಎಂಡಿಎಂಎ ಮತ್ತು ಕೋಕೇನ್‌ಗಳನ್ನು ತರಿಸಿಕೊಂಡು ಟೆಕಿ, ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಇತರೆ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

## ಮತ್ತೆ ನಂದಿನಿ ಹಾಲಿನ ದರ ಏರಿಕೆ: ಸುಳಿವು ಕೊಟ್ಟ ಡಿಕೆ ಸುರೇಶ್ ಹೇಳಿದ್ದೇನು

• **ಉದಯವಾಹಿನಿ, ಬೆಂಗಳೂರು**

ರಾಜ್ಯದಲ್ಲಿ ಮತ್ತೆ ನಂದಿನಿ ಹಾಲಿನ ದರ ಏರಿಕೆಯಾಗುವ ಸಾಧ್ಯತೆ ಇದ್ದು ಈ ಬಗ್ಗೆ ಸ್ವತಃ ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಮಾಹಿತಿ ನೀಡಿದ್ದಾರೆ. ಹಾಲಿನ ದರ ಹೆಚ್ಚಳ ಬಗ್ಗೆ ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಪರೋಕ್ಷವಾಗಿ ಸುಳಿವು ನೀಡಿದ್ದು, ಹಾಲಿನ ದರ ಏರಿಕೆಗೆ ಪ್ರಸ್ತಾವನೆ ಸಲ್ಲಿಸಿಲ್ಲ. ನಾವು ಮಂಡಳಿಗೆ ಮನವಿ ಸಲ್ಲಿಸಿದ್ದೇವೆ ಎಂದು ಹೇಳಿದ್ದಾರೆ.

ನಮ್ಮ ರಾಜ್ಯದಲ್ಲಿ ಮಾತ್ರ ಕಡಿಮೆ ಬೆಲೆ ಇದೆ ಬೇರೆ ರಾಜ್ಯಗಳಲ್ಲಿ ಹಾಲಿನ ದರ ಇನ್ನೂ ಹೆಚ್ಚಿದೆ. ಹಾಲಿನ ದರ ಏರಿಕೆಗೆ ಪ್ರಸ್ತಾವನೆ ಸಲ್ಲಿಸಿಲ್ಲ. ನಾವು ಮಂಡಳಿಗೆ ಮನವಿ ಸಲ್ಲಿಸಿದ್ದೇವೆ ಇಷ್ಟು ಅಂತ ದರದ ಬಗ್ಗೆ ಹೇಳಿಲ್ಲ. ಅರ್ಧ ಲೀಟರ್ ಮಾರಿದರೆ ನಷ್ಟವಾಗುತ್ತದೆ. ಒಂದು ಲೀಟರ್ ಹಾಲು ಮಾರಿದರೆ ಲಾಭ ಆಗುತ್ತದೆ. ತುಪ್ಪ ಇವತ್ತು ದರ ಏರಿಕೆ ಮಾಡಲಾಗಿದ್ದು, ಬೇರೆ ಕಂಪನಿಯ ಹಾಲು ಆನ್ ಲೈನ್ ಮಾರ್ಕೆಟಿಂಗ್ ಜಾಸ್ತಿ ಆಗಿದ್ದು, ನಾವು ರೈತರಿಗೆ ಹಾಲು ಕೂಡಲೇ ಹಣ ಕೊಡಬೇಕು. ಬೇರೆ ರಾಜ್ಯಗಳು ಹೆಚ್ಚು ಹಣ ಬಾಕಿ ಉಳಿಸಿಕೊಂಡಿಲ್ಲ ಅನ್ನುತ್ತೆ ಎಂದು ಡಿಕೆ ಸುರೇಶ್ ಹೇಳಿದರು.



**50 ಲಕ್ಷ ಲೀಟರ್ ಹಾಲಿಗೆ ನಮ್ಮ ಕೈಯಿಂದಲೇ ರೈತರಿಗೆ ಹಣ ಕೊಡುತ್ತಿದ್ದೇವೆ:** ನಮ್ಮಲ್ಲಿ 95 ಲಕ್ಷದಿಂದ 1 ಕೋಟಿ ಲೀಟರ್ ಹಾಲು ಉತ್ಪತ್ತಿಯಾಗುತ್ತದೆ. ಆದರೆ 50 ಲಕ್ಷ ಲೀಟರ್ ಹಾಲು ಮಾತ್ರ ಮಾರಾಟ ಆಗುತ್ತದೆ. ಸರ್ಕಾರ ಹಾಲಿನ ಮೇಲೆ ದರ ಹೆಚ್ಚಳ ಮಾಡಿರುವ 4 ರುಪಾಯಿಯನ್ನ ರೈತರಿಗೆ ಕೊಡಲು ಸೂಚಿಸಿದ್ದೇವೆ.

50 ಲಕ್ಷ ಲೀಟರ್ ಮಾರಾಟ ಮಾಡುವುದಕ್ಕೆ ಮಾತ್ರ ನಮಗೆ ಹಣ ಬರುತ್ತಿದೆ. ಉಳಿದ 50 ಲಕ್ಷ ಲೀಟರ್ ಹಾಲಿಗೆ ನಮ್ಮ ಕೈಯಿಂದ ರೈತರಿಗೆ ಹಣ ಕೊಡುತ್ತಿದ್ದೇವೆ. ಸದ್ಯ ಬೆಣ್ಣೆ ಮತ್ತು ತುಪ್ಪಕ್ಕೆ ಬೇಡಿಕೆ ಇದ್ದು ಈಗ ನಾವು ತುಪ್ಪಕ್ಕೆ ನಿಗದಿ ಮಾಡಿರುವ ಮಾರುಕಟ್ಟೆಗಿಂತ ಕಡಿಮೆಯಿದೆ. ಆದರೆ ಗುಣಮಟ್ಟದಲ್ಲಿ ನಾವೇ ಮುಂಚೂಣಿಯಲ್ಲಿದ್ದೇವೆ ಎಂದರು.

ಒಕ್ಕೂಟಗಳ ಮನವಿ ಮೇರೆಗೆ ತುಪ್ಪದ ದರ ಜಾಸ್ತಿ ಮಾಡಲಾಗಿದೆ. ಹಾಲಲ್ಲೂ ಕೆಲವು ಕಡೆ ನಮಗೆ ನಷ್ಟವಾಗುತ್ತಿದೆ. ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತದೆ ನೋಡಬೇಕಿದೆ. ನಮಗೆ ಹಾಲು ಉತ್ಪಾದಕರು ಹಾಗೂ ಒಕ್ಕೂಟಗಳು ದರ ಹೆಚ್ಚಳಕ್ಕೆ ಮನವಿ ಮಾಡಿದ್ದಾರೆ. ಹಾಲು ದರ ಏರಿಕೆ ಮಾಡಲು ಮನವಿ ಮಾಡಿದ್ದೇವೆ.

## ಮದ್ಯ ಸೇವನೆ ಮಾಡಿ ಬರುತ್ತಿದ್ದ ಚಾಲಕರಿಂದ ಲಂಚ




• **ಉದಯವಾಹಿನಿ, ಬೆಂಗಳೂರು**

ಮದ್ಯದ ಮತ್ತಿನಲ್ಲಿ ಕೆಲಸಕ್ಕೆ ಬರುತ್ತಿದ್ದ ಎಲೆಕ್ಟ್ರಿಕ್ ಬಸ್ ಡ್ರೈವರ್‌ಗಳ ಬಳಿ ಲಂಚ ಪಡೆದು ಕರ್ತವ್ಯಕ್ಕೆ ನಿಯೋಜನೆ ಮಾಡುತ್ತಿದ್ದ ಡಿಪೋ ಮ್ಯಾನೇಜರ್ ಸೇರಿದಂತೆ 9 ಮಂದಿಯನ್ನು ಅಮಾನತುಗೊಳಿಸಿದೆ. ಅಕ್ಟೋಬರ್ 13ರಂದು ಖಾಸಗಿ ಸುದ್ದಿವಾಹಿತಿಯೊಂದು ಈ ಬಗ್ಗೆ ವರದಿ ಪ್ರಕಟಿಸಿತ್ತು. ವರದಿ ಬಂದ ಬೆನ್ನಲ್ಲೇ ಬಿಎಂಟಿಸಿ, ಕಠಿಣ ಕ್ರಮವನ್ನು ತೆಗೆದುಕೊಂಡಿದೆ. ಡಿಪೋ- 35ರ ಎಲೆಕ್ಟ್ರಿಕ್ ಬಸ್‌ಗಳ

ಕೆಲವು ಚಾಲಕರು ಮದ್ಯ ಸೇವಿಸಿ ಕರ್ತವ್ಯಕ್ಕೆ ಬರುತ್ತಿದ್ದರು. ಹೀಗಿದ್ದರೂ ಅಧಿಕಾರಿಗಳು ಚಾಲಕರಿಂದ ಸಾವಿರಾರು ರೂ. ಲಂಚ ಪಡೆದು ಕರ್ತವ್ಯಕ್ಕೆ ಹಾಜರಾಗಲು ಅವಕಾಶ ನೀಡುತ್ತಿದ್ದರು. ನಿಯಮಗಳ ಪ್ರಕಾರ ಬಸ್ ಚಾಲನೆ ಮಾಡಲು ಡಿಪೋಗೆ ಬರುವ ಪ್ರತಿ ಚಾಲಕನನ್ನು ಮದ್ಯ ಸೇವನೆ ಸಂಬಂಧ ತಪಾಸಣೆ ನಡೆಸುವುದು ಕಡ್ಡಾಯವಾಗಿದೆ. ಮದ್ಯ ಸೇವನೆ ಮಾಡಿ ಬಂದಿದ್ದರೆ, ಅಂತಹವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಹೀಗಿದ್ದರೂ ಮದ್ಯ ಸೇವನೆ ಮಾಡಿದ ಚಾಲಕರಿಂದ ಲಂಚದ ಹಣ ಪಡೆದು ಕರ್ತವ್ಯಕ್ಕೆ ಹಾಜರಾಗಲು ಅನುಮತಿ ನೀಡುವ ಮೂಲಕ ಬಿಎಂಟಿಸಿ ಅಧಿಕಾರಿಗಳೇ ಜನರ ಜೀವಗಳ ಜೊತೆ ಚಲ್ಲಾಟ ಆಡುತ್ತಿದ್ದರು.

**ಯಾರೆಲ್ಲ ಸಸ್ಪೆಂಡ್:** ಸಂಚಾರ ನಿರೀಕ್ಷಕ ಶ್ರೀನಿವಾಸ, ಘಟಕ ವ್ಯವಸ್ಥಾಪಕ ಎಂ.ಜಿ ಕೃಷ್ಣ, ಡಿ.ಇ.ಎಸ್. ಅರುಣ್ ಕುಮಾರ್, ಕಿರಿಯ ಸಹಾಯಕಿ ಪ್ರತಿಭಾ ಕೆ.ಎಸ್. ಕ.ರಾ.ಸಾ.ಹವಲ್ದಾರ್ ಮಂಜುನಾಥ ಎಂ. ಕ.ರಾ.ಸಾ. ಪೇದೆಗಳಾದ ಮಂಜುನಾಥ ಎಸ್‌ಜಿ. ಚೇತನಕುಮಾರ್, ಪುನೀತ್ ಕುಮಾರ್, ಲಕ್ಷ್ಮೀ ಕೆ. ಅವರನ್ನು ಅಮಾನತು ಮಾಡಿ ಬಿಎಂಟಿಸಿ ಆದೇಶಿಸಿದೆ. ಬೆಂಗಳೂರು ನಗರದಲ್ಲಿ ಮೇಲಿಂದ ಮೇಲೆ ಬಿಎಂಟಿಸಿ ಬಸ್‌ಗಳು ಅಪಘಾತಕ್ಕೀಡಾಗುತ್ತಿರುವ ಹೊತ್ತಿನಲ್ಲೇ ಈ ಅಘಾತಕಾರಿ ಪ್ರಕರಣ ಬಯಲಾಗಿದೆ.

## ಈಜಿಪುರ ಫ್ಲೈಓವರ್ ಡೌನ್-ರ್‍ಯಾಂಪ್ ಕಾಮಗಾರಿ ಆರಂಭ

• **ಉದಯವಾಹಿನಿ, ಬೆಂಗಳೂರು**

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮೂಲಸೌಕರ್ಯ ವಿಭಾಗವಾದ ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಈಗಾಗಲೇ ವಿಳಂಬವಾದ ಈಜಿಪುರ ಫ್ಲೈಓವರ್‌ನ ಡೌನ್-ರ್‍ಯಾಂಪ್ ಕೆಲಸವನ್ನು ಕೈಗೆತ್ತಿಕೊಳ್ಳುವುದರಿಂದ, ಶ್ರೀನಿವಾಗಿಲು ಜಂಕ್ಷನ್‌ನಲ್ಲಿ ಮುಂದಿನ ಮೂರು ತಿಂಗಳ ಕಾಲ ಸ್ಲೋ-ಮೂವಿಂಗ್ ಟ್ರಾಫಿಕ್‌ಗೆ ಸಾಕ್ಷಿಯಾಗಲಿದೆ.

ಮುಂಬರುವ ನಿರ್ಮಾಣ ಕಾರ್ಯದಿಂದಾಗಿ, ಇಂಜಿನಿಯರ್‌ಗಳು ಈಗಾಗಲೇ ದೊಮ್ಮಲೂರು ಕಡೆಯಿಂದ ಕೇಂದ್ರೀಯ ಸದನದ ಕಡೆಗೆ 100 ಅಡಿ ಉದ್ದದ ರಸ್ತೆಯನ್ನು ನಿರ್ಮಿಸಿದ್ದು, ಪಿಲ್ಲರ್, ಕಾಸ್ಟಿಂಗ್ ಕೆಲಸಗಳು ನಡೆಯುತ್ತಿರುವಾಗ ಸಂಚಾರ ದಟ್ಟಣೆಯನ್ನು ಭಾಗಶಃ ಕಡಿಮೆ ಮಾಡುತ್ತದೆ ಎನ್ನಲಾಗಿದೆ.

ಬಿ-ಸ್ಮೈಲ್‌ನ ಮುಖ್ಯ ಇಂಜಿನಿಯರ್ ರಾಘವೇಂದ್ರ ಪ್ರಸಾದ್, ಕಾಮಗಾರಿಯನ್ನು ವೇಗಗೊಳಿಸಲಾಗುವುದು 2026ರ ಮಾರ್ಚ್‌ನೊಳಗೆ ಯೋಜನೆಯನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ ಎಂದು ಹೇಳಿದರು. ಯೋಜನೆಯನ್ನು ಪೂರ್ಣಗೊಳಿಸುವುದು ಸೇಂಟ್ ಜಾನ್ಸ್ ಸಂಸ್ಥೆ ಮತ್ತು ಹತ್ತಿರದ ಕೆಲವು ಆಸ್ತಿ ಮಾಲೀಕರ ಮೇಲೆ ಅವಲಂಬಿಸಿದೆ. ಏಕೆಂದರೆ, ಈ ಯೋಜನೆಗಾಗಿ ಮಾಲೀಕರು ತಮ್ಮ ಭೂಮಿಯ ಒಂದು ಭಾಗವನ್ನು ಬಿಟ್ಟುಕೊಡಬೇಕಾಗುತ್ತದೆ ಅಥವಾ ಟಿಡಿಆರ್ ಪಡೆಯಲು ಒಪ್ಪಬೇಕಾಗುತ್ತದೆ' ಎಂದು ಅವರು ಹೇಳಿದರು.



2.5 ಕಿಮೀ ಉದ್ದದ ಫ್ಲೈಓವರ್‌ನಲ್ಲಿ ಸುಮಾರು 700 ಮೀಟರ್ ಉದ್ದವನ್ನು ತೆರವುಗೊಳಿಸಬೇಕಾಗಿದೆ. ಈಶಾನ್ಯ ಬೆಂಗಳೂರಿನಿಂದ ಪಶ್ಚಿಮ, ಪೂರ್ವ ಬೆಂಗಳೂರಿನವರೆಗಿನ ಸಂಚಾರವನ್ನು ಸುಗಮಗೊಳಿಸುವ ಈ ಯೋಜನೆಗೆ ಭೂಮಿಯನ್ನು ಪಡೆಯಲು ಸಂಬಂಧಪಟ್ಟ ಇಲಾಖೆಯ ಮೂಲಕ ಪ್ರಯತ್ನಗಳು ನಡೆಯುತ್ತಿವೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

**25 ಮತ್ತು 26ನೇ ಕಂಬಗಳ ನಡುವೆ ಪೂರ್ವಭಾವಿ ವಿಭಾಗಗಳನ್ನು ನಿರ್ಮಿಸಲಾಗಿದೆ ಮತ್ತು 100 ಅಡಿ ರಸ್ತೆ, ಕೆಎಚ್‌ಬಿ ಬ್ಲಾಕ್ ಮತ್ತು ಕೋರಮಂಗಲ 5ನೇ ಬ್ಲಾಕ್‌ನಲ್ಲಿ ಗಿರ್ಡರ್‌ಗಳ ಪರಿಶೀಲನೆ ನಡೆಸಲಾಗಿದೆ. ಶ್ರೀನಿವಾಗಿಲು ಬಳಿ ಡೌನ್-ರ್‍ಯಾಂಪ್ ಕೆಲಸ ಮಂಗಳವಾರದಿಂದ ಪ್ರಾರಂಭವಾಗಿದೆ ಮತ್ತು ಬಿಡಿಎ ಸಂಕೀರ್ಣದ ಬಳಿಯ ನೀರಿನ ಟ್ಯಾಂಕ್‌ವರೆಗಿನ ಈ ಭಾಗದ ಕೆಲಸವನ್ನು ಮೂರು ತಿಂಗಳಲ್ಲಿ ಪೂರ್ಣಗೊಳಿಸಲು ನಾವು ಆಶಿಸುತ್ತೇವೆ' ಎಂದು ಅಧಿಕಾರಿ ಹೇಳಿದರು.**

### ಅಮೆರಿಕಾದಲ್ಲಿ ಟ್ವಿನ್ ಟವರ್ ದಾಳಿ ನಂತರ ಇಡೀ

## ಪ್ರಪಂಚದಲ್ಲಿಯೇ ಬೆಂಗಳೂರು ಸುರಕ್ಷಿತ ಜಾಗ

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕ ರಾಜ್ಯವು ಜ್ಞಾನ, ಸಹಕಾರ, ಚರ್ಚೆ ಮತ್ತು ಸಂಯೋಜನೆಗೆ ಮುಕ್ತ ಹಾಗೂ ಸೂಕ್ತ ಸ್ಥಳವಾಗಿದೆ. ನಮ್ಮ ಮೇಲೆ ವಿಶ್ವಾಸ ಇಟ್ಟು ಬಂದಿರುವುದಕ್ಕೆ ನಿಮ್ಮೆಲ್ಲರಿಗೂ ಧನ್ಯವಾದ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಬೆಂಗಳೂರು ಕೌಶಲ್ಯ ಶೃಂಗಸಭೆ 2025' ಉದ್ದೇಶಿಸಿ ಮಂಗಳವಾರ ಮಾತನಾಡಿದರು. ನಿಮ್ಮ ಶ್ರಮ, ಜ್ಞಾನ ಕರ್ನಾಟಕದ ಬೆಳವಣಿಗೆಗೆ ಸಹಕಾರಿಯಾಗಬೇಕು. ನಾವು ನಿಮ್ಮ ಮೇಲೆ ನಂಬಿಕೆಯನ್ನಿಟ್ಟಿದ್ದೇವೆ. ಯಾರ ಜ್ಞಾನವೂ ಕೀಳಲ್ಲ ಹಾಗೂ ಮೇಲಲ್ಲ. ಉದಾಹರಣೆಗೆ ಹೇಳುವುದಾದರೆ ಬಡಗಿಯ ಕೌಶಲ್ಯವೇ ಬೇರೆ, ಕ್ಷೌರಿಕನ ಕೌಶಲ್ಯವೇ ಬೇರೆ. ಇಲ್ಲಿ ಎಲ್ಲಾ ಕೌಶಲ್ಯಕ್ಕೂ ಗೌರವ, ಬೆಲೆ ಇದೆ ಎಂದು ಹೇಳಿದರು. ಭಾರತವನ್ನು ಬೆಂಗಳೂರಿನ ಮುಖಾಂತರ ನೋಡಲಾಗುತ್ತಿದೆ.

ಪ್ರತಿವರ್ಷ ಕರ್ನಾಟಕದಿಂದ ಅಂದಾಜು 1.60 ಲಕ್ಷ ಇಂಜಿನಿಯರ್‌ಗಳು ಕಾಲೇಜಿನಿಂದ ಹೊರ ಬರುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ 270 ಕ್ಕೂ ಹೆಚ್ಚು ಇಂಜಿನಿಯರಿಂಗ್, 1160 ಐಟಿಐ ಕಾಲೇಜುಗಳಿವೆ. 1200 ಕ್ಕೂ ಹೆಚ್ಚು ನರ್ಸಿಗ್ ಹಾಗೂ ಪ್ಯಾರಾಮೆಡಿಕಲ್ ಕಾಲೇಜುಗಳಿವೆ. ಆರೋಗ್ಯ, ಪ್ರವಾಸೋದ್ಯಮ ಕ್ಷೇತ್ರದಲ್ಲೂ ಮುಂದಿದ್ದೇವೆ. ಇಲ್ಲಿನ ಹವಾಮಾನ ಅತ್ಯುತ್ತಮವಾಗಿದೆ ಎಂದರು. ಕ್ಯಾಲಿಫೋರ್ನಿಯಾದಲ್ಲಿ 13 ಲಕ್ಷ ಐಟಿ ಇಂಜಿನಿಯರ್ ಗಳಿದ್ದರೆ ಬೆಂಗಳೂರಿನಲ್ಲಿ 25 ಲಕ್ಷ ಐಟಿ ವೃತ್ತಿಪರರಿದ್ದಾರೆ. ಅಮೇರಿಕಾದಲ್ಲಿ 9/11 ಟ್ವಿನ್ ಟವರ್ ದಾಳಿ ನಂತರ ಇಡೀ ಪ್ರಪಂಚದಲ್ಲಿಯೇ ಬೆಂಗಳೂರು ಸುರಕ್ಷಿತ ಜಾಗವೆಂದು ಗುರುತಿಸಲ್ಪಟ್ಟಿತು. ಬೆಂಗಳೂರು ಜ್ಞಾನ, ವಿಜ್ಞಾನ, ಅನ್ವೇಷಣೆ ಮತ್ತು ಮಾನವ ಸಂಪನ್ಮೂಲದ ಜೊತೆಗೆ ವಿಪುಲ ಅವಕಾಶವಿರುವ ಜಾಗವಾಗಿದೆ ಎಂದರು.




## ನ.7ರಂದು ದೇಶದೆಲ್ಲೆಡೆ ವಂದೇ ಮಾತರಂ ಗೀತೆಯ ಸಾಮೂಹಿಕ ಗಾಯನ

• **ಉದಯವಾಹಿನಿ, ಬೆಂಗಳೂರು**

ನವೆಂಬರ್ 7ರಂದು ದೇಶದೆಲ್ಲೆಡೆ ವಂದೇ ಮಾತರಂ ಗೀತೆಯ ಸಾಮೂಹಿಕ ಗಾಯನ, ವಂದೇ ಮಾತರಂನ ಸಂಭ್ರಮ ನಡೆಯಲಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮತ್ತು ವಂದೇ ಮಾತರಂ 150ನೇ ವಾರ್ಷಿಕೋತ್ಸವದ ರಾಜ್ಯ ಸಂಚಾಲಕಿ ಮಾಳವಿಕ ಅವಿನಾಶ್ ತಿಳಿಸಿದ್ದಾರೆ. ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 7ರಂದು ರಾಜ್ಯ ಕಾರ್ಯಾಲಯದಲ್ಲಿ 150ಕ್ಕೂ ಹೆಚ್ಚು ಜನರು ಅಂದರೆ ಸುಮಾರು 300-400 ಜನರು ಸೇರಿ ಒಟ್ಟಾಗಿ ವಂದೇ ಮಾತರಂ ಸಾಮೂಹಿಕ ಗಾಯನ ಮಾಡಲಿದ್ದೇವೆ. ಎಲ್ಲರೂ ಇದರಲ್ಲಿ ಭಾಗವಹಿಸಬೇಕೆಂದು ಕೋರಿದರು. ದೇಶಾದ್ಯಂತ ಎಲ್ಲಾ ಬಿಜೆಪಿ ಕಾರ್ಯಾಲಯಗಳಲ್ಲಿ ಸಾಮೂಹಿಕ ಗಾಯನ ನಡೆಯಲಿದೆ. ಪ್ರಧಾನಿಯವರೂ ಈ ಗಾಯನದಲ್ಲಿ ಸ್ವತಃ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಪಕ್ಷವು 150 ಜಿಲ್ಲೆಗಳಲ್ಲಿ ಆಚರಣೆಗೆ ನಿರ್ಧರಿಸಿದ್ದು, ಕರ್ನಾಟಕದ ಬೆಂಗಳೂರು, ಮೈಸೂರು, ಚಿತ್ರದುರ್ಗ, ಬಾಗಲಕೋಟೆ, ಗದಗ, ಕಲಬುರ್ಗಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಂದೇ ಮಾತರಂ ಸಾಮೂಹಿಕ ಗಾಯನ ಇರುತ್ತದೆ ಎಂದು ತಿಳಿಸಿದರು.

1875ರಲ್ಲಿ ಬಂಕಿಂಚಂದ್ರ ಚಟ್ಟೋಪಾಧ್ಯಾಯರು ವಂದೇ ಮಾತರಂ ಗೀತೆ ರಚಿಸಿದ್ದಾರೆ. ಈ ಗೀತೆಗೆ ಇದೀಗ 150ರ ಸಂಭ್ರಮ. ಕೇಂದ್ರದ ಎನ್‌ಡಿಎ ಸರ್ಕಾರವು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶಾದ್ಯಂತ ವಂದೇ ಮಾತರಂ ಆಚರಣೆಗೆ ಸೂಚಿಸಿದೆ. ಸ್ವಾತಂತ್ರ್ಯ ಸಂಗ್ರಾಮದ ಮೂಲಮಂತ್ರ ಇದಾಗಿತ್ತು ಎಂದು ವಿವರಿಸಿದರು.

20ನೇ ಶತಮಾನದ ಪ್ರಾರಂಭದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಘೋಷವಾಕ್ಯವಾಗಿ ಈ ಗೀತೆಯನ್ನು ಬಳಸಲಾಗಿತ್ತು. ಬ್ರಿಟಿಷರ ವಿರೋಧ, ಚಳವಳಿಗಳಲ್ಲಿ ವಂದೇ ಮಾತರಂ ಘೋಷಣೆ ಕೂಗುತ್ತಿದ್ದರು ಎಂದು ನೆನಪಿಸಿದರು. 1923ರ ಕಾಂಗ್ರೆಸ್ ಪಕ್ಷದ ಅಧಿವೇಶನದಲ್ಲಿ ವಂದೇ ಮಾತರಂ ಗೀತೆಯ ಕೆಲವು ಸಾಲುಗಳಿಗೆ ಪ್ರತಿರೋಧ ಬಂದಿತ್ತು. ಡಾ.ಮೌಲಾನಾ ಆಜಾದ್ ಅವರು ಪ್ರತಿರೋಧ ತೋರಿದ್ದರು.

ಪೂರ್ಣ ಗೀತೆಯಲ್ಲಿ ತ್ವಂ ಹೀ ದುರ್ಗ ದಶಪ್ರಹರಣ ಧಾರಿಣಿ ಎಂಬ ಸಾಲಿನಿಂದ ಅಲ್ಪಸಂಖ್ಯಾತರಿಗೆ ಬೇಸರವಾಗುತ್ತದೆ ಎಂಬ ಚರ್ಚೆ ನಡೆದು ಕಾಂಗ್ರೆಸ್ ಪಕ್ಷವು ವಂದೇ ಮಾತರಂ ಅನ್ನು ಕೈಬಿಟ್ಟಿತ್ತು ಎಂದು ಆರೋಪಿಸಿದರು.




**ಈ ಗೀತೆ ಹಾಡುವ ಮೂಲಕ ಆಚರಣೆ ಮಾಡಲು ಕೇಂದ್ರ ಸಚಿವ ಸಂಪುಟ ಸಭೆ ನಿರ್ಣಯಿಸಿದೆ. ನವೆಂಬರ್ 7ರಂದು ದೇಶದೆಲ್ಲೆಡೆ ವಂದೇ ಮಾತರಂ ಗೀತೆಯ ಸಾಮೂಹಿಕ ಗಾಯನ, ವಂದೇ ಮಾತರಂನ ಸಂಭ್ರಮ ನಡೆಯಲಿದೆ. 1896ರಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ರವೀಂದ್ರನಾಥ ಟಾಗೋರ್ ಅವರು ಈ ಹಾಡು ಜನಮನದಲ್ಲಿ ಇನ್ನೂ ಹೆಚ್ಚು ನಿಲ್ಲುವ ಹಾಗೆ ಹಾಡಿ ಅದಕ್ಕೆ ಹೆಚ್ಚಿನ ಪ್ರಚಾರ ದೊರಕಿತ್ತು ಎಂದು ಹೇಳಿದರು.**

# 3 ಪ್ಯಾಕೇಜ್‌ನಲ್ಲಿ ಮಲ್ಲಿಗೆ ಮಾರ್ಗದ ನಿರ್ಮಾಣಕ್ಕೆ ಟೆಂಡರ್

## ಉಪನಗರ ರೈಲು ಯೋಜನೆಯ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಲು ಮರು ಟೆಂಡರ್ ಪ್ರಕಟಿಸಿದೆ ಕೆ ರೈಡ್

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು ಉಪನಗರ ರೈಲು ಯೋಜನೆಯ ಕಾರಿಡಾರ್ 2ರಲ್ಲಿ (ಮಲ್ಲಿಗೆ ಮಾರ್ಗ) ಬಾಕಿ ಉಳಿದ ಮಾರ್ಗವನ್ನು ಪೂರ್ಣಗೊಳಿಸಲು ಬೆಂಗಳೂರು ಇಂಟಿಗ್ರೇಟೆಡ್ ರೈಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಬಿ-ರೈಡ್) ಮರು ಟೆಂಡರ್ ಆಹ್ವಾನಿಸಿದೆ. ಮಾರ್ಗದಲ್ಲಿ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು 3 ಪ್ಯಾಕೇಜ್‌ಗಳಲ್ಲಿ ಹೊಸ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಈ ಹಿಂದೆ ಗುತ್ತಿಗೆ ಪಡೆದ ಎಲ್ ಆ್ಯಂಡ್ ಟಿ ಸಂಸ್ಥೆ ಕಾನೂನುಬಾಹಿರವಾಗಿ ಒಪ್ಪಂದ ರದ್ದುಗೊಳಿಸಿದ ಹಿನ್ನೆಲೆಯಲ್ಲಿ ಯೋಜನೆಯ ಅನುಷ್ಠಾನದ ಜವಾಬ್ದಾರಿ ಹೊತ್ತಿರುವ ಬಿ-ರೈಡ್ ಬಾಕಿ ಕೆಲವನ್ನು ಪೂರ್ಣಗೊಳಿಸಲು ಮರು ಟೆಂಡರ್ ಕರೆದಿದೆ.

**ಪ್ಯಾಕೇಜ್ - 1:** ಬೆನ್ನಿಗಾನಹಳ್ಳಿಯಿಂದ ಶೆಟ್ಟಿಹಳ್ಳಿಯವರೆಗೆ 7.795 ಕಿ.ಮೀ. ಉದ್ದದ ಎತ್ತರಿಸಿದ ಮಾರ್ಗದ ವಯಾಡಕ್ಟ್‌ಗಳ ವಿನ್ಯಾಸ ನಿರ್ಮಾಣ,ಲೊಟ್ಟೆಗೊಲ್ಲಹಳ್ಳಿಯಿಂದ ಯಶವಂತಪುರದವರೆಗೆ 1.20 ಕಿ.ಮೀ. ಉದ್ದದ ಡಬಲ್ ಡೆಕ್ಕರ್ ವಯಾಡಕ್ಟ್‌ಗಳ ವಿನ್ಯಾಸ ಮತ್ತು ನಿರ್ಮಾಣ, ಮತ್ತಿಕೆರೆ, ಬೆನ್ನಿಗಾನಹಳ್ಳಿಯ ನಿಲ್ದಾಣಗಳ ನಿರ್ಮಾಣವನ್ನು ಈ ಟೆಂಡರ್ ಒಳಗೊಂಡಿದೆ. ಕಾಮಗಾರಿ ಪೂರ್ಣಗೊಳಿಸುವುದಕ್ಕೆ 24 ತಿಂಗಳ ಗಡುವು ನೀಡಲಾಗಿದೆ.

**ಪ್ಯಾಕೇಜ್-2:** ಈ ಪ್ಯಾಕೇಜ್ ಟೆಂಡರ್‌ನಲ್ಲಿ ಬೆನ್ನಿಗಾನಹಳ್ಳಿಯಿಂದ ಬಾಣಸವಾಡಿ ಮತ್ತು ಬಾಣಸವಾಡಿಯಿಂದ ಹೆಬ್ಬಾಳದವರೆಗೆ 11.569 ಕಿ.ಮೀ. ಉದ್ದದ ಅಟ್-ಗ್ರೇಡ್ ವಿಭಾಗದ ಕಾಮಗಾರಿಗಳ ವಿನ್ಯಾಸ ಮತ್ತು ನಿರ್ಮಾಣ. ಇದರಲ್ಲಿ ನಾಗವಾರ ಮತ್ತು ಕನಕನಗರದ ಸ್ಟೇಷನ್ ಬಾಕ್ಸ್ ಕಾಮಗಾರಿ ಸೇರಿದೆ. ಇದು ಪ್ರಮುಖ ಸೇತುವೆಗಳು, ಸಣ್ಣ ಸೇತುವೆಗಳು, ತಡೆಗೋಡೆ ವಿನ್ಯಾಸ ಮತ್ತು ನಿರ್ಮಾಣ ಒಳಗೊಂಡಿದೆ. ಕಾಮಗಾರಿ ಪೂರ್ಣಕ್ಕೆ 18 ತಿಂಗಳ ಗಡುವು ನೀಡಲಾಗಿದೆ.



**ಪ್ಯಾಕೇಜ್ -3 ಯಶವಂತಪುರದಿಂದ ಚಿಕ್ಕಬಾಣಾವರ ನಡುವೆ 5.80 ಕಿ.ಮೀ. ಉದ್ದದ ಅಟ್ ಗ್ರೇಡ್ ವಿಭಾಗದ ಕಾಮಗಾರಿಗಳ ವಿನ್ಯಾಸ ಮತ್ತು ನಿರ್ಮಾಣ ಒಳಗೊಂಡಿದೆ. ಜತೆಗೆ, ಯಶವಂತಪುರದಿಂದ ಚಿಕ್ಕಬಾಣಾವರ ನಡುವೆ 185 ಮೀ. ಉದ್ದದ ಎತ್ತರದ ವಯಾಡಕ್ಟ್ ವಿಭಾಗದ ವಿನ್ಯಾಸ ನಿರ್ಮಾಣ ಒಳಗೊಂಡಿದ್ದು, 18 ತಿಂಗಳ ಗಡುವು ನೀಡಲಾಗಿದೆ. ಕಾರಿಡಾರ್ - 2 ಮೇಲಿನ ಮೂರು ಪ್ಯಾಕೇಜ್‌ಗಳು ಕಾರಿಡಾರ್‌ನಾದ್ಯಂತ 8 ಲೆವೆಲ್ ಕ್ರಾಸಿಂಗ್‌ಗಳನ್ನು (ಎಲ್‌ಸಿಗಳು)ಮುಕ್ತಗೊಳಿಸಲಾಗುತ್ತದೆ.**

**ಯಾಕೆ ಮರು ಟೆಂಡರ್:** ಒಟ್ಟು ನಾಲ್ಕು ಕಾರಿಡಾರ್‌ಗಳ ಪೈಕಿ ಎರಡು ಕಾರಿಡಾರ್‌ಗಳ ಸಿವಿಲ್ ಕಾಮಗಾರಿ ಕೈಗೆತ್ತಿಕೊಂಡಿರುವ ಎಲ್ ಆ್ಯಂಡ್ ಟಿ ಕಂಪನಿ ಯೋಜನೆಯಿಂದ ಹಿಂದೆ ಸರಿದ ಹಿನ್ನೆಲೆಯಲ್ಲಿ ಮರು ಟೆಂಡರ್ ಕರೆಯಲಾಗಿದೆ. ಎಲ್‌ಆ್ಯಂಡ್‌ಟಿ ಸಂಸ್ಥೆ 2022ರ ಆ. 26ರಂದು ಕಾರಿಡಾರ್ 2 ಹಾಗೂ 2023ರ ಡಿ. 12ರಂದು ಕಾರಿಡಾರ್ - 4 (46 ಕಿಮೀ ಹೀಲಲಿಗೆ- ರಾಜಾನುಕುಂಟೆ) ಮಾರ್ಗದ ನಿರ್ಮಾಣದ ಟೆಂಡರ್ ಪಡೆದುಕೊಂಡಿತ್ತು. ಕೆ ರೈಡ್ ಅಗತ್ಯವಿರುವ ಭೂಮಿ ಹಸ್ತಾಂತರಿಸಲು ವಿಫಲವಾಗಿದೆ ಎಂದು ಕಾರಣ ನೀಡಿ ಎಲ್ ಆ್ಯಂಡ್ ಟಿ ಸಂಸ್ಥೆ ಸಿವಿಲ್ ಕಾಮಗಾರಿಯಿಂದ ಹಿಂದೆ ಸರಿದಿತ್ತು. ಎಲ್ ಆ್ಯಂಡ್ ಟಿ ಎರಡು ಪ್ರಮುಖ ಕಾರಿಡಾರ್‌ಗಳಾದ 25 ಕಿ.ಮೀ. ಬೈಯಪ್ಪನಹಳ್ಳಿ - ಚಿಕ್ಕಬಾಣಾವರ ಕಾರಿಡಾರ್ - 2 ಮತ್ತು 46 ಕಿಮೀ ಹೀಲಲಿಗೆ - ರಾಜಾನುಕುಂಟೆ ಕನಕ ಮಾರ್ಗ ಮಾರ್ಗದ ಕೆಲಸವನ್ನು ಮಾರ್ಚ್‌ನಿಂದ ಸ್ಥಗಿತಗೊಳಿಸಿತು. ಈ ಎರಡು ಕಾರಿಡಾರ್‌ಗಳಲ್ಲಿ ಒಟ್ಟಾರೆ ಶೇ. 30-35ರಷ್ಟು ಕಾಮಗಾರಿ ಮುಕ್ತಾಯವಾಗಿದೆ. ಆರ್ಥಿಕ ವ್ಯವಹಾರಕ್ಕೆ ಸಂಬಂಧಿಸಿ ಎಲ್ ಆ್ಯಂಡ್ ಟಿ ಸಂಸ್ಥೆಗೆ ನೀಡಿರುವ ತಡೆಯಾಜ್ಞೆಯನ್ನು ಕೆ - ರೈಡ್ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಎಲ್‌ಆ್ಯಂಡ್ ಟಿ ಮತ್ತು ಕೆ - ರೈಡ್ ನಡುವಿನ ಮಧ್ಯಸ್ಥಿಕೆ ಪ್ರಕ್ರಿಯೆಗಳು ಚಾಲ್ತಿಯಲ್ಲಿವೆ. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳನ್ನು ಒಳಗೊಂಡ ಮೂವರು ಸದಸ್ಯರ ಮಂಡಳಿಯನ್ನು ಮಧ್ಯಸ್ಥಿಕೆದಾರರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

# ಮಾಲೂರು ಮರು ಮತ ಎಣಿಕೆಗೆ ದಿನಾಂಕ ನಿಗದಿ


■ ನ.11ರಂದು ನಡೆಸುವಂತೆ ರಾಜ್ಯ ಚುನಾವಣಾ ಆಯೋಗ ಜಿಲ್ಲಾಡಳಿತಕ್ಕೆ ನಿರ್ದೇಶನ ■ ಮರು ಮತ ಎಣಿಕೆಗೆ ಸಕಲ ಸಿದ್ಧತೆ

• ಉದಯವಾಹಿನಿ, ಕೋಲಾರ

ಮರು ಮತ ಎಣಿಕೆ ಕಾರ್ಯ

ಸುಪ್ರೀಂ ಕೋರ್ಟ್ ಆದೇಶದಂತೆ ಮಾಲೂರು ವಿಧಾನಸಭಾ ಕ್ಷೇತ್ರ ಚುನಾವಣೆಯ ಮರು ಮತ ಎಣಿಕೆಯನ್ನು ನ.11ರಂದು ನಡೆಸುವಂತೆ ರಾಜ್ಯ ಚುನಾವಣಾ ಆಯೋಗ ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಿದೆ. ಮರು ಮತ ಎಣಿಕೆಗೆ ಸಂಬಂಧಿಸಿದಂತೆ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿರುವ ರಾಜ್ಯ ಚುನಾವಣಾ ಸಹಾಯಕ ಮುಖ್ಯ ಚುನಾವಣಾಧಿಕಾರಿಗಳು, ಸುಪ್ರೀಂ ಕೋರ್ಟ್ ಆದೇಶದನ್ವಯ ಮಾಲೂರು ವಿಧಾನಸಭಾ ಕ್ಷೇತ್ರದ ಮರು ಮತ ಎಣಿಕೆಯನ್ನು ನವೆಂಬರ್ 11 ರಂದು ನಡೆಸುವಂತೆ ತಿಳಿಸಿದ್ದಾರೆ. ಜಿಲ್ಲಾಡಳಿತದ ವತಿಯಿಂದ ಈಗಾಗಲೇ ಮರು ಮತ ಎಣಿಕೆಗೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ. ಈ ನಡುವೆ ರಾಜಕೀಯ ಪಕ್ಷಗಳ ಮುಖಂಡರೂ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವುದು ತೀವ್ರ ಕುತೂಹಲ ಮೂಡಿಸಿದ್ದು, ಮರು ಮತ ಎಣಿಕೆ ಕಾರ್ಯ ನಗರದ ಹೊರವಲಯದ ತೋಟಗಾರಿಕಾ ಮಹಾವಿದ್ಯಾಲದಲ್ಲಿ ನಡೆಯಲಿದೆ ಎಂದು ಹೇಳಲಾಗುತ್ತಿದೆ.

ಅದರಂತೆ ಈಗಾಗಲೇ ಜಿಲ್ಲಾಧಿಕಾರಿ ಡಾ.ಎಂ. ಆರ್.ರವಿ, ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿ ಬಿ.ನಿಖಿಲ್, ಹೆಚ್ಚುವರಿ ಜಿಲ್ಲಾಧಿಕಾರಿ ಮಂಗಳಾ, ಸಹಾಯಕ ಕಮಿಷನರ್ ಡಾ.ಎಚ್‌ಪಿಎಸ್ ಮೈತ್ರಿ ಸೇರಿದಂತೆ ಪ್ರಮುಖರು ಸ್ಥಳ ಪರಿಶೀಲನೆ ನಡೆಸಿದ್ದಾರೆ. ಈ ನಡುವೆ ಮಾಲೂರಿನಲ್ಲಿ ಬ್ಲಾಕ್‌ವಾರು ಮುಖಂಡರ ಸಭೆ ನಡೆಸಿರುವಂತಹ ಶಾಸಕ ಕೆ.ವೈ.ನಂಜೇಗೌಡರು, ಮತ ಎಣಿಕೆಯ ಸಂದರ್ಭದಲ್ಲಿ ಎಚ್ಚರಿಕೆಯಿಂದ ಇರುವಂತೆ ಸಲಹೆ ನೀಡಿದ್ದಾರೆ. ಮತ್ತೊಂದೆಡೆ ಬಿಜೆಪಿ ಅಭ್ಯರ್ಥಿ ಕೆ.ಎಸ್.ಮಂಜುನಾಥ್‌ಗೌಡ ಅವರೂ ಬೆಂಬಲಿಗರ ಸಭೆ ನಡೆಸಿ ಮತ ಎಣಿಕೆಯ ವೇಳೆ ಚುರುಕಿನಿಂದ ಇರುವಂತೆ ತಿಳಿಸಿದ್ದಾರೆ. ಮುಂದುವರಿದು ಕೇಂದ್ರ ಹಾಗೂ ರಾಜ್ಯ ಚುನಾವಣಾ ಆಯೋಗಗಳಿಗೆ ಪತ್ರ ಬರೆದು ಪಾರದರ್ಶಕತವಾಗಿ ಮತ ಎಣಿಕೆ ನಡೆಸುವಂತೆ ಕೋರಿದ್ದಾರೆ.



> ಮರು ಚುನಾವಣೆ ನಡೆಯುತ್ತಿದ್ದೆ ಎಂಬುದಾಗಿ ಮಂಜುನಾಥ್‌ಗೌಡ ತಿರುಕನ ಕನಸು ಕಾಣುತ್ತಿದ್ದಾರೆ. ಮರು ಮತ ಎಣಿಕೆ ನಡೆಯುವವರೆಗೆ ಕಾಯಬೇಕಲ್ಲವೇ? ಮರು ಮತ ಎಣಿಕೆ ನಡೆಯುವವರೆಗೆ ಎದುರಾಳಿಗಳು ಆರಾಮವಾಗಿರಲಿ. ಯಾವುದೇ ರೀತಿಯ ಫಲಿತಾಂಶ ಬಂದರೂ ನಾನು ಸ್ವಾಗತಿಸುತ್ತೇನೆ.
> – ಕೆ.ವೈ.ನಂಜೇಗೌಡ ಹಾಲಿ ಶಾಸಕ

**ಅಸಿಂಧು, ಮರು ಮತ ಎಣಿಕೆಗೆ ಆದೇಶ!**

ಮತ ಎಣಿಕೆ ಪಾರದರ್ಶಕವಾಗಿ ನಡೆದಿಲ್ಲವೆಂದು ಆರೋಪಿಸಿ ಮಂಜುನಾಥಗೌಡ ನ್ಯಾಯಾಲಯ ಮೊರೆ ಹೋಗಿದ್ದರು. ಅದರಂತೆ ಪ್ರಕರಣದ ವಿಚಾರಣೆ ನಡೆಸಿದ ಹೈಕೋರ್ಟ್ ಚುನಾವಣೆಗೆ ಸಂಬಂಧಿಸಿದ ದಾಖಲೆಗಳನ್ನು ನೀಡುವಂತೆ ಕೋರಿತ್ತು. ಅದರಂತೆ 2024ರ ಆ.13ರಂದು ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ರಾಜಕೀಯ ಪಕ್ಷಗಳ ಸಮ್ಮುಖದಲ್ಲಿ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಇವಿಎಂ ಉಗ್ರಾಣದ ಬಾಗಿಲು ತೆರೆದು ಎಣಿಕೆ ಸಂರ್ಭದಲ್ಲಿ ಸಂಗ್ರಹಿಸಿಟ್ಟಿದ್ದ ದಾಖಲೆಗಳನ್ನು ಪಡೆಯಲಾಗಿತ್ತು. ಆದರೆ, ಚುನಾವಣಾ ಮತ ಎಣಿಕೆಯ ದಿನದ ವಿಡಿಯೋ ಸೇರಿದಂತೆ ಕೆಲ ನಿರ್ದಿಷ್ಟ ದಾಖಲೆಗಳನ್ನು ಲಭ್ಯವಿಲ್ಲದಿರುವುದು ಕಂಡುಬಂದಿತ್ತು.

> ಮರು ಮತ ಎಣಿಕೆ ಪಾರದರ್ಶಕವಾಗಿ ನಡೆಯಬೇಕಿದ್ದು, ಅಧಿಕಾರಿಗಳು ಪ್ರಭಾವಕ್ಕೆ ಒಳಗಾಗದೆ ಕಾರ್ಯನಿರ್ವಹಿಸಬೇಕಿದೆ. ಸ್ಥಳೀಯ ಅಧಿಕಾರಿಗಳ ಬದಲಿಗೆ ಬೇರೆ ಅಧಿಕಾರಿಗಳನ್ನು ನಿಯೋಜನೆ ಮಾಡುವಂತೆ ಚುನಾವಣಾ ಆಯೋಗಕ್ಕೆ ಮನವಿ ನೀಡಲಾಗುವುದು.
> –ಕೆ.ಎಸ್.ಮಂಜುನಾಥಗೌಡ, ಬಿಜೆಪಿ ಅಭ್ಯರ್ಥಿ

**ಪ್ರಕರಣದ ವಿವರದ ಹಿನ್ನೆಲೆ ಏನು?:** 2023ರ ವಿಧಾಸಭಾ ಚುನಾವಣೆಯಲ್ಲಿಮಾಲೂರು ಕ್ಷೇತ್ರದ ಚುನಾವಣೆ ತೀವ್ರ ಪೈಪೋಟಿಯ ಕಣವಾಗಿತ್ತು. ಕಾಂಗ್ರೆಸ್, ಬಿಜೆಪಿ, ಪಕ್ಷೇತರ ಅಭ್ಯರ್ಥಿಯ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿತ್ತು. ಅದರಂತೆ 2023ರ ಮೇ 13ರಂದು ನಡೆದ ಮತ ಎಣಿಕೆಯಲ್ಲಿನಂಜೇಗೌಡರು 248 ಮತಗಳ ಅಂತರದಿಂದ ಮಂಜುನಾಥಗೌಡರ ವಿರುದ್ಧ ಗೆಲುವು ಸಾಧಿಸಿದ್ದರು. ಗೆಲುವಿನ ಅಂತರ ಕಡಿಮೆಯಿದ್ದರಿಂದ ಮರು ಮತ ಎಣಿಕೆಗೆ ಮಂಜುನಾಥಗೌಡರು ಒತ್ತಾಯಿಸಿದ್ದರು. ಈ ನಡುವೆ ಕಾಂಗ್ರೆಸ್–ಬಿಜೆಪಿ ನಾಯಕರ ನಡುವೆ ಗೊಂದಲ ಸೃಷ್ಟಿಯಾಗಿತ್ತು. ಜತೆಗೆ ಐದು ಮತಗಟ್ಟೆಗಳ ವಿವಿ ಪ್ಯಾಟ್‌ಗಳನ್ನು ಲಾಟರಿ ಮೂಲಕ ಆಯ್ಕೆ ಮಾಡಿ ಎಣಿಕೆ ನಡೆಸಿದ್ದರು. ಅದರಲ್ಲೂ ನಂಜೇಗೌಡರು ಮುನ್ನಡೆ ಕಾಯ್ದುಕೊಂಡಿದ್ದರಿಂದ ನಂಜೇಗೌಡರ ಗೆಲುವು ಸಾಧಿಸಿದ್ದಾರೆಂದು ಘೋಷಿಸಲಾಗಿತ್ತು.

**ನ್ಯಾಯಾಲಯವು ಮರು ಮತ ಎಣಿಕೆಗೆ ಆದೇಶ:** ಪ್ರಕರಣಕ್ಕೆ ಸಂಬಂಧಿಸಿದ ಆದೇಶ ಹೊರಡಿಸಿದ್ದಂತಹ ಹೈಕೋರ್ಟ್, ನಂಜೇಗೌಡರ ಶಾಸಕ ಸ್ಥಾನವನ್ನು ಅಸಿಂಧುಗೊಳಿಸಿ, ಮರು ಮತ ಎಣಿಕೆಗೆ ತಿಳಿಸಿತ್ತು. ಇದನ್ನು ಪ್ರಶ್ನಿಸಿ ನಂಜೇಗೌಡರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಅಸಿಂಧು ಆದೇಶಕ್ಕೆ ತಡೆ ನೀಡಿದ್ದಂತಹ ನ್ಯಾಯಾಲಯವು ಮರು ಮತ ಎಣಿಕೆಗೆ ಆದೇಶಿಸಿತ್ತು. ಅದರಂತೆ ಚುನಾವಣಾ ಆಯೋಗ ಮರು ಮತ ಎಣಿಕೆಗೆ ನಿರ್ದೇಶ ನೀಡಿದ್ದು, ನ.11ರಂದು ಮತ ಎಣಿಕೆ ಕಾರ್ಯ ನಡೆಯಲಿದೆ.

## 200 ಕೋಟಿ ಅನುದಾನಕ್ಕೆ ಪ್ರಸ್ತಾವ: ಯೋಗೇಶ್ವರ್

• ಉದಯವಾಹಿನಿ, ಚನ್ನಪಟ್ಟಣ

ತಾಲ್ಲೂಕಿನಲ್ಲಿ ಬಾಕಿ ಇರುವ ಕಾಮಗಾರಿ ಪೂರ್ಣಗೊಳಿಸಲು 200ಕೋಟಿ ವೆಚ್ಚದ ಕ್ರಿಯಾ ಯೋಜನೆ ತಯಾರಿಸಲಾಗಿದ್ದು, ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಶಾಸಕ ಸಿ.ಪಿ.ಯೋಗೇಶ್ವರ್ ತಿಳಿಸಿದರು.

ತಾಲ್ಲೂಕಿನ ತಗಚಗೆರೆ ಗ್ರಾಮ ಪಂಚಾಯಿತಿ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದಲ್ಲಿ ಮೂಲ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಬಾಕಿ ಇರುವ ಪೈಪ್‌ಲೈನ್ ಕಾಮಗಾರಿ, ರಸ್ತೆ, ಚರಂಡಿ ಕಾಮಗಾರಿ ಪಟ್ಟಿ ಮಾಡಲಾಗಿದೆ. ಇವುಗಳನ್ನು ಪೂರ್ಣ ಮಾಡಲು 200ಕೋಟಿ ಅನುದಾನಕ್ಕಾಗಿ ಮುಖ್ಯಮಂತ್ರಿಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದರು. ಸರ್ಕಾರದ ಎಲ್ಲಾ ಯೋಜನೆಗಳು ಗ್ರಾಮ ಪಂಚಾಯಿತಿ ಆಡಳಿತದ ಮೂಲಕವೇ ಜಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಗ್ರಾ.ಪಂ ಸದಸ್ಯರು ಪ್ರಾಮಾಣಿಕವಾಗಿ ಶ್ರಮಿಸಿದರೆ ಗ್ರಾಮೀಣ ಭಾಗ ಅಭಿವೃದ್ಧಿಯಾಗುತ್ತದೆ. ಗ್ರಾ.ಪಂ. ಸದಸ್ಯರು ತಮಗೆ ಮತ ಹಾಕಿದ ಮತದಾರರಿಗೆ ಪ್ರಾಮಾಣಿಕ ಸೇವೆ ಮಾಡಬೇಕು ಎಂದು ಕಿವಿಮಾತು ಹೇಳಿದರು.


ಉದಯವಾಹಿನಿ ಚಿತ್ರ

**ಕೆರೆಗಳಿಗೆ ನೀರು:** ಕೆಆರ್‌ಎಸ್‌ನಲ್ಲಿ ಸದ್ಯ 124 ಅಡಿ ನೀರು ಇದೆ. ತಾಲ್ಲೂಕಿನ ಪ್ರತಿ ಕೆರೆಗಳಿಗೆ ಬೇಸಿಗೆಯಲ್ಲೂ ಎರಡು ಬಾರಿ ನೀರನ್ನು ತುಂಬಿಸಿ ಅಂತರ್ಜಲ ಹೆಚ್ಚಳ ಮಾಡಬಹುದು. ಈ ನಿಟ್ಟಿನಲ್ಲಿ ಸಣ್ಣ ಕೆರೆಗಳಿಗೂ ನೀರನ್ನು ತುಂಬಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ತಾಲ್ಲೂಕಿನ ಎಲ್ಲಾ 32 ಗ್ರಾಮ ಪಂಚಾಯಿತಿಗಳಿಗೆ ಒಂದೊಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿರ್ಮಾಣ ಮಾಡಲು ಸರ್ಕಾರ ಆದೇಶ ಹೊರಡಿಸಿದೆ ಎಂದು ತಿಳಿಸಿದರು. ಗ್ರಾ.ಪಂ. ವ್ಯಾಪ್ತಿಯ ಹೈನೋದ್ಯಮಕ್ಕೆ ಹೆಚ್ಚು ಉತ್ತೇಜನ ನೀಡುವ ನಿಟ್ಟಿನಲ್ಲಿ ಡಿಸಿಸಿ ಬ್ಯಾಂಕ್ ಮೂಲಕ ಎರಡು ಹಸುಗಳನ್ನು ಕೊಳ್ಳಲು 1.80ಲಕ್ಷ ಸಾಲ ಸೌಲಭ್ಯ ನೀಡಲಾಗುವುದು ಎಂದು ತಿಳಿಸಿದರು.

## ಅವಹೇಳನಕಾರಿ ಪದ ಬಳಕೆ: ಸಿ.ಟಿ. ರವಿ ವಿರುದ್ಧ ಆಕ್ರೋಶ

• ಉದಯವಾಹಿನಿ, ರಾಮನಗರ

ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರು ಸವಿತಾ ಸಮಾಜದ ವಿರುದ್ಧ ಅವಹೇಳನಕಾರಿ ಪದ ಬಳಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ. ಜಿಲ್ಲಾ ಸವಿತಾ ಸಮಾಜ ಮತ್ತು ಬೆಂಗಳೂರು ದಕ್ಷಿಣ ಜಿಲ್ಲಾ ಹಿಂದುಳಿದ ಜಾತಿಗಳ ಮಹಾ ಒಕ್ಕೂಟದ ಸದಸ್ಯರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಸವಿತಾ ಸಮಾಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್. ಮುತ್ತುರಾಜ್, ಹಿಂದುಳಿದ ಜಾತಿಗಳ ಮಹಾ ಒಕ್ಕೂಟದ ಜಿಲ್ಲಾಧ್ಯಕ್ಷ ರೈಡ್ ನಾಗರಾಜು ನೇತೃತ್ವದಲ್ಲಿ ನಗರದ ಐಜೂರು ವೃತ್ತದಲ್ಲಿ ಜಮಾಯಿಸಿದ ಪದಾಧಿಕಾರಿಗಳು ಕತ್ತೆಗಳಿಗೆ ರವಿ ಚಿತ್ರವಿರುವ ಪೋಸ್ಟರ್ ಹೊದಿಸಿ. ರವಿ ವಿರುದ್ಧ ಘೋಷಣೆ ಕೂಗಿದರು. ಅವಹೇಳನಕಾರಿ ಪದ ಬಳಕೆಗೆ ಬಹಿರಂಗವಾಗಿಕ್ಷಮೆ ಕೋರಬೇಕು ಎಂದು ಆಗ್ರಹಿಸಿದರು. ಈ ವೇಳೆ ಮಾತನಾಡಿದ ಮುತ್ತುರಾಜ್, ಸವಿತಾ ಸಮಾಜವು ಜಾತಿ, ಧರ್ಮ ನೋಡದೆ ಎಲ್ಲರಿಗೂ ಕ್ಷೌರ ಮಾಡುವ ಶ್ರಮಿಕ ವರ್ಗವಾಗಿದೆ. ಎಲ್ಲರೂ ನಮ್ಮ ಸಮುದಾಯದ ಮುಂದೆ ತಲೆ ಬಾಗಿಸುತ್ತಾರೆ. ಅಂತಹ ಸಮುದಾಯದ ಬಗ್ಗೆ ಸಿ.ಟಿ. ರವಿ ಆಡಿರುವ ಮಾತುಗಳು ಖಂಡನೀಯ. ಮಾಜಿ ಸಚಿವರೂ ಆಗಿರುವ ರವಿ ತಮ್ಮ ಸ್ಥಾನದ ಘನತೆಗೆ ತಕ್ಕಂತೆ ನಡೆದುಕೊಳ್ಳಬೇಕು ಎಂದರು.



ಉದಯವಾಹಿನಿ ಚಿತ್ರ

ಜನಪ್ರತಿನಿಧಿಯಾದವನು ಎಲ್ಲಾ ಸಮುದಾಯಗಳನ್ನು ಪ್ರೀತಿ ವಿಶ್ವಾಸದಿಂದ ಕಾಣಬೇಕು. ಅಪ್ಪಿತಪ್ಪಿಯೂ ಯಾರ ಭಾವನೆಗೂ ನೋವಾಗದಂತೆ ನಡೆ ನುಡಿಯಲ್ಲಿ ಎಚ್ಚರಿಕೆ ವಹಿಸಬೇಕು. ಆದರೆ, ಕೆಂಪೇಗೌಡರು, ಕುವೆಂಪು ಅವರಂತಹ ಮಹನೀಯರು ಜನಿಸಿದ ಒಕ್ಕಲಿಗ ಸಮುದಾಯದವರಾಗಿದ್ದರೂ ಮಾತಿನಲ್ಲಿ ಸಂಸ್ಕಾರವಿಲ್ಲ. ಕೂಡಲೇ ರವಿ ತನ್ನ ತಪ್ಪು ಒಪ್ಪಿಕೊಂಡು ಬಹಿರಂಗವಾಗಿ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದರು.

ರೈಡ್ ನಾಗರಾಜ್ ಮಾತನಾಡಿ, ಶಿಸ್ತಿನ ಪಕ್ಷ ಎಂದು ಹೇಳಿಕೊಳ್ಳುವ ಬಿಜೆಪಿಯ ವಿಧಾನ ಪರಿಷತ್ ಸದಸ್ಯ ರವಿ ಮೂರೂ ಬಿಟ್ಟಿರುವ ವ್ಯಕ್ತಿ. ಸಮುದಾಯಗಳು ಮತ್ತು ಅವರ ನಾಯಕರನ್ನು ತುಚ್ಛವಾಗಿ ಕಾಣುವುದನ್ನೇ ಚಾಳಿ ಮಾಡಿಕೊಂಡಿದ್ದಾರೆ. ಸವಿತಾ ಸಮಾಜದ ಕುರಿತು ಅವರು ಬಳಸಿರುವ ಪದವು ಆತನ ಹಿನ್ನೆಲೆ ಎಂತಹದ್ದು ಎಂಬುದನ್ನು ತೋರಿಸುತ್ತದೆ ಎಂದು ಆಕ್ರೋಶ ಹೊರಹಾಕಿದರು. ಸವಿತಾ ಸಮಾಜ ಎಂದರೆ ಶುಭದ ಪ್ರತೀಕ. ಯಾವುದೇ ಶುಭ ಕಾರ್ಯ ಈ ಸಮಾಜದವರ ಮಂಗಳವಾದ್ಯವಿಲ್ಲದೆ ಪೂರ್ಣಗೊಳ್ಳುವುದಿಲ್ಲ. ಜನಪ್ರತಿನಿಧಿಯಾಗಿದ್ದರೂ ಸಮುದಾಯಗಳ ಮಹತ್ವದ ಬಗ್ಗೆ ಅರಿವಿಲ್ಲದ ರವಿ ವಿರುದ್ಧ ಪ್ರಕರಣ ದಾಖಲಿಸಬೇಕು. ಮತದಾರರು ಸಹ ಇಂತಹ ನಾಲಾಯಕ್ ಜನಪ್ರತಿನಿಧಿಗೆ ಮತ ನೀಡದೆ ತಿರಸ್ಕರಿಸಬೇಕು ಎಂದರು.

> ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರಿಗೆ ಭಾಷೆ ಮತ್ತು ಸಂಸ್ಕಾರದ ಸಮಸ್ಯೆ ಇದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಡೆ-ನುಡಿಯನ್ನು ನೋಡಿ ಕಲಿತುಕೊಳ್ಳಲಿ.
> – ಎಂ.ಎಸ್. ಮುತ್ತುರಾಜ್, ಅಧ್ಯಕ್ಷ ಸವಿತಾ ಸಮಾಜ ಅಭಿವೃದ್ಧಿ ನಿಗಮ

## ಮನೆಯಲ್ಲೇ ಸಿಲಿಂಡರ್ ಅಕ್ರಮ ದಾಸ್ತಾನು: ಭಯದಲ್ಲಿ ಗ್ರಾಮಸ್ಥರು

• ಉದಯವಾಹಿನಿ, ಚೇಳೂರು

ತಾಲ್ಲೂಕಿನ ನಾರೇಮದ್ದೆಪಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜಂಗಾಲಪಲ್ಲಿ ಗ್ರಾಮದಲ್ಲಿ ವ್ಯಕ್ತಿಯೊಬ್ಬರು ಮನೆಯಲ್ಲಿಯೇ ಅಕ್ರಮವಾಗಿ ಅಡುಗೆ ಅನಿಲ ಸಿಲಿಂಡರ್‌ಗಳನ್ನು ಬೃಹತ್ ಪ್ರಮಾಣದಲ್ಲಿ ದಾಸ್ತಾನು ಮಾಡಿ ರಾಜಾರೋಷವಾಗಿ ಮಾರಾಟ ಮಾಡುತ್ತಿದ್ದಾರೆ. ಗ್ರಾಮದ ಮಧ್ಯಭಾಗದಲ್ಲಿರುವ ಮನೆಯೊಂದರಲ್ಲಿ ಟ್ರಕ್ ಸಮೇತ ಅಸಂಖ್ಯಾತ ಅನಿಲ ಸಿಲಿಂಡರ್‌ಗಳನ್ನು ಅಸುರಕ್ಷಿತವಾಗಿ ಸಂಗ್ರಹಿಸಲಾಗಿದೆ. ಈ ವಿಷಯ ಗೊತ್ತಿದ್ದರೂ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಅಧಿಕಾರಿಗಳು ಯಾವುದೇ ಕ್ರಮ ಜರುಗಿಸಿಲ್ಲ.

ಕಬ್ಬಿಣದ ಪಂಜರದಂತಹ ವ್ಯವಸ್ಥೆ ಹೊಂದಿರುವ ಒಂದು ವಾಹನದಲ್ಲಿ ಹತ್ತಾರು ಸಿಲಿಂಡರ್‌ಗಳನ್ನು ಅಸುರಕ್ಷಿತವಾಗಿ ತುಂಬಿದ್ದಾರೆ. ಮನೆಯ ಆವರಣದಲ್ಲಿ, ದ್ವಿಚಕ್ರ ವಾಹನಗಳ ಪಕ್ಕದಲ್ಲಿಯೂ ಸಹ ಹೆಚ್ಚುವರಿ ಸಿಲಿಂಡರ್‌ಗಳನ್ನು ರಾಶಿ ಹಾಕಿದ್ದಾರೆ. ರಾತ್ರಿ ವೇಳೆ ಸಿಲಿಂಡರ್‌ಗಳ ಸಾಗಣೆ ಮತ್ತು ದಾಸ್ತಾನು ಚಟುವಟಿಕೆಗಳು ನಡೆಯುತ್ತಿವೆ ಎಂಬುದಕ್ಕೆ ವಿಡಿಯೋಗಳು ಲಭ್ಯವಿದೆ. ಅಕ್ರಮವಾಗಿ ಸಿಲಿಂಡರ್‌ಗಳನ್ನು ದಾಸ್ತಾನು ಮಾಡಿರುವ ಚಿತ್ರಗಳು ಲಭ್ಯವಾಗಿವೆ.


ಉದಯವಾಹಿನಿ ಚಿತ್ರ

ಜನನಿ ಬಿಡ ಪ್ರದೇಶದಲ್ಲಿ ಈ ಪ್ರಮಾಣದ ಅನಿಲ ಸಿಲಿಂಡರ್‌ಗಳ ದಾಸ್ತಾನು ಇರುವುದು ಸ್ಥಳೀಯರ ನಿದ್ದೆಗೆಡಿಸಿದೆ. ಅಚಾತುರ್ಯ ಅಥವಾ ಕಿಡಿ ಇಡೀ ಗ್ರಾಮವನ್ನು ಸುಟ್ಟುಹಾಕಬಹುದು. ಮಕ್ಕಳಿರುವ ಮನೆಗಳಿರುವ ಪ್ರದೇಶದಲ್ಲಿ ಈ ರೀತಿಯ ಅಪಾಯಕಾರಿ ಚಟುವಟಿಕೆಗಳಿಗೆ ಹೇಗೆ ಅವಕಾಶ ನೀಡಲಾಗಿದೆ ಎಂದು ಗ್ರಾಮಸ್ಥರು ಪ್ರಶ್ನಿಸಿದ್ದಾರೆ. ನಿಯಮಾನುಸಾರ, ಯಾವುದೇ ಏಜೆನ್ಸಿಯು ಗ್ರಾಹಕರಿಗೆ ಸೀಮಿತ ಸಂಖ್ಯೆಯ ಸಿಲಿಂಡರ್‌ಗಳನ್ನು ಮಾತ್ರ ನೀಡಬೇಕು. ಆದರೆ ಇಲ್ಲಿ ಅಕ್ರಮ ಮಾರಾಟಕ್ಕೆ ಬೇಕಾಗುವಷ್ಟು ಸಿಲಿಂಡರ್‌ಗಳನ್ನು ಏಜೆನ್ಸಿ ಮಾಲೀಕರು ಹೇಗೆ ಪೂರೈಸುತ್ತಿದ್ದಾರೆ ಎಂಬುದು ಗ್ರಾಮಸ್ಥರ ಪ್ರಶ್ನೆ ಆಗಿದೆ. ಏಜೆನ್ಸಿ ಮಾಲೀಕರು ಈ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂಬ ಅನುಮಾನ ವ್ಯಕ್ತವಾಗಿದೆ.

**ಆಹಾರ ಇಲಾಖೆ ನಿರ್ಲಕ್ಷ್ಯ: ಆರೋಪ**

ಈ ಅಕ್ರಮ ದಾಸ್ತಾನಿನ ಬಗ್ಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ಇದ್ದರೂ ಇದುವರೆಗೂ ಯಾವುದೇ ದಾಳಿ ಅಥವಾ ಕಠಿಣ ಕಾನೂನು ಕ್ರಮ ಜರುಗಿಸಿಲ್ಲ ಎಂದು ಗ್ರಾಮಸ್ಥರು ಪ್ರಶ್ನಿಸಿದ್ದಾರೆ. ಆಹಾರ ಇಲಾಖೆ ಪೊಲೀಸ್ ಇಲಾಖೆ, ತಾಲ್ಲೂಕು ಆಡಳಿತ ತಕ್ಷಣ ಮಧ್ಯ ಪ್ರವೇಶಿಸಿ ಈ ಅಕ್ರಮ ಸಿಲಿಂಡರ್ ದಾಸ್ತಾನನ್ನು ವಶಕ್ಕೆ ಪಡೆಯಬೇಕು. ಇದಕ್ಕೆ ಕಾರಣರಾದವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

## ಬಿಪಿಎಲ್ ಕಾರ್ಡ್ ರದ್ದುಪಡಿಸಿದರೆ ಹೋರಾಟ

• ಉದಯವಾಹಿನಿ, ಚಿಂತಾಮಣಿ

ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಪಡಿತರ ಚೀಟಿ ರದ್ದುಪಡಿಸುವ ರಾಜ್ಯ ಸರ್ಕಾರದ ಆದೇಶ ಖಂಡಿಸಿ ಜಲಗಾರರ ಸಂಘದ ನೇತೃತ್ವದಲ್ಲಿ ತಾಲ್ಲೂಕು ಪಂಚಾಯಿತಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಮಂಜುನಾಥ್ ಮಾತನಾಡಿ, ಗ್ರಾಮ ಪಂಚಾಯಿತಿಗಳಲ್ಲಿ ಜಲಗಾರರಾಗಿ, ಇತರೆ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವ ಕೆಳ ಹಂತದ ನೌಕರರಿಗೆ ಬಿಪಿಎಲ್ ಕಾರ್ಡ್ ನೀಡಲಾಗಿದೆ. ಸರ್ಕಾರಿ ನೌಕರರಿಗೆ ದೊರೆಯುವ ಯಾವುದೇ ಸೌಲಭ್ಯ ನಮಗೆ ದೊರೆಯುತ್ತಿಲ್ಲ. ಆದರೂ ಸರ್ಕಾರ ಬಿಪಿಎಲ್ ಕಾರ್ಡ್ ರದ್ದುಪಡಿಸಲು ಹೊರಡಿಸಿರುವ ಆದೇಶವನ್ನು ಕೂಡಲೇ ಹಿಂಪಡೆಯಬೇಕು. ಇಲ್ಲದಿದ್ದರೆ ಜಲಗಾರರ ಸಂಘದ ವತಿಯಿಂದ ಬೀದಿಗಿಳಿದು ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ ಎಂದರು.

ಜಲಗಾರರು, ಇತರೆ ಸಿಬ್ಬಂದಿಗಳು ಕಾರ್ಮಿಕರಾಗಿರುವುದರಿಂದ ಕನಿಷ್ಠ ವೇತನ ದರ ಪರಿಷ್ಕೃತಗೊಳ್ಳುತ್ತಿದೆ. ಕನಿಷ್ಠ ವೇತನ ಬದಲಾವಣೆ ಹೊರತುಪಡಿಸಿ ಯಾವುದೇ ಸೌಲಭ್ಯ ನೀಡುತ್ತಿಲ್ಲ. ಕೇಲವ ಕನಿಷ್ಠ ವೇತನದ ಬದಲಾವಣೆಯ ಹಿನ್ನೆಲೆಯಲ್ಲಿ ಬಿಪಿಎಲ್ ಕಾರ್ಡ್ ರದ್ದುಪಡಿಸಲು ಹೊರಟಿರುವುದು ಅನ್ಯಾಯವಾಗಿದೆ. ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ಬಿಪಿಎಲ್ ರದ್ದುಪಡಿಸುತ್ತಿರುವುದರಿಂದ ಜಲಗಾರರಿಗೆ ತೊಂದರೆ ಆಗುತ್ತದೆ' ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ


ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಜಲಗಾರರು ಮತ್ತಿತರ ಸಿಬ್ಬಂದಿಯ ಬಿಪಿಎಲ್ ಪಡಿತರ ಚೀಟಿಗಳನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಬೇಕು. ಸರ್ಕಾರಿ ನೌಕರರೆಂದು ಪರಿಗಣಿಸಿ ಅವರಿಗೆ ಸಿಗುತ್ತಿರುವ ಎಲ್ಲಾ ಸೌಲಭ್ಯಗಳನ್ನು ಮಂಜೂರು ಮಾಡಿದ ನಂತರ ಬೇಕಾದರೆ ಹಿಂತೆಗೆದುಕೊಳ್ಳಲಿ. ಯಾವುದೇ ಸೌಲಭ್ಯ ನೀಡದೆ ಬಿಪಿಎಲ್ ಕಾರ್ಡ್ ರದ್ದುಪಡಿಸಿದರೆ ಉಗ್ರಹೋರಾಟ ರೂಪಿಸಲಾಗುವುದು ಎಂದರು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಪರವಾಗಿ ವ್ಯವಸ್ಥಾಪಕ ರವಿ ಮನವಿ ಸ್ವೀಕರಿಸಿದರು.

## ಪ್ರಾದೇಶಿಕ ವಿಜ್ಞಾನ ಕೇಂದ್ರದ ಸ್ಥಳ ಪರಿಶೀಲನೆ: 9 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ

• ಉದಯವಾಹಿನಿ, ಕೆಜಿಎಫ್

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ರಾಜ್ಯದಾದ್ಯಂತ ವಿಜ್ಞಾನ ಉಪ ಕೇಂದ್ರ, ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುವುದು. ಕೆಜಿಎಫ್‌ನಲ್ಲಿ ನಿರ್ಮಾಣವಾಗುವ ವಿಜ್ಞಾನ ಕೇಂದ್ರವನ್ನು 9 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ಸಣ್ಣ ನೀರಾವರಿ, ವಿಜ್ಞಾನ, ತಂತ್ರಜ್ಞಾನ ಇಲಾಖೆಯ ಸಚಿವ ಎನ್.ಎಸ್. ಬೋಸರಾಜು ಹೇಳಿದರು.

ನಗರದ ಊರಿಗಾಂನಲ್ಲಿ ವಿಜ್ಞಾನ ಕೇಂದ್ರ ನಿರ್ಮಾಣ ಮಾಡುವ ಸ್ಥಳವನ್ನು ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಮನಗರ, ಚಿತ್ರದುರ್ಗ, ವಿಜಯನಗರ ಜಿಲ್ಲೆಗಳಲ್ಲಿ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲು ಎಲ್ಲಾ ಸಿದ್ಧತೆ ನಡೆಸಲಾಗಿದೆ. ಮಾರ್ಚ್ ತಿಂಗಳೊಳಗೆ ಕಾಮಗಾರಿಯನ್ನು ಮುಗಿಸಲು ತೀರ್ಮಾನಿಸಲಾಗಿದೆ. ಕೆಜಿಎಫ್ ನಗರದಲ್ಲಿ ಕೇಂದ್ರದ ನಿರ್ಮಾಣಕ್ಕೆ ಹತ್ತು ಎಕರೆ ಜಮೀನನ್ನು ನೀಡಲಾಗಿದೆ. ಕೇಂದ್ರದ ಕಾಂಪೌಂಡ್ ಮತ್ತು ಕಟ್ಟಡ ನಿರ್ಮಾಣಕ್ಕೆ ಮೊದಲ ಹಂತದಲ್ಲಿ 9 ಕೋಟಿ ವಿನಿಯೋಗಿಸಲಾಗುವುದು. ಮುಂದಿನ ದಿನಗಳಲ್ಲಿ ತಾರಾಲಯ ನಿರ್ಮಾಣ ಸೇರಿದಂತೆ ಹಂತ ಹಂತವಾಗಿ ಕೇಂದ್ರವನ್ನು ಮತ್ತಷ್ಟು ಮೇಲ್ದರ್ಜೆಗೆ ಏರಿಸಲಾಗುವುದು ಎಂದರು. ಚಿತ್ರದುರ್ಗದಲ್ಲಿ, ವಿಜಯನಗರದಲ್ಲಿ ಜಾಗ ಸಿಕ್ಕಿದೆ. ರಾಮನಗರದಲ್ಲಿ ಕೂಡ ಜಾಗ ನೋಡಲಾಗಿದೆ. ಎರಡು ವರ್ಷಗಳಿಂದ ಮೈಸೂರು, ಗದಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕೇಂದ್ರ ಸ್ಥಾಪನೆ ನನೆಗುದಿಗೆ ಬಿದ್ದಿತ್ತು. ಅದನ್ನು ಪೂರ್ಣಗೊಳಿಸಲಾಗುತ್ತಿದೆ. ರಾಯಚೂರಿನಲ್ಲಿ ಪ್ರಾದೇಶಿಕ ವಿಜ್ಞಾನ ಕೇಂದ್ರ ಮಂಜೂರಾಗಿದೆ. ಅದಕ್ಕೆ ಕೇಂದ್ರ ಸರ್ಕಾರದ ಅನುದಾನ ಮತ್ತು ಒಪ್ಪಿಗೆ ಸಿಕ್ಕಿದೆ. ಯೋಜನೆಗೆ 26 ಕೋಟಿಯನ್ನು ಮುಖ್ಯಮಂತ್ರಿಗಳು ಶೀಘ್ರದಲ್ಲಿಯೇ ಶಂಕುಸ್ಥಾಪನೆ ಮಾಡಲಿದ್ದಾರೆ. ವಿಜ್ಞಾನ ಉಪಕೇಂದ್ರಗಳನ್ನು ಮುಂದಿನ ದಿನಗಳಲ್ಲಿ ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನಾಗಿ ರೂಪಿಸುವ ಸಾಧ್ಯತೆ ಇದೆ ಎಂದರು. ಬೆಂಗಳೂರಿನ ಬಳಿ ವಿಜ್ಞಾನ ನಗರ ಮಾಡಲು ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆಯಲಾಗಿದೆ. ದೇವನಹಳ್ಳಿ ಬಳಿ ಕೆಐಎಡಿಬಿಯಿಂದ 20 ಎಕರೆ ಜಾಗ ಪಡೆಯಲಾಗಿದೆ. 300 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುವುದು. ಮಂಗಳೂರಿನ ಪಿಲಿಕುಳದಲ್ಲಿ ಕೂಡ ಅಭಿವೃದ್ಧಿ ನಡೆಯುತ್ತಿದೆ. ಮಕ್ಕಳಿಗೆ ಅನುಕೂಲವಾಗುವ ರೀತಿಯಲ್ಲಿ 11 ಮೊಬೈಲ್ ತಾರಾಲಯಗಳನ್ನು ತಯಾರು ಮಾಡಲಾಗಿದೆ.


ಉದಯವಾಹಿನಿ ಚಿತ್ರ

ಒಂದು ವಾರದಲ್ಲಿ ಮೊಬೈಲ್ ವಾಹನಗಳನ್ನು ಲೋಕಾರ್ಪಣೆ ಮಾಡಲಾಗುವುದು ಎಂದು ಹೇಳಿದರು. ಕೆಸಿ ವ್ಯಾಲಿ, ಎಚ್‌ಎನ್ ವ್ಯಾಲಿ ನೀರನ್ನು ಸಂಸ್ಕರಿಸಿ ಬಿಡಲಾಗುತ್ತಿದೆ. 1700 ಕೋಟಿ ವೆಚ್ಚದಲ್ಲಿ ವೃಷಭಾವತಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಇದರಿಂದಾಗಿ ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳ ಸುಮಾರು 700 ಕೆರೆಗಳನ್ನು ಸಂಸ್ಕರಿಸಿದ ನೀರಿನಿಂದ ತುಂಬಿಸಲಾಗುವುದು. ಸುಮಾರು 99 ಟಿಎಂಸಿ ನೀರಿನ ಲಭ್ಯತೆಯನ್ನು ನಿರೀಕ್ಷಿಸಲಾಗುತ್ತಿದೆ ಎಂದರು.

**ವಿಜ್ಞಾನ ಕೇಂದ್ರ ಮಂಜೂರು**

ಕೃಷ್ಣಾ ಟ್ರಿಬ್ಯುನಲ್ ತೀರ್ಪಿನ ನಂತರ ನೋಟಿಫಿಕೇಷನ್ ಮಾಡಬೇಕಾಗಿದೆ. ನದಿಯ ಡ್ಯಾಂ ಎತ್ತರ ಮಾಡಲು ಟ್ರಿಬ್ಯುನಲ್ ತೀರ್ಪು ನಮ್ಮ ಪರವಾಗಿ ಬಂದಿದೆ. ಕೇಂದ್ರ ಸರ್ಕಾರ ಇನ್ನೂ ನೋಟಿಫಿಕೇಷನ್ ಮಾಡದೆ ಇದ್ದರೂ, ನಾವು 35 ಲಕ್ಷ ಎಕರೆ ವ್ಯವಸಾಯ ಭೂಮಿ, 25 ಲಕ್ಷ ಎಕರೆ ಒಣ ಭೂಮಿ ಅಭಿವೃದ್ಧಿಪಡಿಸಲು ಭೂ ಸ್ವಾಧೀನಕ್ಕೆ 55 ಸಾವಿರ ಕೋಟಿ ಖರ್ಚು ಮಾಡಲು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ ಎಂದರು.

# ಅರ್ಹ ಫಲಾನುಭವಿಗಳಿಗೆ ಶೀಘ್ರ ಪರಿಹಾರ: ಜಿಲ್ಲಾಧಿಕಾರಿ

● ನಾಲೆ ಒಡೆದು ಬೆಳೆ ಹಾನಿ: ಬಾಯರ್ ಸ್ಥಾಪನೆಗೆ ಡಿಪಿಆರ್, ವಿಳಂಬ ಮಾಡದೆ ಶೀಘ್ರವಾಗಿ ಪಾವತಿ ಮಾಡಬೇಕು

• ಉದಯವಾಹಿನಿ, ಮಂಡ್ಯ

ಮೈಷುಗರ್ ಕಾರ್ಖಾನೆಯ ಬಾಯರ್ ಹೌಸ್ ನಿರ್ಮಾಣದ ಕುರಿತು ಡಿ.ಪಿ.ಆರ್. ಕಳುಹಿಸಲಾಗಿದೆ. ಶೀಘ್ರವಾಗಿ ಮೈಷುಗರ್ ಕಾರ್ಖಾನೆಯಲ್ಲಿ ಬಾಯರ್ ಸ್ಥಾಪನೆ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಕುಮಾರ ತಿಳಿಸಿದರು. ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲೆಯ ರೈತರ ಸಮಸ್ಯೆಗಳನ್ನು ಚರ್ಚಿಸಲು ಆಯೋಜಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯ ಕಬ್ಬು ಬೆಳೆಗಾರರ ಬಾಕಿ ಹಣವನ್ನು ಸಕ್ಕರೆ ಕಾರ್ಖಾನೆಗಳು ಯಾವುದೇ ವಿಳಂಬ ಮಾಡದೆ ಶೀಘ್ರವಾಗಿ ಪಾವತಿ ಮಾಡಬೇಕು ಇಲ್ಲವಾದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಿ.ಡಿ.ಎಸ್. ನಾಲೆ ಸುಮಾರು 400 ವರ್ಷಗಳಷ್ಟು ಹಳೆಯದಾಗಿದೆ. ಪ್ರಸ್ತುತ ಸಿ.ಡಿ.ಎಸ್. ನಾಲೆಯಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ. ರೈತರು ಸಹಕರಿಸಬೇಕು. ಶ್ರೀರಂಗಪಟ್ಟಣದಲ್ಲಿ ಸಿ.ಡಿ.ಎಸ್ ನಾಲೆ ಒಡೆದು ರೈತರಿಗೆ ಉಂಟಾಗಿದ್ದ ಬೆಳೆ ಹಾನಿ ಕುರಿತು ಸಮೀಕ್ಷೆ ಮಾಡಲಾಗಿದ್ದು, ಪರಿಹಾರದ ಪೋರ್ಟಲ್‌ನಲ್ಲಿ ಮಾಹಿತಿ ದಾಖಲಿಸಲಾಗಿದೆ. ಮುಂದಿನ ದಿನಗಳಲ್ಲಿ ಅರ್ಹ ಫಲಾನುಭವಿಗಳ ಖಾತೆಗೆ ಪರಿಹಾರದ ಹಣ ನೇರವಾಗಿ ಜಮೆಯಾಗುತ್ತದೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

**ಸಮಸ್ಯೆಗಳ ಪಟ್ಟಿ ಕೊಡಿ:** ರೈತರಿಗೆ ಸರ್ಕಾರ ನೀಡುವ ಪರಿಹಾರದ ಹಣ, ಗೌರವಧನವನ್ನು ಬ್ಯಾಂಕುಗಳು ಸಾಲಕ್ಕೆ ಮನ್ನಾ ಮಾಡಿಕೊಳ್ಳುವಂತಿಲ್ಲ. ನಾವು ಆರ್‌ಬಿಐ ನಿಯಮಗಳನ್ನು ಉಲ್ಲಂಘಿಸಿ ಏನನ್ನೂ ಮಾಡುವಂತಿಲ್ಲ. ರೈತರು ಬ್ಯಾಂಕುಗಳಲ್ಲಿ ತಮಗೆ ಉಂಟಾಗುತ್ತಿರುವ ಸಮಸ್ಯೆಗಳನ್ನು ಪಟ್ಟಿ ಮಾಡಿ ಕೊಡಿ. ನಿಯಮಗಳ ಸಡಿಲೀಕರಣಕ್ಕೆ ಶಿಫಾರಸು ಮಾಡಿ ಮನವಿ ಸಲ್ಲಿಸುತ್ತೇವೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಈಗಾಗಲೇ ತಾತ್ಕಾಲಿಕ ಭತ್ತ ಮತ್ತು ರಾಗಿ ನೋಂದಣಿ ಕೇಂದ್ರಗಳನ್ನು ತೆರೆಯಲಾಗಿದೆ. ಶಾಶ್ವತವಾಗಿ ನೋಂದಣಿ ಕೇಂದ್ರಗಳನ್ನು ತೆರೆಯಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಪ್ರಸ್ತುತ ರಾಗಿಗೆ ಕೊಡಲು ರೈತರು ಮುಂದಾಗಿದ್ದಾರೆ ಭತ್ತಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ರೈತರು ನೋಂದಣಿ ಆಗಿಲ್ಲ. ನೋಂದಣಿಗೆ ಇನ್ನೂ ದಿನಗಳು ಬಾಕಿ ಇರುವುದರಿಂದ ಮತ್ತಷ್ಟು ರೈತರು ನೋಂದಣಿ ಮಾಡಿಕೊಳ್ಳುವ ನಿರೀಕ್ಷೆ ಇದೆ ಎಂದರು. ಸಭೆಯಲ್ಲಿ ಮೈಷುಗರ್ ಅಧ್ಯಕ್ಷ ಸಿ.ಡಿ. ಗಂಗಾಧರ್, ಕಾವೇರಿ ನೀರಾವರಿ ನಿಗಮದ ರಘುರಾಮ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಶೋಕ್ ಪಾಲ್ಗೊಂಡಿದ್ದರು.

> ರೈತರಿಗೆ ಬಾಧಿಸುತ್ತಿರುವ ಮೈಕ್ರೋ ಫೈನಾನ್ಸ್‌ಗಳಿಗೆ ಈಗಾಗಲೇ ಎರಡು ಸಭೆ ನಡೆಸಿ ಸೂಚನೆ ನೀಡಲಾಗಿದೆ. ಮೈಕ್ರೋ ಫೈನಾನ್ಸ್‌ಗಳು ಜಿಲ್ಲಾಡಳಿತದ ಸೂಚನೆಯಂತೆ ಕಾರ್ಯ ನಿರ್ವಹಿಸುತ್ತಿರುವ ಕುರಿತು ಪರಿಶೀಲನೆ ನಡೆಸಲಾಗುವುದು.
> – ಕುಮಾರ, ಜಿಲ್ಲಾಧಿಕಾರಿ

**ಡ್ಯಾಂ ಸುತ್ತಮುತ್ತ ಬ್ಲಾಸ್ಟಿಂಗ್‌ಗೆ ಅವಕಾಶವಿಲ್ಲ**

ಕೆ.ಆರ್.ಎಸ್. ಅಣೆಕಟ್ಟೆಯ 20 ಕಿ.ಮೀ ವ್ಯಾಪ್ತಿಯಲ್ಲಿ ಬ್ಲಾಸ್ಟಿಂಗ್ ಮಾಡಲು ಅವಕಾಶ ಕೊಟ್ಟಿಲ್ಲ. ಸದರಿ ವ್ಯಾಪ್ತಿಯಲ್ಲಿ ಯಾರೇ ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದಂತೆ ಸ್ಫೋಟಗಳನ್ನು ಮಾಡುತ್ತಿದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಜಿಲ್ಲೆಯಲ್ಲಿ ಯಾರೇ ಅಕ್ರಮವಾಗಿ ಗಣಿಗಾರಿಕೆ ಮಾಡಿದರೆ ಮುಲಾಜಿಲ್ಲದೆ ಕಠಿಣ ಕಾನೂನು ಕ್ರಮ ಜಾರಿಗೊಳಿಸಲಾಗುವುದು' ಎಂದು ಜಿಲ್ಲಾಧಿಕಾರಿ ಕುಮಾರ ಎಚ್ಚರಿಸಿದರು.

## ಮಿನಿ ನ್ಯೂಸ್

### ಕಾಡಾನೆ ದಾಳಿ: ಕಲ್ಲನಕುಪ್ಪೆ ಗ್ರಾಮದಲ್ಲಿ ಬೆಳೆ ಹಾನಿ

• ಉದಯವಾಹಿನಿ, ಹಾರೋಹಳ್ಳಿ

ತಾಲ್ಲೂಕಿನ ಕಲ್ಲನಕುಪ್ಪೆ ಗ್ರಾಮದಲ್ಲಿ ಕಾಡಾನೆಗಳು ರಾಗಿ, ತೆಂಗು ಬೆಳೆ ತುಳಿದು ಹಾನಿಪಡಿಸಿವೆ. ಕಲ್ಲನಕುಪ್ಪೆ ಗ್ರಾಮದ ಶಿವರಾಜು ಅವರ ತೋಟಕ್ಕೆ ನುಗ್ಗಿದ ಕಾಡನೆಗಳು ತೋಟದಲ್ಲಿ 6ಕ್ಕೂ ಹೆಚ್ಚು ತೆಂಗಿನ ಗಿಡ, ರಾಗಿ ಬೆಳೆ, ರೇಷ್ಮೆ ಸಸಿಗಳ ನಾಶಪಡಿಸಿವೆ. ಬನ್ನೇರುಘಟ್ಟ ಅರಣ್ಯ ಪ್ರದೇಶದಲ್ಲಿ ಬೀಡುಬಿಟ್ಟಿರುವ ಕಾಡಾನೆಗಳ ಹಿಂಡು ರಾತ್ರಿ ವೇಳೆ ಹೊರ ಬಂದು ರೈತರ ಜಮೀನುಗಳ ಮೇಲೆ ದಾಳಿ ನಡೆಸುತ್ತಿವೆ. ಅಪಾರ ಪ್ರಮಾಣದ ಬೆಳೆ ನಾಶವಾಗಿ ಆರ್ಥಿಕವಾಗಿ ನಷ್ಟ ಅನುಭವಿಸುವಂತಾಗಿದೆ. ಆನೆಗಳ ಕಾಟದಿಂದ ಬೇಸತ್ತು ಬೆಳೆ ಬೆಳೆಯುವುದನ್ನು ನಿಲ್ಲಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪ್ರಗತಿಪರ ರೈತ ಎ.ಎಂ ಶಿವರಾಜು ನೋವು ತೋಡಿಕೊಂಡರು. ಮರಳವಾಡಿ ಹೋಬಳಿ ಹಲವು ಗ್ರಾಮಗಳಲ್ಲಿ ಪ್ರತಿನಿತ್ಯ ಅರಣ್ಯ ಇಲಾಖೆ ಸಿಬ್ಬಂದಿ ಗಸ್ತು ತಿರುಗುತ್ತಿದ್ದರೂ ರಾತ್ರಿ ವೇಳೆ ಆನೆಗಳು ದಾಳಿ ನಡೆಸುವುದು ನಿಂತಿಲ್ಲ. ಆನೆಗಳ ಹಾವಳಿ ನಿಯಂತ್ರಣಕ್ಕೆ ಕಡಿವಾಣ ಹಾಕಬೇಕು. ಬೆಳೆ ಹಾನಿ ಪರಿಹಾರ ಒದಗಿಸಬೇಕು ಎಂದು ರೈತರು ಆಗ್ರಹಿಸಿದರು.

### ಡಿಸಿ ಕಚೇರಿಯಲ್ಲಿ ಲಂಚ: ಗ್ರಾಮ ಆಡಳಿತಾಧಿಕಾರಿ ಮಂಜುನಾಥ ವಶಕ್ಕೆ

• ಉದಯವಾಹಿನಿ, ತುಮಕೂರು

ಜಮೀನಿನ ಖಾತೆ ಬದಲಾವಣೆಗೆ 10 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಕ್ಯಾತ್ಸಂದ್ರ ವೃತ್ತದ ಗ್ರಾಮ ಆಡಳಿತಾಧಿಕಾರಿ ಮಂಜುನಾಥ ಎಂಬುವರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ತಾಲ್ಲೂಕಿನ ಊರ್ಡಿಗೆರೆ ಹೋಬಳಿ ಮಾಚನಹಳ್ಳಿ ಗ್ರಾಮದ ಬಿ.ಯೋಗೀಶ್ ತಮ್ಮ ತಾತನ ಹೆಸರಿನಲ್ಲಿದ್ದ 38 ಗುಂಟೆ ಜಮೀನನ್ನು ಅವರ ತಂದೆ ಹೆಸರಿಗೆ ಖಾತೆ ಬದಲಾವಣೆ ಮಾಡಿಸಲು ಮಂಜುನಾಥ ಬಳಿ ಹೋಗಿದ್ದರು. ಇದಕ್ಕಾಗಿ ಮಂಜುನಾಥ 10 ಸಾವಿರ ಲಂಚ ಕೇಳಿದ್ದರು. ಯೋಗೀಶ್ ಹಣ ನೀಡಿದ್ದರು.

ಮತ್ತೆ 10 ಸಾವಿರಕ್ಕೆ ಬೇಡಿಕೆ ಇಟ್ಟಿದ್ದರು. ಹಣ ಕೊಡಲು ಇಷ್ಟವಿಲ್ಲದ ಯೋಗೀಶ್ ಲೋಕಾಯುಕ್ತ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಊರ್ಡಿಗೆರೆ ಹೋಬಳಿ ಕಂದಾಯ ನಿರೀಕ್ಷಕರ ಕಚೇರಿ ಹತ್ತಿರ ಲಂಚದ ಹಣ ತೆಗೆದುಕೊಳ್ಳುವಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ಮಂಜುನಾಥ ಅವರನ್ನು ವಶಕ್ಕೆ ಪಡೆದಿದ್ದಾರೆ. ಲೋಕಾಯುಕ್ತ ಡಿವೈಎಸ್‌ಪಿ ಕೆ.ಎಂ. ಸಂತೋಷ್ ನೇತೃತ್ವದಲ್ಲಿ ಇನ್‌ಸ್ಪೆಕ್ಟರ್‌ಗಳಾದ ಬಿ.ಮೊಹಮ್ಮದ್ ಸಲೀಂ, ಕೆ.ಸುರೇಶ, ಶಿವರುದ್ರಪ್ಪ ಮೇಟಿ, ಟಿ.ರಾಜು ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿತ್ತು ಎಂದು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎ.ವಿ.ಲಕ್ಷ್ಮಿನಾರಾಯಣ ತಿಳಿಸಿದ್ದಾರೆ.

### ಒಕ್ಕಲಿಗರಿಗೆ ಅನ್ಯಾಯವಾದರೆ ಸುಮ್ಮನಿರಲ್ಲ: ನಂಜಾವಧೂತ ಸ್ವಾಮೀಜಿ

• ಉದಯವಾಹಿನಿ, ಕೋಲಾರ

ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯ ವರದಿಯಿಂದ ಒಕ್ಕಲಿಗ ಸಮುದಾಯಕ್ಕೆ ತೊಂದರೆಯಾದರೆ ಅಥವಾ ಏನಾದರೂ ಹೆಚ್ಚು ಕಮ್ಮಿಯಾಗಿ ಅನ್ಯಾಯವಾದರೆ ನಾವು ಸುಮ್ಮನೇ ಕೂರಲ್ಲ ಎಂದು ಪಟ್ಟನಾಯಕನಹಳ್ಳಿಯ ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಂಜಾವಧೂತ ಸ್ವಾಮೀಜಿ, ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಕೋಲಾರದಲ್ಲಿ ರಾಜ್ಯ ಒಕ್ಕಲಿಗರ ಸಂಘದ ಆಶ್ರಯದಲ್ಲಿ ಬುಧವಾರ ನಡೆದ ಬಾಲಕಿಯರ ಹಾಸ್ಟೆಲ್ ಕಟ್ಟಡಕ್ಕೆ ಶಂಕುಸ್ಥಾಪನೆ, ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸತ್ಕಾರ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಬಹಳ ವಿವೇಚನೆ ಹಾಗೂ ಎಚ್ಚರಿಕೆಯಿಂದ ವರದಿ ಕೊಡಬೇಕು. ಸರ್ಕಾರ ಕೂಡ ಎಲ್ಲಾ ರೀತಿಯಲ್ಲಿ ಯೋಚನೆ ಮಾಡಿ ಯಾವುದೇ ಸಮುದಾಯಗಳಿಗೆ ತೊಂದರೆ ಆಗದಂತೆ ಎಲ್ಲಾ ವರ್ಗಗಳಿಗೆ ನ್ಯಾಯ ಒದಗಿಸಬೇಕು. ಧ್ವನಿ ಇಲ್ಲದ ಸಣ್ಣ ಸಮುದಾಯಗಳನ್ನೂ ಗುರುತಿಸಬೇಕು ಎಂದು ಹೇಳಿದರು.

### ಆತ್ಮಹತ್ಯೆ ಮಾಡಿಕೊಂಡ ರೈತನ ಕುಟುಂಬಕ್ಕೆ 5 ಲಕ್ಷ ಪರಿಹಾರ

• ಉದಯವಾಹಿನಿ, ಮಂಡ್ಯ

ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ಕಾವೇರಿ ಉದ್ಯಾನದಲ್ಲಿ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದ ರೈತ ಬುಧವಾರ ಬೆಳಿಗ್ಗೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಕೆ.ಆರ್. ಪೇಟೆ ತಾಲ್ಲೂಕು ಮೂಡನಹಳ್ಳಿ ಗ್ರಾಮದ ರೈತ ಮಂಜೇಗೌಡ ಎಂ.ಡಿ (55) ಮೃತರು. ಕೃಷಿ ಸಚಿವ, ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿ ಅವರು ಬುಧವಾರ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿ ಮೃತ ರೈತನಿಗೆ ಅಂತಿಮ ನಮನ ಸಲ್ಲಿಸಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಬಳಿಕ ಮೃತ ರೈತನ ಕುಟುಂಬಸ್ಥರಿಗೆ 5 ಲಕ್ಷ ಪರಿಹಾರವನ್ನು ಘೋಷಿಸಿದ್ದಾರೆ. ಅಲ್ಲದೆ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಹೆಚ್ಚುವರಿ ಪರಿಹಾರ ನೀಡುವುದಾಗಿ ಭರವಸೆ ನೀಡಿದ್ದಾರೆ. ಮೃತ ರೈತನ ಜಾಮೀನು ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಸದರಿ ಜಾಗವನ್ನು ಜಂಟಿ ಸರ್ವೆ ನಡೆಸಿ ಸ್ಥಳವೇನಾದರೂ ಅರಣ್ಯ ಇಲಾಖೆಗೆ ಒಡೆತನಕ್ಕೆ ಸೇರದಿದ್ದರೆ ಸದರಿ ಜಾಗವನ್ನು ಕುಟುಂಬಸ್ಥರಿಗೆ ನೀಡುವುದಾಗಿ ಸಚಿವರು ಭರವಸೆ ನೀಡಿದ್ದಾರೆ.

ಅಂತರಾಳದಿಂದ... EDITORIAL

# ಕಸ: ರಸ್ತೆಗಳ ಮೇಲಷ್ಟೇ ಅಲ್ಲ, ನಡವಳಿಕೆಯಲ್ಲೂ ಕೊಳಕಿದೆ




ಕಸ ಸುರಿಯುವ ಹಬ್ಬ' ಹೆಸರಿನ ಈ ಅಭಿಯಾನ, ಸಮಸ್ಯೆಯನ್ನು ಸರಳೀಕರಿಸುವ ಹಾಗೂ ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನವಾಗಿದೆ. ರಸ್ತೆ, ಖಾಲಿ ನಿವೇಶನ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವುದನ್ನು ಅಭ್ಯಾಸ ಮಾಡಿಕೊಂಡಿರುವವರ ಮನೆಯ ಮುಂದೆ ತ್ಯಾಜ್ಯವನ್ನು ಸುರಿಯುವುದರ ಜೊತೆಗೆ ದಂಡವನ್ನೂ ವಿಧಿಸುವುದರ ಮೂಲಕ ಅವರಿಗೆ ಕಸದ ಸಮಸ್ಯೆಯ ಗಾಂಭೀರ್ಯವನ್ನು ಅರ್ಥ ಮಾಡಿಸುವುದು ಬಿಎಸ್‌ಡಬ್ಲ್ಯುಎಂಎಲ್ ಉದ್ದೇಶ. ಆದರೆ, ಹಬ್ಬ ಎಂದು ಕರೆಯಲಾಗುತ್ತಿರುವ ಈ ಅಭಿಯಾನ ವ್ಯಂಗ್ಯದಂತಿದ್ದು, ಎಚ್ಚರಿಕೆಯ ಬದಲಾಗಿ ಪ್ರತೀಕಾರ ನ್ಯಾಯದ ಪರಿಕಲ್ಪನೆಯನ್ನು ಒಳಗೊಂಡಿರುವಂತಿದೆ. ನಾಗರಿಕರ ಮನೆಗಳ ಮುಂದೆ ಕಸ ಸುರಿಯುವುದನ್ನು ಸಾಂಕೇತಿಕ ಎಂದು ಭಾವಿಸುವುದಾದರೂ, ಅದು ಸಾರ್ವಜನಿಕರ ಅಶಿಸ್ತಿಗಿಂತಲೂ ಹೆಚ್ಚಾಗಿ ನಾಗರಿಕ ವ್ಯವಸ್ಥೆಯ ವೈಫಲ್ಯವನ್ನು ಸೂಚಿಸುವಂತಿದೆ. ಸಮಸ್ಯೆ ಉಲ್ಬಣಗೊಂಡಿರುವುದರಲ್ಲಿ ಜನರ ಪಾತ್ರವೂ ಇದೆ ಎನ್ನುವುದು ನಿರ್ವಿವಾದ. ಸಾರ್ವಜನಿಕರ ಹೊಣೆಗೇಡಿತನ ಬೆಂಗಳೂರಿನಲ್ಲಿ ಆಳವಾಗಿ ಬೇರೂರಿದೆ. ಯಾವುದೇ ಅಳುಕಿಲ್ಲದೆ ರಸ್ತೆಗಳಲ್ಲಿ ಕಸವನ್ನು ಚೆಲ್ಲುವವರು ಇರುವಂತೆಯೇ, ಆ ಕಸವನ್ನು ಸ್ವಚ್ಛಗೊಳಿಸುವುದು ಮತ್ತೊಬ್ಬರ ಕರ್ತವ್ಯ ಎಂದು ಭಾವಿಸಿರುವ ನಿವಾಸಿಗಳೂ ಇದ್ದಾರೆ. ಈ ಮನೋಧರ್ಮ ನಗರವಾಸಿಗಳಲ್ಲಿ ನೈತಿಕಪ್ರಜ್ಞೆ ಕ್ಷೀಣವಾಗಿರುವುದರ ಸಂಕೇತದಂತಿದೆ. ಆದರೆ, ಈ ಹೊಣೆಗೇಡಿತನವನ್ನು ಮುಂದುಮಾಡಿ, ಅಧಿಕಾರಿಗಳು ತಮ್ಮ ಜವಾಬ್ದಾರಿಗಳಿಂದ ನುಣುಚಿಕೊಳ್ಳುವುದು ಸಾಧ್ಯವಿಲ್ಲ. ಶಿಸ್ತಿನ ಬಗ್ಗೆ ಪಾಠ ಮಾಡುವ ಮೊದಲು, ಬಿಎಸ್‌ಡಬ್ಲ್ಯುಎಂಎಲ್ ಹಾಗೂ ಅದರ ಮಾತೃಸಂಸ್ಥೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ತಮ್ಮ ಕಾರ್ಯನಿರ್ವಹಣೆಯನ್ನು ಮೊದಲು ಸುಧಾರಿಸಿಕೊಳ್ಳಬೇಕು. ಘನ ತ್ಯಾಜ್ಯ ನಿರ್ವಹಣೆಗಾಗಿ ಪ್ರತಿ ವರ್ಷ ದುಬಾರಿ ಸುಂಕ ಸಂಗ್ರಹಿಸುವ ಸಂಸ್ಥೆಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಬದ್ಧತೆಯನ್ನು ಪ್ರದರ್ಶಿಸುತ್ತಿಲ್ಲ. ಕಸದ ಮಾಫಿಯಾ' ಸಕ್ರಿಯವಾಗಿರುವ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹಿಂದೊಮ್ಮೆ ಆಡಿದ್ದ ಮಾತೇ ವ್ಯವಸ್ಥೆಯಲ್ಲಿನ ಹುಳುಕನ್ನೂ ಕಾಣಿಸುವಂತಿದೆ. ಭ್ರಷ್ಟಾಚಾರ ಹಾಗೂ ಅದಕ್ಷತೆ ಸಮಸ್ಯೆ ಹೆಚ್ಚಾಗಲಿಕ್ಕೆ ಪ್ರಮುಖ ಕಾರಣಗಳು. ವಾಸ್ತವ ಹೀಗಿರುವಾಗ, ಸಾಂಕೇತಿಕ ಕ್ರಮಗಳಿಂದ ಹೆಚ್ಚಿನ ಉಪಯೋಗವಿಲ್ಲ. ಕಸ ಎಸೆಯುವವರಲ್ಲಿ ಲಜ್ಜೆ ಉಂಟುಮಾಡುವ ಪ್ರಯತ್ನದಿಂದ ಸಾಧ್ಯವಾಗಬಹುದಾದ ಸಾರ್ವಜನಿಕ ಎಚ್ಚರ ದೀರ್ಘ ಕಾಲ ಉಳಿಯುವುದೂ ಇಲ್ಲ. ಗಡಿಯಾರದಂತೆ ಎಚ್ಚರತಪ್ಪದೆ ಕಾರ್ಯ ನಿರ್ವಹಿಸುವ ದಕ್ಷ ಹಾಗೂ ಪ್ರಾಮಾಣಿಕ ಕಸ ನಿರ್ವಹಣಾ ವ್ಯವಸ್ಥೆ ಬೆಂಗಳೂರಿಗೆ ಅತ್ಯಗತ್ಯವಾಗಿದೆ.

> ಎಲ್ಲೆಂದರಲ್ಲಿ ಕಸ ಸುರಿಯುವವರ ಮನೆಯ ಮುಂದೆ ತ್ಯಾಜ್ಯವನ್ನು ಸುರಿಯುವ ಮೂಲಕ ಕಸ ನಿರ್ವಹಣೆಯ ಬಗ್ಗೆ ಅರಿವು ಮೂಡಿಸುವ ಪ್ರಯತ್ನವನ್ನು 'ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ' (ಬಿಎಸ್‌ಡಬ್ಲ್ಯುಎಂಎಲ್) ನಡೆಸಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಕಸದ ತೊಟ್ಟಿಗಳು ಇಲ್ಲದಿರುವುದು ಸಮಸ್ಯೆ ಹೆಚ್ಚಾಗಲಿಕ್ಕೆ ಕಾರಣಗಳಲ್ಲೊಂದು. ಮನೆಯ ಹಂತದಲ್ಲೇ ಕಸ ವಿಂಗಡಣೆ ನಡೆಯಬೇಕೆನ್ನುವ ಉದ್ದೇಶದಿಂದ, ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ ಕಸದ ತೊಟ್ಟಿಗಳನ್ನು ತೆರವುಗೊಳಿಸಲಾಗಿದೆ. ರಾತ್ರಿ ಪಾಳಿಗಳಲ್ಲಿ ಕೆಲಸ ಮಾಡುವ ನೌಕರರು ಬೆಳಗಿನ ಸಮಯದಲ್ಲಿ ಮನೆಯ ಮುಂದೆ ಬರುವ ತ್ಯಾಜ್ಯ ಸಂಗ್ರಹದ ವಾಹನಗಳಿಗೆ ಕಸ ನೀಡಬೇಕೆಂದು ನಿರೀಕ್ಷಿಸಲಾಗದು.

ತ್ಯಾಜ್ಯ ವಿಲೇವಾರಿಗೆ ತೊಟ್ಟಿಗಳು ಇಲ್ಲದೆ ಹೋದಾಗ, ಆ ಕಸ ರಸ್ತೆಯ ಪಾಲಾಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಕಸ ಸಂಗ್ರಹ ವಾಹನಗಳು ನಿಯಮಿತವಾಗಿ ಬರುವುದಿಲ್ಲ ಎನ್ನುವ ದೂರುಗಳೂ ಇವೆ. ಕಸ ಎಸೆಯುವವರನ್ನು ಶಿಕ್ಷಿಸಬೇಕೆನ್ನುವ ಮನಃಸ್ಥಿತಿಯಿಂದ ಹೊರಬಂದು, ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಜಿಬಿಎ ಮುಂದಾಗಬೇಕು. ತ್ಯಾಜ್ಯ ಸಂಗ್ರಹದ ಸಮಯ, ಮಾನವ ಸಂಪನ್ಮೂಲಗಳ ಕೊರತೆ ಹಾಗೂ ನಾಗರಿಕರ ಅಸಡ್ಡೆ ಸೇರಿದಂತೆ ಯಾವ ಕಾರಣದಿಂದಾಗಿ ಸಮಸ್ಯೆ ತೀವ್ರಗೊಂಡಿದೆ ಎನ್ನುವುದನ್ನು ಕಂಡುಕೊಳ್ಳಲಿಕ್ಕಾಗಿ, ಕಸದ ಸಮಸ್ಯೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ಮನೆ ಮನೆ ಸಮೀಕ್ಷೆ ನಡೆಸಬಹುದಾಗಿದೆ. ಕಾನೂನಿನ ಅನುಷ್ಠಾನ ನ್ಯಾಯಯುತವಾಗಿ ಇರಬೇಕೇ ಹೊರತು, ಪ್ರತೀಕಾರದಂತೆ ಪ್ರತಿಕ್ರಿಯಾತ್ಮಕವಾಗಿ ಇರಬಾರದು. ಬೆಂಗಳೂರಿನ ತ್ಯಾಜ್ಯ ನಿರ್ವಹಣೆ ಸಮಸ್ಯೆ ರಸ್ತೆಗಳಲ್ಲಿನ ಗಲೀಜಿಗೆ ಸಂಬಂಧಿಸಿದಷ್ಟೇ ಅಲ್ಲ; ಅದು, ವರ್ತನೆಯಲ್ಲಿನ ಕೊಳಕಿಗೆ ಸಂಬಂಧಿಸಿದ್ದೂ ಆಗಿದೆ. ನಗರದ ಸ್ವಚ್ಛತೆ ಸಾರ್ವಜನಿಕರ ಹೊಣೆಗಾರಿಕೆ ಆಗಿರುವಂತೆ, ಗುಣಮಟ್ಟದ ಸೇವೆ ಕಲ್ಪಿಸುವುದು ಆಡಳಿತದ ಕರ್ತವ್ಯವೂ ಆಗಿದೆ.

# ರಾಮಾಯಣ



## ರಾವಣನು ಸೀತಾದೇವಿಯನ್ನು ಅಪಹರಿಸಿದ್ದು

• ಹಿಂದಿನ ಸಂಚಿಕೆಯಿಂದ 120 ನೆಯ ಅಧ್ಯಾಯ

ದಶರಥ ಮಹಾರಾಯನು ಪಟ್ಟವನ್ನು ಕಟ್ಟಬೇಕೆಂದಿರುವಾಗ ರಾಜ್ಯಭೋಗವನ್ನು ಬಿಟ್ಟು ಸಾಧುವಿನಂತೆ ಕಾಡಿನಲ್ಲಿ ಅಲೆಯುತ್ತಿದ್ದಾನೆ. ನೀನು ಅಜ್ಞಾನಿ: ರಾಮರಲ್ಲಿ ಯಾವ ಸದ್ಗುಣಗಳಿವೆಯೆಂದು ಆತನಲ್ಲಿ ಅನುರಕ್ತಳಾಗಿದ್ದೀಯೆ ಲೋಕದಲ್ಲಿ ನಿನ್ನಂಥ ಮೂಢಳಿಲ್ಲ. ಆತನು ಒಬ್ಬ ಸ್ತ್ರೀಯ ಮಾತನ್ನು ಕೇಳಿ ರಾಜ್ಯಭೋಗವನ್ನೂ ಸಮಸ್ತ ಮಿತ್ರಜನಗಳನ್ನೂ ಬಿಟ್ಟು, ಘೋರಾರಣ್ಯಕ್ಕೆ ಬಂದು ವಾಸವಾಗಿದ್ದಾನೆ ಎಂದು ನುಡಿದನು. ಆಮೇಲೆ ಸೀತಾದೇವಿಯ ಸಮೀಪಕ್ಕೆ ಬಂದು, ಆಕಾಶದಲ್ಲಿ ಬುಧನು ರೋಹಿಣಿಯನ್ನು ಹಿಡಿಯುವಂತೆ ತನ್ನ ಎಡಗೈಯಿಂದ ಅವಳ ತುರುಬನ್ನು ಹಿಡಿದನು. ಆಗ ಕೋರೆದಾಡೆಗಳಿಂದ ಅತಿಭಯಂಕರವಾದ ಮುಖಗಳುಳ್ಳವನಾಗಿ ಕಾಲಮೃತ್ಯುವಿನಂತೆ ಕಾಣುತ್ತಿದ್ದ ಅವನನ್ನು ಕಂಡು ವನದೇವತೆಗಳು ಭಯಪಟ್ಟು ದಿಕ್ಕುದಿಕ್ಕುಗಳಿಗೂ ಓಡಿಹೋಗತೊಡಗಿದರು. ಅದೇ ಕಾಲದಲ್ಲಿ ಅಂತರಿಕ್ಷಮಾರ್ಗದಲ್ಲಿ ಸಂಚರಿಸುವ ದೇಸರಕತ್ತೆಗಳಿಂದ ಮೇಲೈಸಿದ ರಥವು ಸೀತೆಯ ಮುಂದೆ ಕಾಣಿಸಿಕೊಂಡಿತು. ರಾವಣನು ನಿಷ್ಠುರ ವಚನಗಳಿಂದ ಸೀತಾದೇವಿಯನ್ನು ಬೆದರಿಸಿ, ರಾಮಾ ರಾಮಾ ಎಂದು ಮೊರೆಯಿಡುತ್ತ ನಾಗರಹಾವಿನಂತೆ ಮೈಯನ್ನು ಕೊಂಕಿಸಿಕೊಂಡು ಬಿದ್ದಿದ್ದ ಸೀತಾದೇವಿಯನ್ನು ರಥದ ಮೇಲೆ ಹಾಕಿಕೊಂಡು ಖೇಚರಮಾರ್ಗವಾಗಿ ಹೊರಟನು.

**ಆ ಸಮಯದಲ್ಲಿ ಸೀತಾದೇವಿಯು ಉನ್ಮಾದಗ್ರಸ್ತಳಂತೆ ಕೂಗಿಕೊಂಡಳು:** ಹಾ ಪರಾಕ್ರಮಶಾಲಿ, ಶ್ರೀರಾಮ, ಹಾ ಲಕ್ಷ್ಮಣ, ನನ್ನ ಚಿತ್ತವೃತ್ತಿಯನ್ನರಿತು ನಡೆಯತಕ್ಕ ನೀವು ಎಲ್ಲಿಗೆ ಹೋದಿರಿ ದುರಾತ್ಮನಾದ ರಾವಣನು ಹಿಡಿದುಕೊಂಡು ಹೋಗುತ್ತಿರುವ ನನ್ನನ್ನು ಏತಕ್ಕೆ ರಕ್ಷಿಸದಿದ್ದೀರಿ ಶ್ರೀರಾಮ ರಾವಣನು ಬಲಾತ್ಕಾರದಿಂದ ನನ್ನನ್ನು ಹಿಡಿದುಕೊಂಡು ಹೋಗುತ್ತಿದ್ದಾನೆ. ನನ್ನನ್ನು ಯಾವ ಕಾರಣ ಕೃಪಾದೃಷ್ಟಿಯಿಂದ ನೋಡದಿದ್ದೀಯೆ ದುರ್ನೀತಿಯಲ್ಲಿ ನಡೆಯುವ ದುರಾತ್ಮರನ್ನು ಶಿಕ್ಷಿಸುವ ನೀನು ನನ್ನನ್ನು ಹಿಡಿದುಕೊಂಡು ಹೋಗುವ ದುರಾತ್ಮನಾದ ರಾವಣನನ್ನು ಯಾವಕಾರಣ ದಿಂದ ಉಪೇಕ್ಷೆಮಾಡಿದ್ದೀಯೆ ನನ್ನ ಜನ್ಮಾಂತರದ ಪಾಪಕರ್ಮವು ಫಲ ಕೊಡುವ ಕಾಲ ಬಂದದ್ದರಿಂದ ಆ ಕಾಲವೇ ರಾವಣನಿಗೆ ಅನುಕೂಲವಾಗಿ ನಿನ್ನನ್ನು ಅಗಲುವ ಹಾಗೆ ಮಾಡಿತು. ಈ ಜನಸ್ಥಾನದಲ್ಲಿ ನನ್ನ ಪ್ರಾಣಗಳನ್ನು ಅಪಹರಿಸುವ ದುಃಖವನ್ನು ಪಡೆಯಿಸಿತು. ಅಕಟಕಟಾ ಇದರಿಂದ ನನ್ನ ಅತ್ತೆಯಾದ ಕೈಕೇಯಾದೇವಿಯ ಮನಸ್ಸಿಗೆ ಸಂತೋಷವಾದೀತು ಧರ್ಮಾತ್ಮ ಶ್ರೀರಾಮ. ನಿನ್ನನ್ನು ಆಗಲಿ ಹೋಗುತ್ತಿದ್ದೇನೆ.

ನಾನು ಪುಷ್ಪಗಳನ್ನು ಕೊಯ್ಯುತ್ತಿದ್ದವಳು. ನನ್ನ ಜನ್ಮಾಂತರದ ಪಾಪಕರ್ಮದಿಂದ ನಿನ್ನನ್ನು ಕರೆದು ಆ ಮಾಯಾಮೃಗವನ್ನು ಹಿಡಿತಂದು ಕೊಡಹೇಳಿ. ಕಳುಹಿದೆನು ಎಲೈ ವನದೇವತೆಗಳಿರಾ, ರಾವಣನು ಬಲಾತ್ಕಾರದಿಂದ ನನ್ನನ್ನು ಹಿಡಿದು ಕೊಂಡು ಹೋಗುತ್ತಿದ್ದಾನೆ.


ಮುಂದುವರಿಯುವುದು...

# ಕೂದಲಿಗೆ ನುಗ್ಗೆಸೊಪ್ಪಿನ ರಸ, ಪುಡಿ?

ನುಗ್ಗೆ ಸೊಪ್ಪು ಸಾಕಷ್ಟು ಪೋಷಕಾಂಶಗಳನ್ನು ಹೊಂದಿರುವ ಸೊಪ್ಪಾಗಿದೆ. ಇದು ಕೂದಲಿನ ಆರೋಗ್ಯವನ್ನು ಉತ್ತೇಜಿಸುತ್ತದೆ. ಇದನ್ನು ಯಾವ ರೀತಿ ಸೇವಿಸೋದು ಒಳ್ಳೆಯದು ಎನ್ನುವುದನ್ನು ತಿಳಿಯೋಣ.

ನುಗ್ಗೆಕಾಯಿ ನುಗ್ಗೆಸೊಪ್ಪಿನ ಸೇವನೆ ಆರೋಗ್ಯಕ್ಕೆ ಬಹಳ ಒಳ್ಳೆಯದು ಎನ್ನುವುದು ನಿಮಗೆ ಗೊತ್ತೇ ಇದೆ. ಆದರೆ ಕೂದಲು ಬೆಳವಣಿಗೆಗೆ ನುಗ್ಗೆ ಸೊಪ್ಪಿನ ಪುಡಿ ಅಥವಾ ರಸ ಹೆಚ್ಚು ಪ್ರಯೋಜನಕಾರಿಯೇ ಎಂಬ ಬಗ್ಗೆ ಜನರು ಸಾಮಾನ್ಯವಾಗಿ ಗೊಂದಲಕ್ಕೊಳಗಾಗುತ್ತಾರೆ. ಇದು ಒಣ ನಿರ್ಜೀವ ಕೂದಲನ್ನು ಪುನರುಜ್ಜೀವನಗೊಳಿಸುವ ಕಬ್ಬಿಣ, ಜೀವಸತ್ವಗಳು ಮತ್ತು ಪ್ರೋಟೀನ್‌ಗಳ ನಿಧಿಯಾಗಿದೆ.

**ಕೂದಲಿಗೆ ನುಗ್ಗೆಸೊಪ್ಪಿನ ಪ್ರಯೋಜನಗಳು:** ಕೂದಲಿನ ಬಲ ಮತ್ತು ತ್ವರಿತ ಬೆಳವಣಿಗೆಗಾಗಿ ನುಗ್ಗೆ ಸೊಪ್ಪು ಇತ್ತೀಚಿನ ದಿನಗಳಲ್ಲಿ ಹೆಚ್ಚು ಜನಪ್ರಿಯವಾಗುತ್ತಿದೆ. ಇದು ಬೇರುಗಳನ್ನು ಪೋಷಿಸುವ ಸೂಪರ್‌ಫುಡ್ ಆಗಿದ್ದು ಕೂದಲು ವೇಗವಾಗಿ ಬೆಳೆಯಲು ಪ್ರಾರಂಭಿಸುತ್ತದೆ. ಇದನ್ನು ಪುಡಿ ರೂಪದಲ್ಲಿ ಸೇವಿಸಬೇಕೇ ಅಥವಾ ತಾಜಾ ರಸದಲ್ಲಿ ಸೇವಿಸಬೇಕೇ ಪುಡಿ ತನ್ನ ಪೌಷ್ಟಿಕಾಂಶದ ಮೌಲ್ಯವನ್ನು ಕಳೆದುಕೊಳ್ಳುತ್ತದೆಯೇ ಈ ಲೇಖನದಲ್ಲಿ ಈ ಗೊಂದಲಗಳನ್ನು ತೆರವುಗೊಳಿಸೋಣ ಮತ್ತು ನಿಮಗೆ ಯಾವುದು ಉತ್ತಮ ಎಂದು ಕಂಡುಹಿಡಿಯೋಣ.



**ನುಗ್ಗೆಸೊಪ್ಪಿನ ರಸ:** ತಾಜಾ ನುಗ್ಗೆಸೊಪ್ಪಿ ರಸವನ್ನು ಕುಡಿಯುವುದು ನಿಮ್ಮ ಆರೋಗ್ಯವನ್ನು ಸುಧಾರಿಸಲು ಅತ್ಯಂತ ಪರಿಣಾಮಕಾರಿ ಮಾರ್ಗವೆಂದು ಪರಿಗಣಿಸಲಾಗಿದೆ.

**ಗರಿಷ್ಠ ಪೋಷಣೆ:** ನೀವು ಎಲೆಗಳನ್ನು ರಸ ಮಾಡಿದಾಗ, ಅವು ಹೊಂದಿರುವ ಎಲ್ಲಾ ಪೋಷಕಾಂಶಗಳನ್ನು ನೀವು ತಕ್ಷಣವೇ ಮತ್ತು ಪೂರ್ಣ ಪ್ರಮಾಣದಲ್ಲಿ ಪಡೆಯುತ್ತೀರಿ, ಏಕೆಂದರೆ ಯಾವುದೇ ಸಂಸ್ಕರಣೆ ಒಳಗೊಂಡಿರುವುದಿಲ್ಲ. ತಾಜಾ ಎಲೆಗಳಲ್ಲಿರುವ ಜೀವಸತ್ವಗಳು ಮತ್ತು ಕಿಣ್ವಗಳು ಹೆಚ್ಚು ಸಕ್ರಿಯವಾಗಿರುತ್ತವೆ.

**ವೇಗದ ಹೀರಿಕೊಳ್ಳುವಿಕೆ:** ರಸವು ದೇಹಕ್ಕೆ ತ್ವರಿತವಾಗಿ ಹೀರಲ್ಪಡುತ್ತದೆ, ಪೋಷಕಾಂಶಗಳು ತಕ್ಷಣವೇ ನಿಮ್ಮ ರಕ್ತಪ್ರವಾಹವನ್ನು ಪ್ರವೇಶಿಸಲು ಮತ್ತು ನಿಮ್ಮ ಕೂದಲಿನ ಬೇರುಗಳನ್ನು ತಲುಪಲು ಅನುವು ಮಾಡಿಕೊಡುತ್ತದೆ.

ಆಹಾರ ತಜ್ಞರು ಹೆಚ್ಚಾಗಿ ಜ್ಯೂಸ್ ಮಾಡುವುದನ್ನು ಶಿಫಾರಸು ಮಾಡುತ್ತಾರೆ. ನೀವು ಪ್ರತಿದಿನ 30 ಮಿಲಿ ನುಗ್ಗೆಸೊಪ್ಪಿನ ರಸವನ್ನು ಸೇವಿಸಬಹುದು.

> ನುಗ್ಗೆಸೊಪ್ಪಿನ ಪುಡಿಯನ್ನು ತಾಜಾ ಎಲೆಗಳನ್ನು ಒಣಗಿಸಿ ತಯಾರಿಸಲಾಗುತ್ತದೆ. ಪುಡಿಯನ್ನು ರಸಕ್ಕಿಂತ ಹೆಚ್ಚು ಸಮಯದವರೆಗೆ ಸಂಗ್ರಹಿಸಬಹುದು.ಫ್ರೆಶ್ ನುಗ್ಗೆಸೊಪ್ಪಿ ಸಿಗದವರಿಗೆ ಇದು ಅನುಕೂಲಕರ ಆಯ್ಕೆಯಾಗಿದೆ.
> ಬಳಕೆಯ ಸುಲಭತೆ: ನೀವು ಪುಡಿಯನ್ನು ಯಾವುದೇ ಸಮಯದಲ್ಲಿ, ಎಲ್ಲಿ ಬೇಕಾದರೂ ಬಳಸಬಹುದು. ಇದನ್ನು ನೀರು, ಸ್ಮೂಥಿಗಳು, ಸೂಪ್‌ಗಳು ಅಥವಾ ಮೊಸರಿನಲ್ಲಿ ಬೆರೆಸುವುದು ಸುಲಭ. ತಾಜಾ ಎಲೆಗಳನ್ನು ಪಡೆಯಲು ಸಾಧ್ಯವಾಗದವರಿಗೆ ಇದು ಉತ್ತಮ ಆಯ್ಕೆಯಾಗಿದೆ.

**ಹೇರ್ ಮಾಸ್ಕ್‌ಗಳಿಗೆ ಉತ್ತಮ:** ನುಗ್ಗೆಸೊಪ್ಪಿನ ಪುಡಿ ಬಾಹ್ಯ ಕೂದಲಿನ ಆರೈಕೆಗೆ ಅತ್ಯುತ್ತಮವಾಗಿದೆ. ನೀವು ನುಗ್ಗೆಸೊಪ್ಪಿನ ಪುಡಿಯನ್ನು ಮೊಸರು, ತೆಂಗಿನ ಎಣ್ಣೆ ಅಥವಾ ಅಲೋವೆರಾ ಜೆಲ್‌ನೊಂದಿಗೆ ಬೆರೆಸಿ ಹೇರ್ ಮಾಸ್ಕ್ ಮಾಡಬಹುದು. ಈ ಮಾಸ್ಕ್ ನೆತ್ತಿಯನ್ನು ಮಸಾಜ್ ಮಾಡಲು ಮತ್ತು ಕೂದಲನ್ನು ಬಲಪಡಿಸಲು ಸಹಾಯ ಮಾಡುತ್ತದೆ.

**ಕೂದಲಿನ ಬೆಳವಣಿಗೆಗೆ ಉತ್ತಮ ಯಾವುದು:** ಕೂದಲಿನ ಬೆಳವಣಿಗೆಗೆ ಆಂತರಿಕ ಪೋಷಣೆ ಮತ್ತು ಬಾಹ್ಯ ಆರೈಕೆ ಎರಡೂ ಅಗತ್ಯವಿದೆ. ಕುಡಿಯಲು: ನೀವು ತಾಜಾ ಎಲೆಗಳನ್ನು ಹೊಂದಿದ್ದರೆ, ರಸವು ಉತ್ತಮವಾಗಿದೆ ಏಕೆಂದರೆ ಅದು ವೇಗವಾಗಿ ಪೋಷಣೆಯನ್ನು ನೀಡುತ್ತದೆ. ತಾಜಾ ಎಲೆಗಳು ಲಭ್ಯವಿಲ್ಲದಿದ್ದರೆ, ಪುಡಿಯನ್ನು ನೀರು ಅಥವಾ ಸ್ಮೂಥಿಯೊಂದಿಗೆ ಬೆರೆಸಿ ಕುಡಿಯಿರಿ.

**ಬಳಸಲು:** ಕೂದಲಿನ ಬೇರುಗಳಿಗೆ ನೇರವಾಗಿ ಪೋಷಣೆ ನೀಡಲು ಮೊರಿಂಗಾ ಪುಡಿಯನ್ನು ಕೂದಲಿನ ಮಾಸ್ಕ್ ಅಥವಾ ಪೇಸ್ಟ್ ಆಗಿ ನೆತ್ತಿಗೆ ಹಚ್ಚುವುದು ಅತ್ಯುತ್ತಮವಾಗಿದೆ.

# ಕೊತ್ತಂಬರಿ ಚಟ್ನಿ! ಮರೆಯದ ಸ್ವಾದ!

ನೀವು ಊಟದೊಂದಿಗೆ ಹಾಗೆ ಬೆಳಗ್ಗೆ ತಿಂಡಿಯೊಂದಿಗೆ ರುಚಿ ರುಚಿಯಾದ ಚಟ್ನಿ ಮಾಡಿ ಸವಿಯುವುದು ರೂಢಿ ಮಾಡಿಕೊಂಡಿರಬಹುದು, ಆದ್ರೆ ಚಟ್ನಿ ಅಂದ್ರೆ, ತೆಂಗಿನಕಾಯಿ ಬಳಸಿ ಮಾಡುವ ಚಟ್ನಿ ಅಥವಾ ಕಡಲೆಗಳಿಂದ ಮಾಡುವಂತಹ ಚಟ್ನಿ ಹೆಚ್ಚಾಗಿ ಮಾಡುತ್ತೀರಿ. ಯಾವಾಗಲು ಒಂದೇ ರೀತಿಯ ಚಟ್ನಿಗಳ ಮಾಡಿ ಸವಿಯೋಕೆ ನಿಮಗೂ ಬೇಸರ ತರಿಸಿರಬಹುದು. ಇದರಿಂದ ನಿಮ್ಮ ನಾಲಿಗೆ ರುಚಿಯೂ ಕೆಟ್ಟಿರಬಹುದು. ಹಾಗೆ ಬಾಯಿ ರುಚಿ ಹೆಚ್ಚಿಸುವ ರುಚಿಯ ಚಟ್ನಿಯೊಂದನ್ನು ಮಾಡಿ ಸವಿಯುವ ಕುರತಾಗಿ ನಾವಿಂದು ಹೇಳಲಿದ್ದೇವೆ. ಅದ್ರಲ್ಲೂ ಈ ರೀತಿ ಖಾರ ಚಟ್ನಿ ಒಮ್ಮೆ ನೀವು ಮಾಡಿ ಸವಿದರೆ ಪ್ರತಿನಿತ್ಯ ಈ ಚಟ್ನಿ ಸವಿಯಲು ಇಷ್ಟಪಡುತ್ತೀರಿ. ಅಷ್ಟೇ ಅಲ್ಲ ಈ ಚಟ್ನಿ ನಿಮ್ಮ ಆರೋಗ್ಯಕ್ಕೂ ಕೂಡ ಬಹಳ ಉತ್ತಮವಾಗಿದೆ. ಹಾಗಾದ್ರೆ ಈ ಚಟ್ನಿಯನ್ನು ಮಾಡಿ ಸವಿಯುವ ಕುರಿತಾಗಿ ನಾವಿಂದು ತಿಳಿಯೋಣ. ಇದು ಕೊತ್ತಂಬರಿ ಸೊಪ್ಪನ್ನು ಹೆಚ್ಚಾಗಿ ಬಳಸಿ ಮಾಡುವಂತಹ ಚಟ್ನಿಯಾಗಿದೆ.





ಕೊತ್ತಂಬರಿ ನಿಮ್ಮ ದೇಹಕ್ಕೆ ಅನೇಕ ಪ್ರಯೋಜನಗಳ ತರಲಿದೆ. ಹಾಗೆ ಕೊತ್ತಂಬರಿ ಸೊಪ್ಪಿನ ಈ ಚಟ್ನಿಯನ್ನು ನೀವು ಸುಲಭವಾಗಿ ಮಾಡಿ ಮುಗಿಸಬಹುದು. ಊಟದೊಂದಿಗೆ ಹಾಗೆ ಯಾವುದೇ ತಿಂಡಿಯೊಂದಿಗೆ ಈ ಚಟ್ನಿಯನ್ನು ನೀವು ಮಾಡಿ ಸವಿಯಬಹುದು. ಹಾಗಾದ್ರೆ ಈ ಕೊತ್ತಂಬರಿ ಸೊಪ್ಪಿನ ಚಟ್ನಿ ಮಾಡುವುದು ಹೇಗೆ?, ಮಾಡಲು ಯಾವೆಲ್ಲಾ ಪದಾರ್ಥಗಳು ಬೇಕು?, ಮಾಡುವ ವಿಧಾನವೇನು ಎಷ್ಟು ಸಮಯ ಹಿಡಿಯಲಿದೆ ಅನ್ನೋದನ್ನು ಇಲ್ಲಿ ತಿಳಿದುಕೊಳ್ಳೋಣ.

**ಕೊತ್ತಂಬರಿ ಚಟ್ನಿ ಮಾಡುವ ಸುಲಭದ ವಿಧಾನವೇನು:** ಮೊದಲು ಕೊತ್ತಂಬರಿ ಸೊಪ್ಪನ್ನು ತೊಳೆದು ಇಟ್ಟುಕೊಳ್ಳಿ. ನಂತರ ಒಲೆ ಮೇಲೆ ಒಂದು ಬಾಣಲೆ ಇಟ್ಟು ಅದಕ್ಕೆ ಎಣ್ಣೆ ಹಾಕಿ ಬಿಸಿಯಾಗಲು ಬಿಡಿ. ನಂತರ ತೊಳೆದುಕೊಂಡ ಈ ಅರ್ಧ ಕಟ್ಟು ಕೊತ್ತಂಬರಿಯನ್ನು ಬಾಣಲೆಗೆ ಹಾಕಿಕೊಂಡು ಎನ್ನಾಗಿ ಹುರಿದುಕೊಳ್ಳಿ. ಎಣ್ಣೆ ಫ್ರೈ ಆದ ಕೊತ್ತಂಬರಿ ಸೊಪ್ಪನ್ನು ತೆಗೆದು ಒಂದು ಬೌಲ್‌ಗೆ ಹಾಕಿಟ್ಟುಕೊಳ್ಳಿ.

ಅದೇ ಬಾಣಲೆಗೆ ಮತ್ತೆ ಎಣ್ಣೆ ಹಾಕಿ ಈಗ ಸಾಸಿವೆ, ಮೆಂತ್ಯ ಹಾಕಿಕೊಂಡು ಫ್ರೈ ಮಾಡಿ. ನಂತರ ಜೀರಿಗೆ, ಒಣ ಮೆಣಸಿನಕಾಯಿಯನ್ನು ಸಹ ಹಾಕಿಕೊಂಡು ಹುರಿದುಕೊಳ್ಳಿ. ಇದಕ್ಕೆ ಗಡ್ಡೆ ಬೆಳ್ಳುಳ್ಳಿ ಹಾಕಿ ಸಣ್ಣ ಉರಿಯಲ್ಲಿ ಫ್ರೈ ಮಾಡಿಕೊಳ್ಳಿ. ನಂತರ ಎಲ್ಲವನ್ನು ತೆಗೆದು ಒಂದು ಬೌಲ್‌ಗೆ ಹಾಕಿ ತಣ್ಣಗಾಗಲು ಬಿಡಿ. ಈಗ ತಣ್ಣಗಾದ ಎಲ್ಲಾ ಪದಾರ್ಥವನ್ನು ಒಂದು ಮಿಕ್ಸಿ ಜಾರ್‌ಗೆ ಹಾಕಿಕೊಂಡು ಮೇಲೆ ಇದಕ್ಕೆ ನೆನೆಸಿಟ್ಟ ಹುಣಸೆ ಹುಳಿ, ಹುರಿದ ಕೊತ್ತಂಬರಿ ಸೊಪ್ಪು, ಬೆಲ್ಲ, ಉಪ್ಪು, ಹುರಿದುಕೊಂಡ ಒಣ ಮೆಣಸು ಸಾಸಿವೆ ಸೇರಿ ಎಲ್ಲಾ ಪದಾರ್ಥಗಳನ್ನು ಹಾಕಿ 2 ಸ್ಪೂನ್ ನೀರು ಸಹ ಹಾಕಿಕೊಳ್ಳಿ. ಇದನ್ನು ತರಿತರಿಯಾಗಿ ರುಬ್ಬಿಕೊಳ್ಳಬೇಕು.

**ಕೊತ್ತಂಬರಿ ಚಟ್ನಿ ಮಾಡಲು ಬೇಕಾಗುವ ವಸ್ತುಗಳು**

- ಕೊತ್ತಂಬರಿ ಸೊಪ್ಪು- ಅರ್ಧ ಕಟ್ಟು
- ಸಾಸಿವೆ
- ಮೆಂತ್ಯ
- ಜೀರಿಗೆ
- ಬೆಲ್ಲ
- ಒಣ ಮೆಣಸಿನಕಾಯಿ
- ಬೆಳ್ಳುಳ್ಳಿ
- ಹುಣಸೆ
- ರುಚಿಗೆ ತಕ್ಕಷ್ಟು ಉಪ್ಪು
- ಅಡುಗೆ ಎಣ್ಣೆ

ಇಷ್ಟಾದರೆ ನಿಮ್ಮ ಮುಂದೆ ರುಚಿ ರುಚಿಯಾದ ಕೊತ್ತಂಬರಿ ಚಟ್ನಿ ಸಿದ್ಧವಾಗುತ್ತೆ. ಇದನ್ನು ಊಟದೊಂದಿಗೆ ತಿಂಡಿಯೊಂದಿಗೆ ಕಲಸಿಕೊಂಡು ಸವಿಯಲು ಮುಂದಾದರೆ ಅದರ ರುಚಿಗೆ ನಿತ್ಯ ಈ ಚಟ್ನಿ ಸವಿಯಲು ಮನಸಾಗುತ್ತೆ. ಇದು ಆರೋಗ್ಯದ ದೃಷ್ಟಿಯಲ್ಲು ಉತ್ತಮ. ಇದಕ್ಕೆ ಬಳಸುವ ಮಸಾಲೆ ಅಂಶಗಳು ನಿಮಗಿರುವ ಸಣ್ಣ ಪುಟ್ಟ ಅನಾರೋಗ್ಯವನ್ನು ದೂರ ಮಾಡಲಿದೆ. ದೇಹವನ್ನ ಸಮತೋಲನದಲ್ಲಿ ಇಡಲಿದೆ

## ನೀಲಿ ಅಲೆಗಳ..ಭೋರ್ಗರೆತ.. ಕ್ಯಾಚ್ ಅಸ್ ಇಫ್ ಯು ಕ್ಯಾನ್




☛ ಸುಮನಾ


ವುಮನ್ ಇನ್ ಬ್ಲೂ ಕ್ರೀಡಾ ಅಬ್ಬರ,
ಹರ್ಮನ್ ಪ್ರೀತ್ ಕ್ರಿಕೆಟ್ ಟೀಂ,
ಮಹಿಳೆಯರ,
ಛಲ..ಬಲ,ಧ್ಯೇಯದಲೆಯ..
ಸುನಾಮಿ ಎಬ್ಬಿಸಿ,
ಕಾಂಗರೂ ಗಳ ಮಣಿಸಿ,
ಚಾರಿತ್ರಿಕ ಇತಿಹಾಸವ ಸೃಷ್ಟಿಸಿ,
ದಕ್ಷಿಣ ಆಫ್ರಿಕಾದ ಟೀಂನ
ಸ್ಪ್ರಿಂಗ್ ಬಾಕ್ ಓಟವ ನಿಗ್ರಹಿಸಿ,
ಸಾಧನೆಯ ಗುರಿಯ ಉತ್ತುಂಗ ಶಿಖರವೇರಿ,
ತ್ರಿವರ್ಣ ಕೀರ್ತಿ ಪತಾಕೆ..
ಹಾರಿಸಿ,ಭಾರತಾಂಬೆಯ
ಕಿರೀಟಕ್ಕೆ ಹೊನ್ನ ಗರಿಯ ತೊಡಿಸಿದ
ಬ್ಯೂಟಿ ವಿತ್ ಬ್ರೇನ್..ಸಿಂಹಿಣಿಯರ,
ವಿಶ್ವ ಚಾಂಪಿಯನ್ನರ, ಕ್ರಿಕೆಟ್
ಶೀರೋಯಿನ್‌ಗಳ..
ಒನ್ ಲೈನ್..ವಿಲ್ ಟು ವಿನ್..
ಕ್ಯಾಚ್ ಅಸ್ ಇಫ್ ಯು ಕ್ಯಾನ್

## ರೂ.19 ಕೋಟಿ ಅನುದಾನ ಕೋರಿ ಪ್ರಸ್ತಾವ: ಡಾ. ನಾಗಲಕ್ಷ್ಮೀ ಚೌಧರಿ

• ಉದಯವಾಹಿನಿ, ಬೆಂಗಳೂರು

ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ 31 ಜಿಲ್ಲೆಗಳಲ್ಲಿ ಮಹಿಳಾ ಕಾನೂನುಗಳ ಬಗ್ಗೆ ಅರಿವು ಮೂಡಿಸುವ ಜಾಗೃತಿ ಫಲಕ ಅಳವಡಿಕೆ, ಪ್ರತ್ಯೇಕ ಆ?ಯಪ್ ಮತ್ತು ಸಹಾಯವಾಣಿ ಆರಂಭಿಸಲು ಹೆಚ್ಚುವರಿಯಾಗಿ ರೂ.19.80 ಕೋಟಿ ಅನುದಾನ ನೀಡುವಂತೆ ರಾಜ್ಯ ಮಹಿಳಾ ಆಯೋಗವು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.

ಮಹಿಳೆಯರ ಹಕ್ಕುಗಳ ರಕ್ಷಣೆ, ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಯಲು 2013ರ ಕಾಯ್ದೆಯ ಪ್ರಕಾರ 10ಕ್ಕಿಂತ ಹೆಚ್ಚು ಸಿಬ್ಬಂದಿ ಕರ್ತವ್ಯ ನಿರ್ವಹಿಸುವ ಸರ್ಕಾರಿ ಅಥವಾ ಖಾಸಗಿ ಕಚೇರಿಗಳು, ಕಾರ್ಖಾನೆಗಳು, ಗಾರ್ಮೆಂಟ್ಸ್, ವಿಶ್ವವಿದ್ಯಾಲಯಗಳು, ಸಂಘ ಸಂಸ್ಥೆಗಳಲ್ಲಿ ಅಂತರಿಕ ದೂರು ಸಮಿತಿಗಳನ್ನು ರಚಿಸುವ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.



> ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು (ಸಿಎಸ್ ಆರ್) ಬಳಸಿಕೊಂಡು ಮಹಿಳಾ ಆಯೋಗವನ್ನು ಮೇಲ್ದರ್ಜೆಗೇರಿಸಲು ಚಿಂತನೆ ನಡೆದಿದೆ.
> -ಡಾ. ನಾಗಲಕ್ಷ್ಮೀ ಚೌಧರಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ

ಆಯೋಗದ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ದೂರುಗಳನ್ನು ಸ್ವೀಕರಿಸುವ ವ್ಯವಸ್ಥೆ ಇಲ್ಲ. ನೂತನ ವೆಬ್ ಸೈಟ್‌ನಲ್ಲಿ ಆನ್‌ಲೈನ್ ದೂರು ಸ್ವೀಕಾರ, ದೂರಿನ ಸ್ಥಿತಿಗತಿ, ವಿಲೇವಾರಿಯಾದ ದೂರುಗಳ ಮಾಹಿತಿ ಇರಲಿದೆ. ಇದರಿಂದ ಸಂತ್ರಸ್ತರಿಗೆ ನ್ಯಾಯ ದೊರಕಿಸಿಕೊಡಲು ಅನುಕೂಲವಾಗಲಿದೆ.

ಜೊತೆಗೆ ಪಾರದರ್ಶಕವಾಗಿ ಕಾರ್ಯನಿರ್ವಹಿಸಲು ಸಹಾಯಕವಾಗುತ್ತದೆ ಎಂದು ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಅವರು ತಿಳಿಸಿದರು. 'ಇತ್ತೀಚೆಗೆ ಲೈಂಗಿಕ ಕಿರುಕುಳ, ವರದಕ್ಷಿಣೆ ಕಿರುಕುಳ ಹಾಗೂ ಪೋಕ್ಸೊ ಕಾಯ್ದೆ ಅಡಿ ದಾಖಲಾಗುವ ಪ್ರಕರಣಗಳು ಹೆಚ್ಚುತ್ತಿವೆ. ಈ ಬಗ್ಗೆ ಸಾರ್ವಜನಿಕರಲ್ಲಿ ಮಹಿಳಾ ಕಾನೂನುಗಳ ಕುರಿತು ಜಾಗೃತಿ ಮೂಡಿಸುವ ಅವಶ್ಯಕತೆ ಇದೆ' ಎಂದರು. ವಿಭಾಗೀಯ, ಜಿಲ್ಲಾ, ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಕೆಲಸ ಮಾಡುವ ಸ್ಥಳಗಳಲ್ಲಿ ಆಂತರಿಕ ದೂರು ಸಮಿತಿಗಳನ್ನು ರಚಿಸಿರುವ ಕುರಿತು ಸಮೀಕ್ಷೆ ನಡೆಸಬೇಕಾಗಿದೆ. ಮಾಧ್ಯಮ ನಿರ್ವಹಣೆ, ಮಹಿಳಾ ಸಹಾಯ ವೇದಿಕೆ, ಪ್ರತ್ಯೇಕ ಸಹಾಯವಾಣಿ, ಮಹಿಳಾ ಆಯೋಗದ ಆ್ಯಪ್ ರಚಿಸುವ ಅವಶ್ಯಕತೆ ಇದೆ' ಎನ್ನುತ್ತಾರೆ ನಾಗಲಕ್ಷ್ಮೀ ಚೌಧರಿ. 'ರಾಜ್ಯದ ಯಾವುದೇ ಭಾಗದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆದರೆ, ಬೆಂಗಳೂರಿನ ಕೇಂದ್ರ ಕಚೇರಿಗೆ ಬಂದು ದೂರು ನೀಡಬೇಕಾಗಿದೆ. ಇದಕ್ಕಾಗಿ ಕೇವಲ ಐದು ಮಂದಿ ಸಿಬ್ಬಂದಿ ನಿಯೋಜಿಸಿದ್ದು, ಇದರಲ್ಲಿ ಒಬ್ಬರು ಕಾಯಂ. ಉಳಿದವರು ಗುತ್ತಿಗೆ ಆಧಾರದಲ್ಲಿ ಕಡಿಮೆ ಸಂಬಳದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

# ಪಾಲಕ್ ಸೊಪ್ಪಿನ ಫೇಸ್ ಪ್ಯಾಕ್

ಆರೋಗ್ಯಕರ ಗುಣಗಳಿಗಾಗಿ ಪ್ರಸಿದ್ಧವಾಗಿರುವ ಪಾಲಕ್ ಸೊಪ್ಪು ದೇಹದ ಆರೋಗ್ಯವನ್ನು ವೃದ್ಧಿಸುವುದರ ಜೊತೆಗೆ ಮುಖದ ಕಾಂತಿಯನ್ನು ಹೆಚ್ಚಿಸುವಲ್ಲಿಯೂ ಕೂಡ ನೆರವಿಗೆ ಬರುತ್ತದೆ. ಪ್ರಮುಖವಾಗಿ ಈ ಸೊಪ್ಪಿನ ಫೇಸ್ ಪ್ಯಾಕ್ ಮಾಡಿ ತ್ವಚೆಗೆ ಹಚ್ಚುವುದರಿಂದ ಮುಖ ಕಾಂತಿ ಹೆಚ್ಚಾಗುವುದರ ಜೊತೆಗೆ ಮುಖದ ಮೇಲಿನ ಮೊಡವೆ ಪಿಗ್ಮೆಂಟೇಶನ್ ನಂತಹ ಸಮಸ್ಯೆಗಳು ದೂರವಾಗುತ್ತವೆ ನಾವು ನೋಡುವುದಕ್ಕೆ ಸಿನಿ ತಾರೆಯರ ರೀತಿ ನಾಲ್ಕು ಜನ ಮುಂದೆ ಚೆನ್ನಾಗಿ ಕಾಣಬೇಕು ಎನ್ನುವ ಆಸೆ ಎಲ್ಲರಿಗೂ ಇರುತ್ತದೆ. ಆದರೆ ವಯಸ್ಸಾಗುತ್ತಾ ಹೋದಂತೆ, ಮುಖದ ಸೌಂದರ್ಯವು ಕೂಡ ಕಳಗುಂದಲು ಶುರುವಾಗುತ್ತದೆ. ಇದು ಪ್ರಕೃತಿ ನಿಯಮ. ವಯಸ್ಸನ್ನು ಹಿಂಪಡೆಯಲು ಸಾಧ್ಯವಿಲ್ಲ, ಹಾಗೆಂದು ನನಗೆ ವಯಸ್ಸಾಯಿತು ಎಂದು ಸುಮ್ಮನಿರಲು ಕೂಡ ಸಾಧ್ಯವಿಲ್ಲ. ಮುಖದ ಮೇಲಿನ ಗೆರೆಗಳು ಮತ್ತು ಸುಕ್ಕುಗಳನ್ನು ಹೋಗಲಾಡಿಸಿ ಮುಖ ಅಂದವನ್ನು ನೈಸರ್ಗಿಕವಾಗಿ ಹೆಚ್ಚಿಸಲು ನಾವು ಪ್ರಯತ್ನ ಪಡಲೇಬೇಕು. ಈ ನಿಟ್ಟಿನಲ್ಲಿ ನೋಡುವುದಾದರೆ ಪಾಲಕ್ ಸೊಪ್ಪು ತುಂಬಾನೇ ಉಪಯೋಗಕ್ಕೆ ಬರುತ್ತದೆ. ಹೌದು ಅಚ್ಚರಿಯಾದರೂ ನಿಜ, ಪಾಲಕ್ ಸೊಪ್ಪಿನಲ್ಲಿ ಕಂಡು ಬರುವ ಪೋಷಕಾಂಶಗಳು ತ್ವಚೆಗೆ ಸಂಬಂಧಪಟ್ಟ ಹಲವಾರು ಆರೋಗ್ಯ ಸಮಸ್ಯೆಗಳನ್ನು ದೂರ ಮಾಡಲು ನೆರವಿಗೆ ಬರುತ್ತದೆ.



**ಈ ಫೇಸ್ ಪ್ಯಾಕ್ ಮಾಡುವ ವಿಧಾನ:** ಈ ಫೇಸ್ ಪ್ಯಾಕ್ ತಯಾರಿಸಲು ಬೇಕಾಗುವ ಮುಖ್ಯವಾದ ಪದಾರ್ಥ ಎಂದರೆ ಅದು ತಾಜಾ ಪಾಲಕ್. ಇದನ್ನು ಸ್ವಚ್ಛವಾಗಿ ತೊಳೆದು, ಸಣ್ಣಗೆ ಕತ್ತರಿಸಿ ಮಿಕ್ಸರ್‌ಗೆ ಸೇರಿಸಿ.ಇನ್ನು ಇದಕ್ಕೆ ಒಂದು ಟೇಬಲ್ ಚಮಚದಷ್ಟು ರೋಸ್ ವಾಟರ್, ಮೊಸರು, ಜೇನುತುಪ್ಪ ಮತ್ತು ಅಕ್ಕಿ ಹಿಟ್ಟು ಮಿಶ್ರಣ ಮಾಡಿ. ಮಿಶ್ರಣವನ್ನು ದಪ್ಪವಾಗಿಸಲು ಬೇಕಾಗಿರುವಷ್ಟು ನೀರನ್ನು ಮಾತ್ರ ಬಳಸಿ, ಚೆನ್ನಾಗಿ ರುಬ್ಬಿಕೊಂಡು ದಪ್ಪಗೆ ಪೇಸ್ಟ್ ಹದಕ್ಕೆ ಮಾಡಿಕೊಂಡು ಮುಖಕ್ಕೆ ಹಚ್ಚಿ, ಬೆರಳಿನ ಸಹಾಯದಿಂದ ನಿಧಾನಕ್ಕೆ ವೃತ್ತಾಕಾರವಾಗಿ ಮಸಾಜ್ ಮಾಡಿಕೊಂಡು ಸುಮಾರು 15 ನಿಮಿಷಗಳ ನಂತರ ತೊಳೆಯಿರಿ. ಇದು ತುಂಬಾನೇ ಸುಲಭ ವಿಧಾನವಾಗಿದ್ದು ಮತ್ತು ಫಲಿತಾಂಶಗಳು ತಕ್ಷಣವೇ ಗೋಚರಿಸುತ್ತವೆ. ಇದರಿಂದ ಮುಖದ ಮೇಲಿನ ಕಲೆ, ಗೆರೆ, ಸುಕ್ಕು ಮುಂತಾದ ತ್ವಚೆಯ ಸಮಸ್ಯೆಗಳು ಬಹಳ ಬೇಗನೇ ದೂರವಾಗುತ್ತವೆ.

**ತ್ವಚೆಯ ಆರೋಗ್ಯಕ್ಕೂ ಪಾಲಕ್ ಸೊಪ್ಪು ಒಳ್ಳೆಯದು:** ಪಾಲಕ್ ಸೊಪ್ಪು ಆರೋಗ್ಯಕ್ಕೆ ಮಾತ್ರವಲ್ಲದೆ ಚರ್ಮಕ್ಕೂ ಬಹಳ ಒಳ್ಳೆಯದು. ಇದರಲ್ಲಿರುವ ವಿಟಮಿನ್ ಎ, ಸಿ, ಇ ಮತ್ತು ಕಬ್ಬಿಣವು ಚರ್ಮವನ್ನು ಒಳಗಿನಿಂದ ಪೋಷಿಸುತ್ತದೆ. ಈ ಪೋಷಕಾಂಶಗಳು ಚರ್ಮದ ಕೋಶಗಳನ್ನು ಸರಿಪಡಿಸುತ್ತದೆ ಮತ್ತು ಕಪ್ಪು ಕಲೆಗಳು, ವರ್ಣದ್ರವ್ಯವನ್ನು ಕಡಿಮೆ ಮಾಡುತ್ತದೆ. ಪಾಲಕ್ ಸೊಪ್ಪಿನಲ್ಲಿರುವ ಉತ್ಕರ್ಷಣ ನಿರೋಧಕಗಳು ಮುಖದ ಮೇಲಿನ ಸಮಸ್ಯೆಗಳನ್ನು ನಿವಾರಿಸುತ್ತದೆ ಮತ್ತು ಚರ್ಮವನ್ನು ತಾಜಾವಾಗಿ ಸುತ್ತದೆ. ಪ್ರಮುಖವಾಗಿ ಈ ಸೊಪ್ಪಿನ ಫೇಸ್ ಫ್ಯಾಕ್ ನೈಸರ್ಗಿಕ ಕ್ಲೆನ್ಸರ್ ಆಗಿ ಕಾರ್ಯ ನಿರ್ವಹಿಸುತ್ತದೆ ಮತ್ತು ತ್ವಚೆಯನ್ನು ಒಳಗಿನಿಂದಲೇ ಆರೋಗ್ಯಕರವಾಗಿರಿಸುತ್ತದೆ.

> ಅಕ್ಕಿ ಹಿಟ್ಟು ತ್ವಚೆಯ ಡೆಡ್ ಸ್ಕಿನ್ ಸಿಪ್ಪೆ ತೆಗೆಯಲು ಅದ್ಭುತವಾಗಿ ಕೆಲಸ ಮಾಡುತ್ತದೆ. ಪ್ರಮುಖವಾಗಿ ಇದರಲ್ಲಿರುವ ಸೂಕ್ಷ್ಮ ಕಣಗಳು ಡೆಡ್ ಸ್ಕಿನ್ ಕೋಶಗಳನ್ನು ತೆಗೆದುಹಾಕಿ ಮುಖವನ್ನು ನಯವಾಗಿಸುತ್ತದೆ. ಇದಲ್ಲದೆ, ಇದರಲ್ಲಿರುವ ಉತ್ಕರ್ಷಣ ನಿರೋಧಕಗಳು ಸೂರ್ಯನಿಂದ ಉಂಟಾಗುವ ಟ್ಯಾನಿಂಗ್ ಅನ್ನು ಕಡಿಮೆ ಮಾಡುತ್ತದೆ ಮತ್ತು ಮೈಬಣ್ಣ ವನ್ನು ಹೊಳಪುಗೊಳಿಸುತ್ತದೆ. ಪ್ಯಾಕ್‌ನಲ್ಲಿ ಬಳಸಿದಾಗ, ಈ ಪದಾರ್ಥವನ್ನು ಚರ್ಮದ ಮೇಲೆ ನಿಧಾನವಾಗಿ ಉಜ್ಜಿದಾಗ ಡೆಡ್ ಸ್ಕಿನ್ ಜೀವ ಕೋಶಗಳನ್ನು ತೆಗೆದುಹಾಕಿ ತ್ವಚೆಗೆ ನೈಸರ್ಗಿಕ ಹೊಳಪನ್ನು ನೀಡುತ್ತದೆ.

**ರೋಸ್ ವಾಟರ್:** ರೋಸ್ ವಾಟರ್ ಚರ್ಮವನ್ನು ತಾಜಾ ಮತ್ತು ಹೈಡ್ರೀಕರಿಸುವ ಒಂದು ನೈಸರ್ಗಿಕ ವಿಧಾನವಾಗಿದೆ. ಧೂಳು ಮತ್ತು ಮಾಲಿನ್ಯವು ಚರ್ಮದ ಮೇಲೆ ಕೆಂಪು ಮತ್ತು ಕಿರಿಕಿರಿಯನ್ನು ಉಂಟುಮಾಡಬಹುದು, ಈ ಸಂದರ್ಭದಲ್ಲಿ ರೋಸ್ ವಾಟರ್ ಪರಿಹಾರವನ್ನು ನೀಡುತ್ತದೆ.

ಇದು ಚರ್ಮದ ಸಮತೋಲನವನ್ನು ಕಾಯ್ದು ಕೊಳ್ಳುತ್ತದೆ ರಂಧ್ರಗಳನ್ನು ಬಿಗಿಗೊಳಿಸುತ್ತದೆ, ಮುಖಕ್ಕೆ ಸೌಮ್ಯವಾದ ತಂಪಾಗಿಸುವ ಪರಿಣಾಮವನ್ನು ನೀಡುತ್ತದೆ. ಅದಕ್ಕಾಗಿಯೇ ಈ ಪ್ಯಾಕ್‌ನಲ್ಲಿ ರೋಸ್ ವಾಟರ್ ಅನ್ನು ಸೇರಿಸುವುದು ಅತ್ಯಗತ್ಯ.

**ಮುಖಕ್ಕೆ ಹಚ್ಚಿ ಸುಂದರವಾಗಿ ಕಾಣಿ!**

**ಹೀಗೂ ಮಾಡಬಹುದು :**


ಪಾಲಕ್ ಮತ್ತು ಮೊಸರಿನ ಫೇಸ್ ಮಾಸ್ಕ್

ಬೇಕಾಗುವ ಸಾಮಾಗ್ರಿಗಳು

5 ರಿಂದ 8 ಪಾಲಕ್ ಎಲೆಗಳು

3 – ಚಮಚ ಮೊಸರು

**ಫೇಸ್ ಪ್ಯಾಕ್ ತಯಾರಿಸುವುದು ಹೇಗೆ:** 5 ರಿಂದ 8 ಪಾಲಕ್ ಎಲೆಗಳನ್ನು ತೊಳೆದು ಮಿಕ್ಸರ್‌ನಲ್ಲಿ ಮೊಸರಿನೊಂದಿಗೆ ಮಿಶ್ರಣ ಮಾಡಿ. ಈ ಮಿಶ್ರಣವನ್ನು ನಿಮ್ಮ ಮುಖಕ್ಕೆ 10 ರಿಂದ 15 ನಿಮಿಷಗಳ ಕಾಲ ಹಚ್ಚಿ. ನಂತರ, ಶುದ್ಧ ನೀರಿನಿಂದ ತೊಳೆಯಿರಿ. ಈ ಫೇಸ್ ಪ್ಯಾಕ್ ತ್ವಚೆಯನ್ನು ಹೈಡ್ರೇಟ್ ಆಗಿಡಲು ಪಿಗ್ಮೆಂಟೇಶನ್ ತೆಗೆದುಹಾಕಲು ಸಹಾಯ ಮಾಡುತ್ತದೆ.



## ಜೂಜಾಟ: 7 ಜನರ ಬಂಧನ

• ಉದಯವಾಹಿನಿ ಕಲಬುರಗಿ

ತಾಲ್ಲೂಕಿನ ಉದನೂರ ಗ್ರಾಮದಿಂದ ನಂದಿಕೂರ ಗ್ರಾಮಕ್ಕೆ ಹೋಗುವ ಸಾರ್ವಜನಿಕ ರಸ್ತೆ ಪಕ್ಕದ ಖಾಲಿ ಜಾಗದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಿಸಿಬಿ ಘಟಕದ ಪಿಐ ದಿಲೀಪಕುಮಾರ ಬಿ.ಸಾಗರ, ಸಿಬ್ಬಂದಿಗಳಾದ ಮೃತ್ಯುಂಜಯ, ಯಲ್ಲಪ್ಪ, ಅಶೋಕ ಕಟಕೆ, ಶಿವಕುಮಾರ, ನಾಗರಾಜ, ಸುನೀಲಕುಮಾರ ಅವರು ದಾಳಿ ನಡೆಸಿ 7 ಜನರನ್ನು ಬಂಧಿಸಿದ್ದಾರೆ.

ಶಿವಶರಣಪ್ಪ ಯಮಂಟಿ, ಶಿವರಾಜ ಬಿರಾದಾರ, ಮಹಾಂತಪ್ಪ ಅಲ್ಲಾಪೂರ, ಲಕ್ಷ್ಮೀಕಾಂತ ಧಂಗಾಪೂರ, ಮಲ್ಲಿಕಾರ್ಜುನ ಕಪನೂರ, ಶರಣಪ್ಪ ಸಿರಸಗಿ, ಜೈಭೀಮ ಕೊರಳ್ಳಿ ಎಂಬುವವರನ್ನು ಬಂಧಿಸಿ 17,320 ರೂ.ನಗದು ಜಪ್ತಿ ಮಾಡಿದ್ದಾರೆ. ಸಬ್-ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಭ್ರಷ್ಟಾಚಾರ ತಡೆದು ದೇಶದ ಪ್ರಗತಿಗೆ ಕೈಜೋಡಿಸಿ: ಲೋಕಾಯುಕ್ತ

• ಉದಯವಾಹಿನಿ ಅಳ್ನಾವರ

ಸಾಕಷ್ಟು ಕಷ್ಟ ಪಟ್ಟು, ಹಲವಾರು ಸ್ಪರ್ಧೆ ಎದುರಿಸಿ ಗಿಟ್ಟಿಸಿಕೊಂಡ ಸರ್ಕಾರಿ ನೌಕರಿಯನ್ನು ಶ್ರದ್ಧೆಯಿಂದ ನಿಭಾಯಿಸಬೇಕು. ಜನರಿಗೆ ಅನಕೂಲ ಆಗುವ ಕಾರ್ಯ ಮಾಡಬೇಕು. ಪ್ರಸ್ತುತ ಸಮಾಜ ಕಾಡುತ್ತಿರುವ ಭ್ರಷ್ಟಾಚಾರದ ಪೀಡುಗುಗಳನ್ನು ಬೇರು ಸಮೇತ ಕಿತ್ತು ಹಾಕಬೇಕು ಎಂದು ಲೋಕಾಯುಕ್ತ ಇನ್ಸ್ಪೆಕ್ಟರ್ ಬಸವರಾಜ ಬಗ್ನಿ ಹೇಳಿದರು. ಇಲ್ಲಿನ ಪಟ್ಟಣ ಪಂಚಾಯಿತಿ ಸಭಾ ಭವನದಲ್ಲಿ ಮಂಗಳವಾರ ನಡೆದ ಭ್ರಷ್ಟಾಚಾರ ನಿಗ್ರಹ ಜಾಗ್ರತಿ ಅರಿವು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಭ್ರಷ್ಟಾಚಾರ ತಡೆದು ದೇಶದ ಉನ್ನತಿಗೆ ಅಧಿಕಾರಿ ವರ್ಗ ಕೈಜೊಡಿಸಬೇಕು ಎಂದರು.

ಜನರನ್ನು ಅನಗತ್ಯವಾಗಿ ಕಚೇರಿಗೆ ಅಲೆಯದಂತೆ ನೋಡಿ ಕೊಂಡು ಅರ್ಜಿಗಳಿಗೆ ತಕ್ಷಣ ಸ್ಪಂದಿಸುವ ಮೂಲಕ ಸಮಸ್ಯೆಗೆ ಪರಿಹಾರ ನೀಡಬೇಕು. ನೌಕರಿ ಜೊತೆ ದೇಶ ಮತ್ತು ಸಮಾಜದ ಏಳಿಗೆಗೆ ಎಲ್ಲರೂ ಸೇರಿ ಒಗ್ಗಟ್ಟಾಗಿ ಶ್ರಮಿಸೋಣ ಎಂದರು.

ವಿಶೇಷ ಉಪನ್ಯಾಸ ನೀಡಿದ ಲೋಕಾಯುಕ್ತ ಇನ್‌ಸ್‌ಪೆಕ್ಟರ್ ಜೆ.ಕರುಣೇಶಗೌಡ ಮಾತನಾಡಿ, ಸರ್ಕಾರಿ ಕೆಲಸದಲ್ಲಿ ಶುದ್ಧ ಹಸ್ತ ಹೊಂದಿರಬೇಕು. ಹಣದ ಮೋಹಕ್ಕೆ ಬಲಿಯಾಗಿ ಕಷ್ಟ ಪಡಬಾರದು, ಪ್ರಾಮಾಣಿಕತೆ, ಮಾನಸಿಕ ನೆಮ್ಮದಿ, ಉತ್ತಮ ಆರೋಗ್ಯ ರೂಢಿಸಿಕೊಳ್ಳಲು ಭ್ರಷ್ಟಾಚಾರದಿಂದ ದೂರ ಇರಬೇಕು. ಮುಂದಿನ ಪೀಳಿಗೆಗೆ ಸರಿಯಾದ ಮಾರ್ಗ ತೋರಿಸಬೇಕು. ಜನರ ನಂಬಿಕೆ ಗಟ್ಟಿಗೊಳಿಸಲು ತಮಗೆ ನೀಡಿದ ಕಾರ್ಯವನ್ನು ಸಮರ್ಥವಾಗಿ ನಿಬಾಯಿಸಬೇಕು ಎಂದರು.

### ನಿರೀಕ್ಷಿತ ಹಾಗೂ ತೃಪ್ತಿದಾಯಕ ಅಭಿವೃದ್ಧಿ ಆಗಿಲ್ಲವೆಂಬ ಅಸಮಾಧಾನ

# ಏಳು ವರ್ಷಗಳ ಅವಧಿಯಲ್ಲಿ ಅಭಿವೃದ್ಧಿ ಶೂನ್ಯ

• ಉದಯವಾಹಿನಿ ತೇರದಾಳ

ಇಲ್ಲಿನ ಪುರಸಭೆ ಐದು ವರ್ಷದ ಆಡಳಿತ ಅವಧಿ ನ.7ರಂದು ಪೂರ್ಣಗೊಳ್ಳಲಿದ್ದು, ಅಭಿವೃದ್ಧಿ ವಿಷಯದಲ್ಲಿ ನಿರೀಕ್ಷಿತ ಹಾಗೂ ತೃಪ್ತಿದಾಯಕ ಅಭಿವೃದ್ಧಿ ಆಗಿಲ್ಲವೆಂಬ ಅಸಮಾಧಾನ ಸಾರ್ವಜನಿಕ ವಲಯದಲ್ಲಿ ಕೇಳಿ ಬಂದಿದೆ.

23 ಸಂಖ್ಯಾಬಲ ಹೊಂದಿರುವ ತೇರದಾಳ ಪುರಸಭೆಗೆ 2018 ಸೆ.3ರಂದು ಚುನಾವಣೆಯ ಮತ ಎಣಿಕೆ ಮುಗಿದು ಫಲಿತಾಂಶ ಬಂದಾಗ ಬಿಜೆಪಿ ಹಾಗೂ ಕಾಂಗ್ರೆಸ್ ತಲಾ ಹತ್ತು ಹಾಗೂ ಮೂವರು ಪಕ್ಷೇತರ ಸದಸ್ಯರು ಆಯ್ಕೆಗೊಂಡಿದ್ದರು. ಮೀಸಲಾತಿ ಹಗ್ಗ ಜಗ್ಗಾಟದಿಂದ ಅಧಿಕಾರ ಹಂಚಿಕೆ ಎರಡು ವರ್ಷ ಮುಂದಕ್ಕೆ ಹೋಗಬೇಕಾಯಿತು.

ನಂತರದ ಬೆಳವಣಿಗೆಯಲ್ಲಿ ಮೀಸಲಾತಿ ಜಾರಿಯಾಗಿ 2020 ನ.7 ರಂದು ಮೂವರು ಪಕ್ಷೇತರ ಸದಸ್ಯರು ಬಿಜೆಪಿಗೆ ಬೆಂಬಲ ನೀಡಿದ್ದರಿಂದ ಮೊದಲ ಹಂತದ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆ ನಡೆದು ಬಿಜೆಪಿ ಅನ್ನಪೂರ್ಣ ಸದಾಶಿವ ಹೊಸಮನಿ ಅಧ್ಯಕ್ಷೆಯಾಗಿ ಹಾಗೂ ಶಾಂತವ್ವ ರುದ್ರಪ್ಪ ಕಾಲತಿಪ್ಪಿ ಉಪಾಧ್ಯಕ್ಷೆಯಾಗಿ ಅಧಿಕಾರ ಸ್ವೀಕರಿಸಿದರು. ಪಕ್ಷದ ಒಳ ಒಪ್ಪಂದದ ಪ್ರಕಾರ ನಂತರ ಕುಷ್ಮಾಂಡಿನಿ ಅಲ್ಲಪ್ಪ ಬಾಬಗೊಂಡ ಅಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಗೊಂಡರು. ಎರಡನೇ ಅವಧಿಗೆ ಕಾಂಗ್ರೆಸ್ ರಣತಂತ್ರ ಹೆಣೆದು ಪಕ್ಷದ ಶಿಲ್ಪಾ ಗೌತಮ ರೋಡಕರ ಅಧ್ಯಕ್ಷೆಯಾಗಿ ಹಾಗೂ ನಸೀನ್‌ಬಾನು ರಾಜೇಸಾಬ ನಗಾರ್ಜಿ ಉಪಾಧ್ಯಕ್ಷೆಯಾಗಿ ಅಧಿಕಾರ ನಡೆಸುತ್ತಿದ್ದಾರೆ.

ಮುಗಿಯಲಿರುವ ಅವಧಿಗೆ ಆಯ್ಕೆಗೊಂಡ ಅನೇಕ ಸದಸ್ಯರಲ್ಲಿ ಯುವಕರೇ ಹೆಚ್ಚಾಗಿದ್ದರಿಂದ ಜನಸಾಮಾನ್ಯರಿಗೆ ಅಭಿವೃದ್ಧಿಯ ನಿರೀಕ್ಷೆಗಳು ಹೆಚ್ಚಾಗಿದ್ದವು. ಮತದಾರರು ತಮ್ಮ ವಾರ್ಡ್ ಸೇರಿದಂತೆ ಪಟ್ಟಣದ ಸರ್ವತೋಮುಖ ಅಭಿವೃದ್ಧಿಯಾಗಬಹುದು ಎಂದು ಹತ್ತಾರು ಆಸೆಗಳನ್ನು ಹೊತ್ತುಕೊಂಡು ಆಯ್ಕೆಗೊಳಿಸಿ ಪುರಸಭೆಗೆ ಕಳುಹಿಸಿದರು. ಆದರೆ ಹೇಳಿಕೊಳ್ಳುವಂತಹ ಯಾವುದೇ ಅಭಿವೃದ್ಧಿ ಕಾರ್ಯಗಳು, ಶಾಶ್ವತ ಯೋಜನೆಗಳು ರೂಪಗೊಳ್ಳದಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ಪಟ್ಟಣದ ಅಭಿವೃದ್ಧಿಗೆ ಸರ್ಕಾರಗಳು ಕೋಟ್ಯಂತರ ಅನುದಾನ ನೀಡಿದರೂ ಶಾಶ್ವತವಾಗಿ ಹೇಳಿಕೊಳ್ಳುವಂತಹ ಯೋಜನೆಗಳನ್ನು ಸದಸ್ಯರು ರೂಪಿಸದಿರುವುದು ಪಟ್ಟಣದ ದುರ್ದೈವ. ಎಸ್‌ಸಿಪಿ ಯೋಜನೆಯಡಿ 2020-21ನೇ ಸಾಲಿಗೆ ರೂ.28 ಲಕ್ಷ, 2021-22 ನೇ ಸಾಲಿಗೆ ರೂ. 37 ಲಕ್ಷ, 2022-23ಕ್ಕೆ - 41 ಲಕ್ಷ, 2023-24ನೇ ಸಾಲಿಗೆ ರೂ. 51 ಲಕ್ಷ, 2024-25ಕ್ಕೆ - 39 ಲಕ್ಷ ಮತ್ತು 2025-26ನೇ ಸಾಲಿಗೆ ರೂ. 8 ಲಕ್ಷ ಅನುದಾನ ಬಿಡುಗೆಯಾಗಿದೆ. ಅದರಂತೆ 15ನೇ ಹಣಕಾಸು ಯೋಜನೆಯಡಿ 2020-21ರಿಂದ 2024-25ರ ವರೆಗೆ ರೂ. 6.79ಕೋಟಿ ಅನುದಾನ ಬಿಡುಗಡೆಯಾಗಿದೆ. ಇದರ ಜತೆಗೆ ಸ್ವಚ್ಛ ಭಾರತ ಮಿಷನ್, ವಿಶೇಷ ಅನುದಾನ, ನಗರೋತ್ಥಾನ ನಾಲ್ಕನೇ ಹಂತ, ಬರ ನಿರ್ವಹಣೆ ಯೋಜನೆಯಡಿ ಕೋಟಂಸದ ಅನುದಾನ ಬಿಡುಗಡೆಯಾಗಿದೆ. 2023ರವರೆಗೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದು, ಈ ವೇಳೆ ಕ್ಷೇತ್ರದಲ್ಲಿ ಹಾಗೂ ಪುರಸಭೆಯಲ್ಲಿಯೂ ಬಿಜೆಪಿ ಅಧಿಕಾರದಲ್ಲಿತ್ತು. ಕೊನೆ ಗಳಿಗೆಯಲ್ಲಿ ವಿಶೇಷ ಅನುದಾನ ಹಾಗೂ ನಗರೋತ್ಥಾನ ಅನುದಾನ ಮಂಜೂರುಗೊಳಿಸಿತು. ಆಗ ಜರುಗಿದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂತು. ನಂತರ ಈ ಹಿಂದೆ ಮಂಜೂರಾದ ಯೋಜನೆಗಳಿಗೆ ಕತ್ತರಿ ಬಿದ್ದಿತು. ಈಗ ಪುರಸಭೆಯಲ್ಲಿ ಕಾಂಗ್ರೆಸ್ ಅಧಿಕಾರ ಇದ್ದರೂ ಕೂಡ ಸರ್ಕಾರ ಅನುದಾನ ನೀಡುತ್ತಿಲ್ಲ ಎನ್ನುತ್ತ ಅಧಿಕಾರಿಗಳು ಹಾಗೂ ಸದಸ್ಯರು ಅಸಹಾಯಕತೆ ಪ್ರದರ್ಶಿಸುತ್ತಿದ್ದಾರೆ. ಇದರಿಂದ ಅಭಿವೃದ್ಧಿ ಕುಂಠಿತವಾಗಿದೆ.

2018 ಸ.3ರಂದು ನಡೆದ ಮತದಾನ ಏಣಿಕೆ ನಡೆದಿತ್ತು. ಅದರೆ ಮೀಸಲಾತಿ ಹಗ್ಗಜಗ್ಗಾಟದಿಂದ ಎರಡು ವರ್ಷ ಮುಂದೆ ಹೋಯಿತು. ಆಯ್ಕೆಗೊಂಡರು ನೂತನ ಸದಸ್ಯರುಗಳಿಗೆ ಅಧಿಕಾರ ಇರಲಿಲ್ಲ. ನಂತರ 2020 ನ.7ರಂದು ಅಧಿಕೃತವಾಗಿ ತಮ್ಮ ಅಧಿಕಾರ ಪ್ರಾರಂಭಿಸಿದರು. ಒಟ್ಟು ಏಳು ವರ್ಷ ಸದಸ್ಯರಾಗುವ ಮೂಲಕ ಇತಿಹಾಸ ಬರೆದರು ಎನ್ನಬಹುದು.



ಉದಯವಾಹಿನಿ ಚಿತ್ರ

**ಸಾರ್ವಜನಿಕರು ಹಿಡಿಶಾಪ**

**ಇನ್ನೂ ಆಯ್ಕೆಗೊಂಡ ಸದಸ್ಯರುಗಳಲ್ಲಿ ಬೆರಳಣಿಕೆಯಷ್ಟು ಸದಸ್ಯರು ಮಾತ್ರ ತಮ್ಮ ವಾರ್ಡ್‌ಗಳಲ್ಲಿನ ಸಮಸ್ಯೆಗಳ ಜೊತೆಗೆ ಪಟ್ಟಣದಲ್ಲಿನ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸಿದರು. ಇನ್ನೂಳಿದವರು ತಮ್ಮ ತಮ್ಮ ಸಮುದಾಯಗಳಿಗೆ, ಪುರಸಭೆಗೆ ಮಾತ್ರ ಸಿಮೀತಗೊಂಡು ಕಾಲಹರಣ ಮಾಡುತ್ತಿದ್ದಾರೆ. ವಾರ್ಡ್‌ಗಳಲ್ಲಿ ಅಭಿವೃದ್ಧಿ ಬಿಡಿ. ಸರಿಯಾಗಿ ನೀರು, ಬೀದಿ ದೀಪ ಹಾಗೂ ಚರಂಡಿ ಸ್ವಚ್ಛತೆ ಕೂಡ ಮಾಡಿಸಿಲ್ಲ ಎಂದು ಸಾರ್ವಜನಿಕರು ಹಿಡಿಶಾಪ ಹಾಕುತ್ತಿದ್ದಾರೆ. ಅವಶ್ಯ ಇರದಿದ್ದರೂ ಪ್ರತಿಷ್ಠೆಗಾಗಿ ಅನುದಾನವನ್ನು ವಾರ್ಡ್‌ಗಳಿಗೆ ಬಳಸಿಕೊಳ್ಳುವ ಮೂಲಕ ಬೇರೆ ಸಮಸ್ಯೆಗಳಿಗೆ ಸ್ಪಂಧಿಸುವ ಕೆಲಸ ಕೆಲವರು ಮಾಡಲಿಲ್ಲ ಎಂಬ ದೂರುಗಳು ವ್ಯಾಪಕವಾಗಿ ಕೇಳಿ ಬರುತ್ತಿವೆ.**

**ಮಂಜೂರಾದ ಯೋಜನೆಗಳಿಗೆ ಕತ್ತರಿ**

**ನಿರೀಕ್ಷಿತ ಮಟ್ಟದಲ್ಲಿ ಪಟ್ಟಣ ಅಭಿವೃದ್ಧಿಯಾಗಿಲ್ಲ. ಅನುದಾನ ತರುವ ಇಚ್ಛಾಶಕ್ತಿಯನ್ನು ಪ್ರದರ್ಶಿಸಿಲ್ಲ. ಇದರಿಂದ ಅಭಿವೃದ್ಧಿ ಕುಂಠಿತವಾಗಿದೆ**

**-ಬಸವರಾಜ ಬಾಳಿಕಾಯಿ, ಮಾಜಿ ಅಧ್ಯಕ್ಷ**

## ಮಿನಿ ನ್ಯೂಸ್

### ಮಕ್ಕಳಿಗೆ ಉತ್ತಮ ಸಂಸ್ಕಾರ, ಶಿಕ್ಷಣ ಕೊಡಿ: ಶಾಸಕ ಭೀಮಸೇನ ಚಿಮ್ಮನಕಟ್ಟಿ

• ಉದಯವಾಹಿನಿ ಬಾದಾಮಿ

'ಶರಣರ ಸಂತರ ಮತ್ತು ಮಹಾತ್ಮರ ಚರಿತ್ರೆಯ ಉಪನ್ಯಾಸ ಕೇಳಿ ಮಹಿಳೆಯರು ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರ ಮತ್ತು ಶಿಕ್ಷಣವನ್ನು ಕೊಡಿ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು. ಬೀರಲಿಂಗೇಶ್ವರ ದೇವಸ್ಥಾನ ಮತ್ತು ಕುರುಬರ ಸಮಾಜ ಹಿತವರ್ಧಕ ಸಂಘದಿಂದ ಬೀರಲಿಂಗೇಶ್ವರ ಸಭಾ ಭವನದಲ್ಲಿ ನಡೆದ ಕನಕ ಪಂಚಮಿ' ಉಪನ್ಯಾಸ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಜಮಖಂಡಿಯ ಉಪನ್ಯಾಸಕ ಯಶವಂತ ಕೊಕ್ಕನವರ ಅವರು ಕನಕದಾಸರ ಬದುಕು, ಶಿಕ್ಷಣ ಮತ್ತು ಬರಹ ಕುರಿತು ಮಾತನಾಡಿ, 'ಹುಟ್ಟು-ಸಾವಿನ ನಡುವಿನ ಜೀವನ ಸಾರ್ಥಕವಾಗಲು ಸಂತ ಮಹಾಂತರ ಜೀವನ ಚರಿತ್ರೆಯನ್ನು ಆಲಿಸಬೇಕು. ಅವರ ತತ್ವಗಳನ್ನು ಅರಿತುಕೊಂಡು ವ್ಯಕ್ತಿತ್ವವನ್ನು ರೂಪಸಿಕೊಳ್ಳಬೇಕು ಎಂದು ತಿಳಿಸಿದರು.

ಕನಕದಾಸರ ಚರಿತ್ರೆಯನ್ನು ಎಲ್ಲರೂ ತಿಳಿಯಬೇಕು. ಭೀಮಸೇನ ಚಿಮ್ಮನಕಟ್ಟಿ ಮುಂಬರುವ ದಿನಗಳಲ್ಲಿ ಸಚಿವರಾಗುತ್ತಾರೆ' ಎಂದು ಶಿರೂರಿನ ಕನಕ ಬ್ರಹ್ಮವಿದ್ಯಾಶ್ರಮದ ಚಿನ್ಮಯಾನಂದ ಸ್ವಾಮೀಜಿ ಭವಿಷ್ಯ ನುಡಿದರು. 'ನೂತನ ಕನಕ ಭವನ ನಿರ್ಮಾಣಕ್ಕೆ 10 ಗುಂಟೆ ನಿವೇಶನ ಗುರುತಿಸಲಾಗಿದೆ.

ಸಮುದಾಯ ಭವನ ನಿರ್ಮಾಣಕ್ಕೆ ಶಾಸಕರು ರೂ.10 ಲಕ್ಷ ಮಂಜೂರು ಮಾಡಿದ್ದಾರೆ. ಮುಂಬರುವ ದಿನಗಳಲ್ಲಿ ನೂತನ ಭವನ ನಿರ್ಮಾಣ ಕಾಮಗಾರಿ ಆರಂಭವಾಗಲಿದೆ ' ಎಂದು ಅಧ್ಯಕ್ಷತೆ ವಹಿಸಿದ್ದ ಬೀರಲಿಂಗೇಶ್ವರ ದೇವಸ್ಥಾನ ಮತ್ತು ಕುರುಬರ ಸಮಾಜ ಹಿತರಕ್ಷಕ ಸಂಘದ ಅಧ್ಯಕ್ಷ ಮಂಜುನಾಥ ಹೊಸಮನಿ ಹೇಳಿದರು.

## ನ.07 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾ ಪ್ರವಾಸ

• ಉದಯವಾಹಿನಿ ಚಿತ್ರದುರ್ಗ

ಹೊಸದುರ್ಗ ತಾಲ್ಲೂಕು ಸಾಣೆಹಳ್ಳಿಯ ಶ್ರೀ ತರಳುಬಾಳು ಜಗದ್ಗುರು ಬೃಹನ್ಮಠದಲ್ಲಿ, ಶ್ರೀ ಶಿವಕುಮಾರ ಕಲಾಸಂಘ(ರಿ) ಆಯೋಜಿಸಿರುವ ಪ್ರಶಸ್ತಿ ಪ್ರದಾನ ಮತ್ತು ರಾಷ್ಟ್ರೀಯ ನಾಟಕೋತ್ಸವ ಸಮಾರೋಪ ಸಮಾರಂಭದಲ್ಲಿ ಭಾಗವಹಿಸುವ ಸಲುವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ನ.07 ರಂದು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ಈ ವೇಳೆ ಅಚ್ಚುಕಟ್ಟಾಗಿ ಶಿಷ್ಟಾಚಾರ ಪಾಲನೆಯೊಂದಿಗೆ ಕಾನೂನು ಸುವ್ಯವಸ್ಥೆ, ಸಾರಿಗೆ ಮತ್ತು ರಕ್ಷಣೆ ವ್ಯವಸ್ಥೆಗಳನ್ನು ಏರ್ಪಾಡು ಮಾಡುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಈ ಕುರಿತು ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು. ಮುಖ್ಯಮಂತ್ರಿಗಳ ಪ್ರವಾಸದ ವೇಳೆ ತಮ್ಮ ತಮ್ಮ ಇಲಾಖೆಗಳ ಪ್ರಗತಿಯ ಸಂಪೂರ್ಣ ಮಾಹಿತಿಯೊಂದಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿ ಲಭ್ಯವಿರಬೇಕು. ಮುಖ್ಯವಾಗಿ ಪಂಚಗ್ಯಾರಂಟಿ ಯೋಜನೆಗಳ ಈವರೆಗಿನ ಪ್ರಗತಿಯ ಮಾಹಿತಿಯನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ನೀಡಬೇಕು. ಸ್ಥಳೀಯ ತಹಶೀಲ್ದಾರ್ ಹಾಗೂ ಪೊಲೀಸರು ಬಂದೋಬಸ್ತ್ ಸಿದ್ದತೆಗಳನ್ನು ಪರಿಶೀಲಿಸಬೇಕು. ಉಪವಿಭಾಗಾಧಿಕಾರಿಗಳು ಶಿಷ್ಟಾಚಾರ ಪ್ರಕಾರ ಮುಖ್ಯಮಂತ್ರಿಗಳು ಸೇವಿಸುವ ಆಹಾರದ ಪರೀಕ್ಷೆಗೆ ಆಹಾರ ಸುರಕ್ಷತಾಧಿಕಾರಿಗಳನ್ನು ನೇಮಿಸಬೇಕು. ತುಮಕೂರಿನಿಂದ ಹೆಲಿಕಾಪ್ಟರ್ ಮೂಲಕ ಹೊಸದುರ್ಗ ನೀರಗುಂದ ಗೇಟ್ ಹತ್ತಿರದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಆವರಣದಲ್ಲಿ ನಿರ್ಮಿಸಿರುವ ಹೆಲಿಪ್ಯಾಡ್‌ಗೆ ಮುಖ್ಯಮಂತ್ರಿಗಳು ಆಗಮಿಸುವರು. ನಂತರ ಸಾಣೆಹಳ್ಳಿಯಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಈ ಎರಡೂ ಸ್ಥಳದಲ್ಲಿಯೂ ಆರೋಗ್ಯ ಇಲಾಖೆಯಿಂದ ಆಂಬ್ಯುಲೆನ್ಸ್, ಅಗ್ನಿಶಾಮಕ ಇಲಾಖೆಯಿಂದ ಅಗ್ನಿಶಾಮಕ ವಾಹನಗಳನ್ನು ಸನ್ನದ್ಧವಾಗಿರಿಸಬೇಕು. ಮುಖ್ಯಮಂತ್ರಿಗಳು ಕಾರಿನಲ್ಲಿ ಪ್ರಯಾಣಿಸುವ ರಸ್ತೆಗಳ ಸುಸ್ಥಿತಿಯನ್ನು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಖಾತರಿ ಪಡಿಸಿಕೊಳ್ಳಬೇಕು.

ಕಾರ್ಯಕ್ರಮಗಳಲ್ಲಿ ವಿದ್ಯುತ್ ಅಡಚಣೆಯಾಗದಂತೆ ಬೆಸ್ಕಾಂ ಅಧಿಕಾರಿಗಳು ಎಚ್ಚರವಹಿಸಬೇಕು. ರಾತ್ರಿ ಮುಖ್ಯಮಂತ್ರಿಗಳು ರಸ್ತೆಯ ಮೂಲಕ ಬೆಂಗಳೂರಿಗೆ ತೆರಳುವುದರಿಂದ ಪೊಲೀಸ್ ಇಲಾಖೆ ಮುಂಚಿತವಾಗಿಯೇ ಸಾರಿಗೆ ಹಾಗೂ ರಕ್ಷಣೆ ವ್ಯವಸ್ಥೆಗಳನ್ನು ಕೈಗೊಳ್ಳಬೇಕು. ಬೆಲಗೂರು ಹಾಗೂ ಸಾಣೆಹಳ್ಳಿಯಲ್ಲಿ ಗ್ರಾಮ ಪಂಚಾಯಿತಿಯಿಂದ ಅಗತ್ಯ ಸ್ವಚ್ಛತಾ ಕಾರ್ಯಗಳನ್ನು ಮುಂಚಿತವಾಗಿ ಕೈಗೊಳ್ಳಬೇಕು. ರೈತರು, ಹೋರಾಟಗಾರರು ಹಾಗೂ ಸಾರ್ವಜನಿಕರು ಮುಖ್ಯಮಂತ್ರಿಗಳಲ್ಲಿ ಕುಂದು ಕೊರತೆ, ಅಹವಾಲುಗಳನ್ನು ಲಿಖಿತವಾಗಿ ಸಲ್ಲಿಸಿದರೆ ಅಥವಾ ಮೌಖಿಕವಾಗಿ ಹೇಳಿಕೊಂಡರೆ, ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳು ಸ್ಥಳದಲ್ಲಿ ಹಾಜರಿದ್ದು ಉತ್ತರ ನೀಡಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಹೇಳಿದರು.

ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ, ಉಪವಿಭಾಗಧಿಕಾರಿ ಮೆಹಬೂಬ್ ಜಿಲಾನಿ ಖುರೇಷಿ, ಜಿ.ಪಂ. ಉಪಕಾರ್ಯದರ್ಶಿ ಡಾ.ರಂಗನಾಥ, ಉಪ ಅರಣ್ಯ ಸಂರಕ್ಷಣಾಧಿಕಾರಿ ಗೋಪ್ಯಾನಾಯ್ಕ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕಿ ಸವಿತಾ, ಡಿವೈಎಸ್‌ಪಿ ದಿನಕರ್ ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

**ಶಿಷ್ಟಾಚಾರ ಪಾಲನೆಗೆ ಜಿಲ್ಲಾಧಿಕಾರಿ ಸೂಚನೆ**

## ವಾಹನ ನಿಲುಗಡೆ ಸ್ಥಳದಲ್ಲಿ ನಿಗದಿತ ದರಕ್ಕಿಂತ ಅಧಿಕ ಶುಲ್ಕ ವಸೂಲಿ?

• ಉದಯವಾಹಿನಿ ಗಂಗಾವತಿ

ಧಾರ್ಮಿಕ ಪುಣ್ಯಕ್ಷೇತ್ರ ಅಂಜನಾದ್ರಿ ಬೆಟ್ಟದ ವಾಹನ ನಿಲುಗಡೆ (ಪಾರ್ಕಿಂಗ್) ಸ್ಥಳದಲ್ಲಿ ತಾಲ್ಲೂಕು ಆಡಳಿತ ನಿಗದಿಪಡಿಸಿದ ದರಕ್ಕಿಂತ ಮೂರು ಪಟ್ಟು ಅಧಿಕ ಶುಲ್ಕವನ್ನು ವಾಹನಗಳ ಮಾಲೀಕರಿಂದ ಗುತ್ತಿಗೆದಾರರು ವಸೂಲಿ ಮಾಡುತ್ತಿರುವ ಆರೋಪ ಕೇಳಿಬಂದಿದೆ

ಹನುಮನ ಜನ್ಮಸ್ಥಳ ಅಂಜನಾದ್ರಿ ಬೆಟ್ಟ ವಿಶ್ವವಿಖ್ಯಾತಿ ಪಡೆದಿದ್ದು ಶನಿವಾರ, ಭಾನುವಾರ, ಹಬ್ಬ ಸೇರಿ ನಿತ್ಯ ಸಾವಿರಾರು ಭಕ್ತರು ದ್ವಿಚಕ್ರವಾಹನ, ಕಾರು, ಟಂಟಂ, ಟಾಟಾ ಮ್ಯಾಜಿಕ್, ಬಸ್‌ಗಳಲ್ಲಿ ಅಂಜನಾದ್ರಿಗೆ ಭೇಟಿ ನೀಡುತ್ತಾರೆ. ವಾಹನಗಳು ಸುರಕ್ಷಿತವಾಗಿರಲಿ ಎಂಬ ಕಾರಣ ಪಾರ್ಕಿಂಗ್ ಸ್ಥಳ ನಿಗದಿಪಡಿಸಿ ಟೆಂಡರ್ ಮೂಲಕ ಗುತ್ತಿಗೆ ನೀಡಲಾಗಿದೆ.

ಟೆಂಡರ್ ಪಡೆದ ಗುತ್ತಿಗೆದಾರ ಪಾರ್ಕಿಂಗ್ ಸ್ಥಳವನ್ನೇ ದಂಧೆಯಾಗಿಸಿಕೊಂಡು ಸವಾರರಿಗೆ ಅಧಿಕ ಶುಲ್ಕ ವಿಧಿಸುತ್ತಾ ಹಗಲು ದರೋಡೆಗೆ ಇಳಿದಿದ್ದಾನೆ. ಸವಾರರು ವಾಹನಗಳ ಸುರಕ್ಷತೆಗಾಗಿ ಅನಿವಾರ್ಯವಾಗಿ ಗುತ್ತಿಗೆದಾರರಿಗೆ ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ಹಣ ಪಾವತಿ ಮಾಡುತ್ತಿದ್ದಾರೆ' ಎಂದು ಸಾರ್ವಜನಿಕರು ದೂರುತ್ತಾರೆ.

**ರೂ.30.30ಲಕ್ಷಕ್ಕೆ ಟೆಂಡರ್:** ಪ್ರತಿವರ್ಷ ಅಂಜನಾದ್ರಿ ಪಾರ್ಕಿಂಗ್ ಸ್ಥಳಕ್ಕೆ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳು ಟೆಂಡರ್ ಕರೆದು ಹರಾಜು ಪ್ರಕ್ರಿಯೆ ನಡೆಸಿ, ವಾಹನ ನಿಲುಗಡೆ ಸ್ಥಳ ಗುತ್ತಿಗೆಗೆ ನೀಡುತ್ತಾರೆ. ಈ ವರ್ಷ ರೂ.30.30ಲಕ್ಷಕ್ಕೆ ಗಂಗಾವತಿ ತಾಲ್ಲೂಕಿನ ವಡ್ಡರಹಟ್ಟಿ ಗ್ರಾಮದ ವೆಂಕಟೇಶ ಎನ್ನುವವರಿಗೆ ಏ.1ರಿಂದ 2026ರ ಮಾರ್ಚ್ 31ರವರೆಗೆ ಪಾರ್ಕಿಂಗ್ ಸ್ಥಳ ಗುತ್ತಿಗೆ ನೀಡಲಾಗಿದೆ. 'ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ನಿಗದಿಪಡಿಸಿದ ದರಕ್ಕೆ ವಾಹನಗಳಿಗೆ ನಿಲ್ಲಲು ಅವಕಾಶ ನೀಡಿ, ಶುಲ್ಕವಿಧಿಸಿದರೆ ಟೆಂಡರ್‌ಗೆ ನೀಡಿದ ಹಣ ಸಹ ಸಂಗ್ರಹಿಸಲು ಆಗುವುದಿಲ್ಲ ಎಂದು ಸವಾರರಿಂದ ಗುತ್ತಿಗೆದಾರರು ಅಧಿಕ ಶುಲ್ಕ ವಸೂಲಿ ಮಾಡಲಾಗುತ್ತಿದೆ' ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ. ಟೆಂಡರ್ ನಿಯಮಾವಳಿ ಪ್ರಕಾರ ಗುತ್ತಿಗೆದಾರರು ಬಸ್‌ಗೆ ರೂ.30, ಕಾರಿಗೆ ರೂ.20, ಬೈಕ್ ಗಳಿಗೆ ರೂ.10 ಶುಲ್ಕ ವಿಧಿಸಬೇಕು.

**ಪಾರ್ಕಿಂಗ್ ಸ್ಥಳದಲ್ಲಿ ಬಸ್ ನಿಲುಗಡೆಗೆ ರೂ.30 ಮಾತ್ರ ಕೊಡುವ ಬಗ್ಗೆ ಸೂಚನಾ ಫಲಕ ಹಾಕಲಾಗಿತ್ತು. ಆದರೆ ಹಣ ಪಡೆಯುವ ಹುಡುಗರು ನನ್ನಿಂದ ಬಲವಂತವಾಗಿ ರೂ.200 ಪಡೆದಿದ್ದಾರೆ -ಕನ್ನಯ್ಯ ಲಾಲ್,**

ಆದರೆ ಗುತ್ತಿಗೆದಾರರು ಕೆಲಸಗಾರರಿಂದ ಬಸ್‌ಗಳಿಗೆ ರೂ.100ರೂ.200, ಕಾರುಗಳಿಗೆ ರೂ.50ರೂ.100ರವರೆಗೆ ಶುಲ್ಕವಿಧಿಸಿ, ನಿತ್ಯ ಸಾವಿರಾರು ರೂಪಾಯಿ ಹಣವನ್ನು ಲಪಟಾಯಿಸುವ ಆರೋಪ ಸಾಮಾನ್ಯವಾಗಿದೆ. ಕೂಡಲೇ ಅಧಿಕಾರಿಗಳು ಈ ಬಗ್ಗೆ ಕ್ರಮಕ್ಕೆಗೊಳ್ಳಬೇಕೆಂದು ವಾಹನ ಸವಾರರು ಒತ್ತಾಯಿಸುತ್ತಾರೆ.

**ಹೊರ ರಾಜ್ಯದವರೇ ಗುತ್ತಿಗೆದಾರರ ಟಾರ್ಗೆಟ್:** ಅಂಜನಾದ್ರಿ ಬೆಟ್ಟಕ್ಕೆ ಮಹಾರಾಷ್ಟ್ರ, ಬಿಹಾರ, ಉತ್ತರಪ್ರದೇಶ, ಗುಜರಾತ್, ಹರಿಯಾಣ, ಅಸ್ಸಾಂ, ಒಡಿಶಾ ಸೇರಿ ಹಲವು ರಾಜ್ಯಗಳ ಜನರು ಬಸ್‌ಗಳ ಮೂಲಕ ಅಂಜನಾದ್ರಿಗೆ ಬರುತ್ತಾರೆ. ಅವರಿಗೆ ಇಲ್ಲಿನ ಕನ್ನಡಭಾಷೆಯ ಬಗ್ಗೆ ಜ್ಞಾನವಿರದ ಕಾರಣ ಪಾರ್ಕಿಂಗ್ ಗುತ್ತಿಗೆದಾರರು ಬಸ್, ಕಾರುಗಳ ನಿಲುಗಡೆಗೆ ರೂ.100-ರೂ.300ವರೆಗೆ ಶುಲ್ಕ ವಿಧಿಸಿ, ಅಧಿಕ ಹಣ ಪೀಕುತ್ತಾರೆ ಎಂದು ಗುಜರಾತ್ ಬಸ್ ಚಾಲಕ ಅಮರನಾಥ ಆರೋಪಿಸುತ್ತಾರೆ.


ಉದಯವಾಹಿನಿ ಚಿತ್ರ


## ಕುಪನೂರ:ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಕುಪನೂರ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಕುಪನೂರ ಗ್ರಾಮ ಪಂಚಾಯಿತಿ ಇವರ ಸಹಭಾಗಿತ್ವದಲ್ಲಿ ನೂತನ ಶುದ್ಧಗಂಗಾ ಘಟಕವನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಗಣಪತಿ ಮಾಳಂಜಿ ಉಧ್ಘಾಟಿಸಿದರು.

ತದನಂತರ ಮಾತನಾಡಿ ಅಶುದ್ಧ ನೀರು ಕುಡಿಯುವುದರಿಂದ ಸಾರ್ವಜನಿಕರಿಗೆ ಅನೇಕ ರೋಗರುಜಿನಗಳು ಬರುತ್ತವೆ ಆದಕಾರಣ ಗ್ರಾಮಸ್ಥರು ಶುದ್ಧೀಕರಣಗೊಳಿಸಿದ ನೀರು ಕುಡಿಯಬೇಕು. ಇಲ್ಲಿ ಯಾವುದೇ ಶುದ್ಧ ಕುಡಿಯುವ ನೀರಿನ ಘಟಕ ಇಲ್ಲದಿರುವುದರಿಂದ ಸಾರ್ವಜನಿಕರಿಗೆ ಉಪಯೋಗ ಆಗಲಿವೆಂಬ ದೃಷ್ಟಿಯಿಂದ ಶುದ್ಧಗಂಗಾ ಘಟಕ ಸ್ಥಾಪನೆ ಮಾಡಲಾಗಿದೆ ಗ್ರಾಮಸ್ಥರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಧರ್ಮಸ್ಥಳ ಸಂಸ್ಥೆಯ ತಾಲೂಕಾ ಯೋಜನಾಧಿಕಾರಿ ಶಕುಂತಲಾ ಹಾಗೂ ಜಿಲ್ಲಾ ಜನ ಜಾಗೃತಿ ವೇದಿಕೆಯ ಉಪಾಧ್ಯಕ್ಷೆ ನರಸಮ್ಮ ಅವುಂಟಿ ಮತ್ತು ಕುಪನೂರ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಮತಾಜ್ ಬೇಗಂ ಮಾತನಾಡಿದರು. ಕುಪನೂರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಯಲಗೊಂಡ ಸ್ವಾಗತಿಸಿದರು,ಧರ್ಮಸ್ಥಳ ಕೃಷಿ ಮೇಲ್ವಿಚಾರಕ ಸತೀಶ ಕೆ.ಎಚ್.ನಿರೂಪಿಸಿದರು,ನವೀನಕುಮಾರ ವಂದಿಸಿದರು.

ಜಗದೇವಯ್ಯ ಸ್ವಾಮಿ,ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಮಲ್ಲಿಕಾರ್ಜುನ,ಪ್ರಕಾಶ,ಹಣಮಂತ,ಫಾಳೆಪ್ಪಾ,ಅಹೇಮದ ಪಟೇಲ್,ರಫೀಕ್ ಕುಲಕರ್ಣಿ,ವಲಯದ ಮೇಲ್ವಿಚಾರಕಿ ನಿಂಗಮ್ಮ,ಅನೇಕರಿದ್ದರು.


ಉದಯವಾಹಿನಿ ಚಿತ್ರ

## 17.06 ಲಕ್ಷ ಜನರ ಮಾಹಿತಿ ಸಂಗ್ರಹ

• ಉದಯವಾಹಿನಿ ದಾವಣಗೆರೆ

ಜಿಲ್ಲೆಯಲ್ಲಿ 17.06 ಲಕ್ಷ ಜನರ ಮಾಹಿತಿಯನ್ನು ಸಂಗ್ರಹಿಸಲಾಗಿದೆ. 4,41,579 ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. ಸಾಂಖ್ಯಿಕ ಇಲಾಖೆಯ ಪ್ರಕಾರ ಜಿಲ್ಲೆಯಲ್ಲಿ 16,98,370 ಜನಸಂಖ್ಯೆ ಇರಬಹುದು ಎಂದು ಅಂದಾಜಿಸಲಾಗಿತ್ತು. ಇದಕ್ಕಿಂತಲೂ ಹೆಚ್ಚು ಜನರನ್ನು ಸಮೀಕ್ಷರು ಸಂಪರ್ಕಿಸಿದ್ದಾರೆ. ಸೆ.22ರಂದು ಆರಂಭವಾದ ಸಮೀಕ್ಷೆ ಅ.7ಕ್ಕೆ ಮುಗಿಯಬೇಕಿತ್ತು. ಅ.19ರವರೆಗೆ ಅವಧಿ ವಿಸ್ತರಿಸಿದರೂ ಸಮೀಕ್ಷೆ ಪೂರ್ಣಗೊಳ್ಳಲಿಲ್ಲ. ಸಮೀಕ್ಷೆಯಿಂದ ಹೊರಗುಳಿದವರು ಹಾಗೂ ಮಾಹಿತಿ ನೀಡಲು ಸಾಧ್ಯವಾಗದಿರುವವರನ್ನು ಸಂಪರ್ಕಿಸಲು ಅ.31ರವರೆಗೆ ಗಡುವು ನೀಡಿದ ಸರ್ಕಾರ, ಶಿಕ್ಷಕರನ್ನು ಕೈಬಿಟ್ಟು ಉಳಿದ ಇಲಾಖೆಯ ಸಿಬ್ಬಂದಿಯನ್ನು ಬಳಸಿಕೊಳ್ಳಲು ಸೂಚಿಸಿತ್ತು. ಆನ್‌ಲೈನ್ ಮೂಲಕ ಮಾಹಿತಿ ಹಂಚಿಕೊಳ್ಳಲು ನ.10ರವರೆಗೆ ಅವಕಾಶವಿದೆ. 'ಶಿಕ್ಷಕರ ಬಳಿಕ ಸಮೀಕ್ಷೆಯ ಹೊಣೆಯನ್ನು ಅಂಗನವಾಡಿ, ಆಶಾ ಕಾರ್ಯಕರ್ತೆಯರು ಹಾಗೂ ಗ್ರಾಮೀಣ, ನಗರ ಸ್ಥಳೀಯ ಸಂಸ್ಥೆಯ ಸಿಬ್ಬಂದಿಗೆ ವಹಿಸಲಾಗಿತ್ತು. ಸಮೀಕ್ಷೆಯಿಂದ ಹೊರಗುಳಿದವರು, ಮಾಹಿತಿ ನೀಡಲು ಸಾಧ್ಯವಾಗದಿರುವವರನ್ನು ಸಂಪರ್ಕಿಸಲು ಸುಲಭವಾಯಿತು' ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಮಾಹಿತಿ ನೀಡಿದ್ದಾರೆ.

## ಅಳವಂಡಿ - ಬೆಟಗೇರಿ ಏತ ನೀರಾವರಿ; ಟ್ರೈಯಲ್ ರನ್ ಶೀಘ್ರ: ಶಾಸಕ


ಉದಯವಾಹಿನಿ ಚಿತ್ರ

• ಉದಯವಾಹಿನಿ ಅಳವಂಡಿ

ಈ ಭಾಗದ ಬಹುದಿನಗಳ ಬೇಡಿಕೆಯಾದ ಅಳವಂಡಿ - ಬೆಟಗೇರಿ ಏತ ನೀರಾವರಿ ಯೋಜನೆಯ ಕಾಮಗಾರಿ ಮುಗಿದಿದ್ದು ಕೆಲವೇ ದಿನಗಳಲ್ಲಿ ಟ್ರೈಯಲ್ ರನ್ ಚೆಕ್ ಮಾಡಲಾಗುವುದು' ಎಂದು ಶಾಸಕ ರಾಘವೇಂದ್ರ ಹಿಟ್ನಾಳ ಹೇಳಿದರು. ಅಳವಂಡಿ ಜಿ.ಪಂ ವ್ಯಾಪ್ತಿಯಲ್ಲಿ ಕಂಪ್ಲಿ, ಅಳವಂಡಿ, ಗುಡಗೇರಿ ಕವಲೂರು, ಮುರ್ಲಾಪುರ, ಘಟ್ಟಿರೆಡ್ಡಿಹಾಳ, ಬೆಳಗಟ್ಟಿ, ಹಟ್ಟಿ, ಹೈದರ್ ನಗರ, ಕೇಸಲಾಪುರ ಹಾಗೂ ರಘುನಾಥನಹಳ್ಳಿ ಗ್ರಾಮಗಳಲ್ಲಿ ರೂ.3.86 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅಡಿಗಲ್ಲು ಹಾಗೂ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಕಲ್ಯಾಣ ಪಥ ಯೋಜನೆಯಡಿ, ಸಿಎಂ ಅವರು ನೀಡಿರುವ ವಿಶೇಷ ಅನುದಾನದಲ್ಲಿ ರಸ್ತೆ ಅಭಿವೃದ್ಧಿ ಮಾಡಲಾಗುತ್ತಿದೆ. ಅಳವಂಡಿ, ರಘುನಾಥನಹಳ್ಳಿ, ನಿಲೋಗಿಪುರ ಸೇತುವೆ ನಿರ್ಮಾಣ ಮಾಡಲು ಕ್ರಮವಹಿಸಿದ್ದೇನೆ. ಕ್ಷೇತ್ರದ ಪ್ರತಿ ಗ್ರಾಮದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ತಂದು ನಾನಾ ಯೋಜನೆಯ ಕೆಲಸಗಳನ್ನು ಕೈಗೆತ್ತಿಕೊಂಡಿದ್ದೇನೆ. ಅಳವಂಡಿಯ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೆ ಏರಿಸಲಾಗುವುದು. ಕೆಪಿಎಸ್ ಶಾಲೆಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭ ಮಾಡಲಾಗುವುದು. ವಿಂಡ್ ಮಿಲ್ ಹಾಗೂ ಸೋಲಾರ್ ಕಂಪನಿಗಳಿಗೆ ಜಮೀನು ನೀಡಬೇಡಿ ಎಂದು ರೈತರಿಗೆ ಮನವಿ ಮಾಡಿದರು.

ಮುಖಂಡರಾದ ಗೂಳಪ್ಪ ಹಲಗೇರಿ, ಕೃಷ್ಣಾರೆಡ್ಡಿ ಗಲಬಿ, ಭರಮಪ್ಪ ನಗರ, ಗಾಳೆಪ್ಪ ಪೂಜಾರ, ಭೀಮಣ್ಣ ಬಚನಹಳ್ಳಿ, ತೋಟಪ್ಪ, ಶಾಹೀದ್, ಮಲ್ಲಪ್ಪ, ಗುರು ಬಸವರಾಜ, ಅನ್ವರ್, ಪರಶುರಾಮ, ಸುರೇಶ, ಗವಿಸಿದ್ದಪ್ಪ ಕರಡಿ, ಮಹಾಂತೇಶ, ನಾಗರಾಜ್, ಹನುಮಂತ, ಪರಶುರಾಮ, ಹೊನ್ನಕೇರಪ್ಪ,ಇದ್ದರು.

# ಮುಟ್ಟು ಹೆಣ್ಣು ಮಕ್ಕಳಿಗೆ ವರವೇ ಹೊರತು ಶಾಪವಲ್ಲ

### ಹದಿ ಹರೆಯದವರ ಆರೋಗ್ಯ ಮತ್ತು ಕ್ಷೇಮ ದಿನಾಚರಣೆ ಅಂಗವಾಗಿ ಮಕ್ಕಳ ಮಾಸಾಚರಣೆ

• ಉದಯವಾಹಿನಿ ಕಲಬುರಗಿ

ಮುಟ್ಟು ಹೆಣ್ಣು ಮಕ್ಕಳಿಗೆ ವರವೇ ಹೊರತು ಶಾಪವಲ್ಲ ಎಂದು ಆರ್‌ಕೈಎಸ್‌ಕೆ ಆಪ್ತ ಸಮಾಲೋಚಕ ಮಲ್ಲಿಕಾರ್ಜುನ ಸಿಂಗೆ ಹೇಳಿದರು. ದೇವಲಗಾಣಗಾಪುರದ ಸಮುದಾಯ ಆರೋಗ್ಯ ಕೇಂದ್ರದ ವತಿಯಿಂದ ಚೌಡಾಪುರ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ರಾಷ್ಟ್ರೀಯ ಕಿಶೋರ ಸ್ವಾಸ್ಥ ಕಾರ್ಯಕ್ರಮದ ಅಡಿಯಲ್ಲಿ ಹದಿ ಹರೆಯದವರ ಆರೋಗ್ಯ ಮತ್ತು ಕ್ಷೇಮ ದಿನಾಚರಣೆ ಅಂಗವಾಗಿ ಮಕ್ಕಳ ಮಾಸಾಚರಣೆ ನಿಮಿತ್ಯ ಹಮ್ಮಿಕೊಂಡಿದ್ದ '' ಮುಟ್ಟಿನ ನೈರ್ಮಲ್ಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ದಿನಗಳಲ್ಲಿ ಮುಟ್ಟು ಅಂದರೆ ಋತುಚಕ್ರ ಎಂಬ ವಿಷಯವನ್ನು ಎತ್ತಿದರೆ ಸಾಕು ಮುಜುಗರ ನಾಚಿಕೆ ಪಡುವಂತಹ ಕಾಲ ಇನ್ನೂ ಜೀವಂತವಾಗಿದೆ ಮುಟ್ಟಿನ ಬಗ್ಗೆ ಹಲವಾರು ವಿಷಯಗಳು ಹಲವಾರು ಅವರ್ನೆಸ್ ಕಾರ್ಯಕ್ರಮಗಳು ಆಗಿದ್ದರೂ ಕೂಡ ಇನ್ನೂ ಈ ಒಂದು ವಿಷಯದ ಕುರಿತು ಹೆಣ್ಣು ಮಕ್ಕಳು ಮುಜುಗರ ಪಡುವುದು ನೋಡಿದರೆ ವಿಪರ್ಯಾಸ ಎನಿಸುತ್ತದೆ ಮುಟ್ಟು ಹೆಣ್ಣು ಮಕ್ಕಳಿಗೆ ಪ್ರಕೃತಿಯಿಂದ ಬಂದಿರ್ತಕ್ಕಂತ ಕೊಡುಗೆ ವರವೇ ಹೊರತು ಅದು ಶಾಪವಲ್ಲ ಏಕೆಂದರೆ ಒಂದು ಹೆಣ್ಣು ಮುಟ್ಟು ಅದಾಗಲೇ ಇನ್ನೊಂದು ಜೀವ ಸೃಷ್ಟಿಯಾಗಲು ಸಾಧ್ಯ ಒಂದು ವೇಳೆ ಹೆಣ್ಣು ಮಕ್ಕಳಲ್ಲಿ ಮುಟ್ಟು ಇಲ್ಲದಿದ್ದರೆ ಈ ಪ್ರಪಂಚದಲ್ಲಿ ಇಷ್ಟೊಂದು ಜನ ಸೃಷ್ಟಿಯಾಗುತ್ತಿರಲಿಲ್ಲ ಅದಕ್ಕಾಗಿ ಮುಟ್ಟು ಶುದ್ಧವೇ ಹೊರತು ಅಶುದ್ಧವಲ್ಲ ಅದಕ್ಕಾಗಿ ಒಂದು ಹೆಣ್ಣಿಗೆ ಒಂದು ಸಲ ಮುಟ್ಟು ಶುರುವಾದರೆ ಪ್ರತಿ 28 ದಿನಗಳಿಗೊಮ್ಮೆ ಅದು ಪುನರಾವರ್ತಿತವಾಗುತ್ತದೆ ಸಾಮಾನ್ಯವಾಗಿ 21 ದಿನಗಳಿಂದ 35 ದಿನಗಳ ಒಳಗಾಗಿ ಬಂದರೆ ಅದು ಸಾಮಾನ್ಯ ಮುಟ್ಟು ಅಂತ ಹೇಳಬಹುದು ಹಾಗೆಯೇ ಮುಟ್ಟಿನ ಸಮಯದಲ್ಲಿ 3 ರಿಂದ ಏಳು 7 ದಿನಗಳ ಕಾಲ ರಕ್ತಸ್ರಾವ ಆದರೆ ಅದು ಸಾಮಾನ್ಯ ರಕ್ತಸ್ರಾವ ಎಂದು ಹೇಳಬಹುದು ಹಾಗಾಗಿ ಮುಟ್ಟು ಶುರುವಾದರೆ ಹಲವಾರು ಸಮಸ್ಯೆಗಳು ಹೆಣ್ಣು ಮಕ್ಕಳಲ್ಲಿ ಕಾಡುತ್ತವೆ ಕೆಲವರಿಗೆ ಸರಿಯಾಗಿ ಮುಟ್ಟು ಬಾರದೆ ಇರುವುದು ಇನ್ನು ಕೆಲವರಿಗೆ ಮುಟ್ಟು ಬಂದರೂ ಕೂಡ ಸರಿಯಾದ ರೀತಿಯಲ್ಲಿ ರಕ್ತಸ್ರಾವವಾಗದೇ ಇರುವುದು ಇನ್ನು ಕೆಲವರಿಗೆ ಮುಟ್ಟಿನ ಸಮಯದಲ್ಲಿ ಕೈ ಕಾಲು ಸೆಳೆತ ಸೊಂಟ ನೋವು ತಲೆನೋವು ವಾಕರಿಕೆ ಊಟ ಸೇರದೆ ಇರುವುದು ಇಂಥ ಸಮಸ್ಯೆಗಳು ಹೆಣ್ಣು ಮಕ್ಕಳು ಮುಟ್ಟಿನ ಸಮಯದಲ್ಲಿ ಸಾಮಾನ್ಯವಾಗಿ ಆಗತಕ್ಕಂತದು ಎಂದರು.


ಉದಯವಾಹಿನಿ ಚಿತ್ರ

**ಕಾರ್ಯಕ್ರಮದ ಪೋಸ್ಟರ್‌ಗಳು ಬಿಡುಗಡೆ**

**ವಸತಿ ಶಾಲೆಯ ಪ್ರಾಂಶುಪಾಲರಾದ ಮಡಿವಾಳ ಪಸೋಡಿ ಹಾಗೂ ಆರೋಗ್ಯಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶಶಿಕಾಂತ್ ಅವರು ಕಾರ್ಯಕ್ರಮದ ಪೋಸ್ಟರ್ಗಳು ಬಿಡುಗಡೆ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಆನ್ ಇನ್ ಹಿಬಿಟಡ್ ಸಂಸ್ಥೆಯ ಕುಮಾರಿ ಲಕ್ಷ್ಮಿ ದೇವಿ ಮಾತನಾಡಿ ಸ್ನೇಹಿ ಶೌಚಾಲಯ ಹೇಗಿರಬೇಕು, ಶುಚಿ ಹೇಗೆ ಬಳಸಿಕೊಳ್ಳಬೇಕು ಪ್ಯಾಡ್‌ಗಳ ವಿಲೇವಾರಿ ಹೇಗೆ ಮಾಡಬೇಕು, ಮುಟ್ಟು ಬಂದಾಗ ಅದನ್ನು ಹೇಗೆ ಟ್ರ್ಯಾಕ್ ಮಾಡಬೇಕು ಎಂಬುವುದರ ಕುರಿತು ಮಾಹಿತಿ ನೀಡಿದರು.**

**ಟಿ ಬಿ ಮಲೇರಿಯಾ ಇತರ ಸಾಂಕ್ರಾಮಿಕ ರೋಗಗಳು ಹೇಗೆ ಹರಡುತ್ತವೆ ಅದರಿಂದ ನಾವು ಹೇಗೆ ರಕ್ಷಿಸಿಕೊಳ್ಳಬೇಕು ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಹೇಗೆ ಸ್ವಚ್ಛಗೊಳಿಸಬೇಕು ಸೊಳ್ಳೆಗಳ ಕಡಿತದಿಂದ ತಪ್ಪಿಸಿಕೊಳ್ಳುವ ರೀತಿ ಹೇಗೆ ಎಂಬುವುದರ ಕುರಿತು ಮಾಹಿತಿ ನೀಡಿದರು. -ಶಶಿಕಾಂತ್**

## ಮೈಲಾಪುರ ಗ್ರಾಪಂ ಯಿಂದ ಸ.ಹಿ.ಪ್ರಾ. ಶಾಲೆಗೆ 60 ಕುರ್ಚಿಗಳು ಹಾಗೂ 15 ಊಟದ ಟೇಬಲ್ ಹಾಗೂ 8 ಗುಣಮಟ್ಟದ ಸೀಲಿಂಗ್ ಫ್ಯಾನ್ ವಿತರಣೆ

• ಉದಯವಾಹಿನಿ ಕಾರಟಗಿ

ತಾಲೂಕಿನ ಮೈಲಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ, ಮೈಲಾಪುರ ಗ್ರಾ ಪಂ ಅಧ್ಯಕ್ಷರು ಅಭಿವೃದ್ಧಿ ಅಧಿಕಾರಿಗಳು ಸಿಬ್ಬಂದಿ ವರ್ಗ ವತಿಯಿಂದ ಶಾಲಾ ಮಕ್ಕಳಿಗೆ ಕೂಡಲು ಅನುಕೂಲವಾಗಲೆಂದು ಸುಮಾರು 60 ಕುರ್ಚಿಗಳು ಹಾಗೂ 15 ಊಟದ ಟೇಬಲ್ ಗಳನ್ನು ಹಾಗೂ ಎಂಟು ಗುಣಮಟ್ಟದ ಸೀಲಿಂಗ್ ಫ್ಯಾನ್ ಗಳನ್ನು ಗ್ರಾಮ ಪಂಚಾಯತಿಯ ಆವರಣದಲ್ಲಿ ಅವುಗಳನ್ನು ಶಾಲೆಯ ಮುಖ್ಯ ಗುರುಗಳಿಗೆ ಹಸ್ತಾಂತರಿಸಿದರು. ಮತ್ತು ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಸರ್ವ ಸದಸ್ಯರು ಶಾಲೆಗೆ ಅತ್ಯಂತ ಮುತುವರ್ಜಿ ವಹಿಸಿ ಶೀಘ್ರದಲ್ಲಿಯೇ ನೀರಿನ ಉತ್ತಮವಾದ ಟ್ಯಾಂಕನ್ನು ನಿರ್ಮಿಸಿಲು ಕಾಮಗಾರಿಯನ್ನು ಆರಂಭಿಸಲು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಶ್ರೀ ಮತಿ ವನಜಾ ಮಾನ್ಯ ಸಹಾಯಕ ನಿರ್ದೇಶಕರು (ಗ್ರಾ. ಉ ) ತಾ ಪಂ. ಕಾರಟಗಿ ಶ್ರೀ ವೀರೇಶ ತಳವಾರ ಗ್ರಾ. ಪಂ.ಅಧ್ಯಕ್ಷರು ಶ್ರೀ ರಾಮು ನಾಯಕ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಶ್ರೀ ಸಂದೀಪ- ಗ್ರೇಡ್ -1 ಕಾರ್ಯದರ್ಶಿಗಳು ಶ್ರೀ ಕೆ. ವೀರಣ್ಣ -ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಶ್ರೀ ಯಮನೂರಪ್ಪ ಗೋಡಿನಾಳ -ಗ್ರಾ. ಪಂ. ಸದಸ್ಯರು ಹಾಗೂ ಯಮನೂರ ಗಾಣದಾಳ ಸೇರಿದಂತೆ ಗ್ರಾ. ಪಂ. ಸಿಬ್ಬಂದಿಯವರು ಉಪಸ್ಥಿತರಿದ್ದರು. ಶಾಲೆಯ ಮಕ್ಕಳು ಶಿಕ್ಷಕರು ಎಸ್ ಡಿ ಎಂ ಸಿ ಸರ್ವ ಸದಸ್ಯರ ಪರವಾಗಿ ಹೃತ್ಪೂರ್ವಕವಾದ ಧನ್ಯವಾದಗಳು ಸಲ್ಲಿಸಿದರು.


ಉದಯವಾಹಿನಿ ಚಿತ್ರ

## ಬೆಂಬಿಡದ ಮಳೆ: ರೈತರ ಕೈಗೆ ಸಿಗದ ಬೆಳೆ

• ಉದಯವಾಹಿನಿ ಆಲೂರು

ಬಿಸಿಲನ್ನು ನಂಬಿ ಜೋಳದ ಕಟಾವು ಮಾಡುತ್ತಿದ್ದ ತಾಲ್ಲೂಕಿನ ರೈತರಿಗೆ ಮತ್ತೆ ಮಳೆ ಸಂಕಷ್ಟ ತಂದೊಡ್ಡಿದೆ. ಎರಡು ದಿನಗಳಿಂದ ಬಿಸಿಲು ಇತ್ತು. ಆದರೆ, ಮಂಗಳವಾರ ಮದ್ಯಾಹ್ನದಿಂದ ಮೋಡ ಕವಿದ ವಾತಾವರಣವಿದ್ದು, ಸಂಜೆ ವೇಳೆಗೆ ತುಂತುರು ಮಳೆ ಆರಂಭವಾಗಿದೆ. ತಿಂಗಳ ಮೊದಲೇ ಜೋಳ ಕಟಾವು ಮಾಡಬೇಕಾಗಿತ್ತು. ಆದರೆ ನಿರಂತರ ಮಳೆಯಿಂದಾಗಿ ಕಟಾವು ಮಾಡಲು ಸಾಧ್ಯವಾಗಿಲ್ಲ. ಹಾಗಾಗಿ ತೆನೆಯಲ್ಲಿಯೇ ಜೋಳದ ಕಾಳು ಮೊಳಕೆ ಒಡೆಯುತ್ತಿವೆ. ಬಿಸಿಲು ಇದ್ದುದರಿಂದ ರೈತರು ಅಳಿದುಳಿದ ಮುಸುಕಿನ ಜೋಳವನ್ನು ಮುರಿಯಲು ಪ್ರಾರಂಭಿಸಿದ್ದರು.

ಕನಿಷ್ಠ ಒಂದು ವಾರ ಸುಡು ಬಿಸಿಲು ಬಿದ್ದ ನಂತರ ಜೋಳ ಕಟಾವು ಮಾಡಬೇಕಾಗಿತ್ತು. ಆದರೆ ಮುಂದಿನ ವಾರದಲ್ಲಿ ಮತ್ತೆ ಮಳೆಯಾಗಲಿದೆ ಎಂಬ ಹವಾಮಾನ ವರದಿ ಹಿನ್ನೆಲೆಯಲ್ಲಿ, ಈಗಲೇ ರೈತರು ಜೋಳ ಕಟಾವು ಮಾಡಲು ಮುಂದಾಗಿದ್ದಾರೆ.

ಸಂಜೆಯಿಂದ ಮಳೆ ಸುರಿಯಲು ಆರಂಭಿಸಿದ್ದು, ಹೊಲದ ಸನಿಹದಲ್ಲೇ ಜೋಳವನ್ನು ಗುಡ್ಡೆ ಮಾಡಿ, ಟಾರ್ಪಾಲು ಮುಚ್ಚಿದ್ದಾರೆ. ಕಟಾವು ಮಾಡಿರುವ ಜೋಳವನ್ನು 24 ಗಂಟೆಯೊಳಗೆ ಬಿಸಿಲಿನಲ್ಲಿ ಒಣಗಿಸದಿದ್ದರೆ, ತೇವಾಂಶ ಹೆಚ್ಚಿನ ಜೋಳದ ಕಾಳು ಕಪ್ಪಾಗುತ್ತದೆ ಎನ್ನುತ್ತಾರೆ ರೈತರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಭೂಮಿ ಅಥವಾ ಯಾವುದೇ ಆಸ್ತಿಯಲ್ಲಿ ಹೂಡಿಕೆ ಮಾಡುವುದು ನಿಮಗೆ ಮಾರಕವಾಗಬಹುದು.

**ವೃಷಭ** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು.

**ಮಿಥುನ** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು.

**ಕರ್ಕಾಟಕ** ಕಳೆದ ಉದ್ಯಮಗಳ ಯಶಸ್ಸು ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಹಣದ ಲಾಭ ನಿಮ್ಮ ನಿರೀಕ್ಷೆಯಂತಿರುವುದಿಲ್ಲ. ಮನೆಯಲ್ಲಿನ ಹಬ್ಬದ ವಾತಾವರಣ ನಿಮ್ಮ ಉದ್ವೇಗವನ್ನು ಶಮನಗೊಳಿಸುತ್ತದೆ.

**ಸಿಂಹ** ಸಣ್ಣ ಸಣ್ಣ ವಿಷಯಗಳು ನಿಮ್ಮ ಮನಸ್ಸು ಕೆಡಿಸಲು ಬಿಡಬೇಡಿ. ನೀವು ಕಮಿಷನ್‌ಗಳಿಂದ ಡಿವಿಡೆಂಡ್‌ಗಳಿಂದ– ಅಥವಾ ರಾಯಧನಗಳಿಂದ ಪ್ರಯೋಜನ ಪಡೆಯುತ್ತೀರಿ.

**ಕನ್ಯಾ** ನೀವು ಒಂದು ದೀರ್ಘ ಪ್ರಯಾಣಕ್ಕೆ ಹೋಗಲು ಯೋಜನೆ ಹಾಕುತ್ತಿದ್ದ ಹಾಗೆ ನಿಮ್ಮ ಆರೋಗ್ಯ ಮತ್ತು ಇಂಧನ ಸಂರಕ್ಷಣೆಯ ಹವ್ಯಾಸ ನಿಮಗೆ ಅಪಾರವಾದ ಉಪಯೋಗವುಂಟುಮಾಡುತ್ತದೆ.

**ತುಲಾ** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಗಡಿಬಿಡಯ ನಿರ್ಧಾರಗಳನ್ನು ಕೈಗೊಳ್ಳಬೇಡಿ.

**ವೃಶ್ಚಿಕ** ನೀವು ಸಾಮಾನ್ಯವಾಗಿ ಇರುವುದಕ್ಕಿಂತ ಕಡಿಮೆ ಚೈತನ್ಯವನ್ನು ಇಂದು ಕಾಣುತ್ತೀರಿ ?ನಿಮ್ಮ ಮೇಲೆ ನೀವೇ ಹೆಚ್ಚುವರಿ ಕೆಲಸಕ್ಕೆ ಒತ್ತಡ ಹೇರಬೇಡಿ – ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ.

**ಧನಸ್ಸು** ತುಂಬಾ ಉತ್ಸಾಹ ಮತ್ತು ಸ್ಫೋಟಕ ಭಾವೋದ್ರೇಕಗಳು ನರಮಂಡಲಕ್ಕೆ ಹಾನಿ ಮಾಡಬಹುದು. ಇದನ್ನು ತಪ್ಪಿಸಲು ನಿಮ್ಮ ಭಾವನೆಗಳನ್ನು ನಿಯಂತ್ರಿಸಿ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ.

**ಮಕರ** ಇಂದು ನಿಮಗೆಲ್ಲರಿಗೂ ತುಂಬ ಸಕ್ರಿಯವಾದ ಮತ್ತು ಹೆಚ್ಚು ಸಾಮಾಜಿಕವಾದ ಜನರು ನಿಮ್ಮಿಂದ ಸಲಹೆ ಪಡೆಯಬಯಸುತ್ತಾರೆ ಮತ್ತು ನೀವು ಏನೇ ಹೇಳಿದರೂ ಅದನ್ನು ಒಪ್ಪುತ್ತಾರೆ.

**ಕುಂಭ** ನಿಮ್ಮ ಸಕಾರಾತ್ಮಕ ದೃಷ್ಟಿಕೋನ ಮತ್ತು ಆತ್ಮವಿಶ್ವಾಸದಿಂದ ನಿಮ್ಮ ಸುತ್ತಲಿರುವ ಜನರನ್ನು ಪ್ರಭಾವಿಸಬಹುದಾದ ಸಾಧ್ಯತೆಗಳಿವೆ. ಇಂದು ಹಣದ ನಷ್ಟವು ಸಂಭವಿಸಬಹುದು.

**ಮೀನ** ನೀವು ಹಾಗೆ ಮಾಡಬಾರದು. ಅದನ್ನು ತೊಂದರೆ ಇನ್ನಷ್ಟು ಹೆಚ್ಚಾಗುತ್ತದೆ ಕಡಿಮೆಯಾಗುವುದಿಲ್ಲ. ತನ್ನ ಪ್ರೀತಿಪಾತ್ರರಿಂದ ದೂರವಿರುವ ಜನರು, ಇಂದು ಅವರ ಪ್ರೀತಿಪಾತ್ರರನ್ನು ನೆನಪಿಸಿಕೊಳ್ಳಬಹುದು.

### ಕರ್ನಾಟಕದಲ್ಲೇ ಮೊದಲ ಪ್ರಯೋಗ, ರೈತರಿಗಿನ್ನು ಮಾರುಕಟ್ಟೆ ದರದ ಏರಿಳಿತದ ಭಯ ಬೇಕಿಲ್ಲ

# ತೋಟಗಾರಿಕೆ ಬೆಳೆಗಳಿಗೆ ಬೈಬ್ಯಾಕ್


ಉದಯವಾಹಿನಿ ಚಿತ್ರ

• ಉದಯವಾಹಿನಿ ಕೊಪ್ಪಳ

ಜಿಲ್ಲೆಯ ರೈತರು ದಾಳಿಂಬೆ, ಬಾಳೆ ಮತ್ತು ದ್ರಾಕ್ಷಿ ಬೆಳೆಯನ್ನು ಒಪ್ಪಂದ ಕೃಷಿ ಮೂಲಕ ಬೆಳೆಯಬಹುದು. ಟೊಮೊಟೊ, ಹಲಸು ಬೆಳೆಗಾರರಿಗೆ ಬೈ ಬ್ಯಾಕ್ ಪರಿಚಯಿಸಿ, ಯಶಸ್ವಿಯಾಗಿರುವ ತೋಟಗಾರಿಕೆ ಇಲಾಖೆ, ಇದೀಗ ದಾಳಿಂಬೆ, ಬಾಳೆ ಮತ್ತು ದ್ರಾಕ್ಷಿ ಬೆಳೆಗೂ ಬೈ ಬ್ಯಾಕ್ ಅನುಷ್ಠಾನದಿಂದ ಅನ್ನದಾತರಿಗೆ ವರದಾನವಾಗಲಿದೆ. ರೈತರು ಮಾರುಕಟ್ಟೆಯಲ್ಲಿ ದರದ ಏರಿಳಿತದ ಭಯದಿಂದ ಮುಕ್ತರಾಗುತ್ತಾರೆ. ಅಲ್ಲದೆ, ಸಸಿ

- **ದಾಳಿಂಬೆ, ಬಾಳೆ, ದ್ರಾಕ್ಷಿಗೂ ಒಪ್ಪಂದ ಕೃಷಿ– ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನ**
- **ರೈತರಿಗೆ ಭರಪೂರ ಆದಾಯ ಬರುವ ನಿರೀಕ್ಷೆ**
- **ಬೆಳೆಯ ದರ ಕೂಡ ಮುಂಚಿತವಾಗಿ ರೈತರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ನಿಗದಿಪಡಿಸಲಾಗುತ್ತದೆ.**

ಹಾಗೂ ಬೆಳೆಯುವ ವಿಧಾನ ಸೇರಿ ಎಲ್ಲ ರೀತಿಯ ಮಾಹಿತಿ ನೀಡಿ, ಜತೆಗೆ ಬೆಳೆಯ ದರ ಕೂಡ ಮುಂಚಿತವಾಗಿ ರೈತರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ನಿಗದಿಪಡಿಸಲಾಗುತ್ತದೆ.

ಜಿಲ್ಲೆಯಲ್ಲಿ ನಾನಾ ತೋಟಗಾರಿಕೆ ಬೆಳೆಗಳನ್ನು 55 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. 2016ರಲ್ಲಿ ಕೇವಲ 15 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ತೋಟಗಾರಿಕೆ ಬೆಳೆ ಬೆಳೆಯಲಾಗುತ್ತಿತ್ತು. ಆದರೆ, ಕಳೆದೊಂದು ದಶಕದಲ್ಲಿ ಮಹತ್ತರ ಬದಲಾವಣೆಗಳಾಗಿದ್ದು, ರೈತರು ಕೂಡ ಹೆಚ್ಚು ಆದಾಯ ತಂದು ಕೊಡುವ ತೋಟಗಾರಿಕೆ

> **ಜಿಲ್ಲೆಯಲ್ಲಿ ಹೊಸದಾಗಿ ದಾಳಿಂಬೆ, ಬಾಳೆ ಹಾಗೂ ದ್ರಾಕ್ಷಿ ಬೆಳೆಗೆ ಬೈ ಬ್ಯಾಕ್ ಸಿಸ್ಟಮ್ ಪರಿಚಯಿಸಲಾಗಿದೆ. ಈ ಹಿಂದೆ ಹಲಸು, ಟೊಮೊಟೊ ಬೆಳೆಗೆ ಬೈಬ್ಯಾಕ್ ಪದ್ಧತಿ ಪರಿಚಯಿಸಲಾಗಿತ್ತು. ಬೆಳೆಯಲು ಇಚ್ಛಿಸುವ ರೈತರಿಗೆ ಅಗತ್ಯ ಮಾರ್ಗದರ್ಶನದ ಜತೆಗೆ ಸರಕಾರದಿಂದ ದೊರೆಯುವ ಸೌಲಭ್ಯ ಒದಗಿಸಿಕೊಡಲಾಗುತ್ತಿದೆ**
> **–ಕೃಷ್ಣ ಉಕ್ಕುಂದ, ಜಂಟಿ ನಿರ್ದೇಶಕ, ತೋಟಕಾರಿಕೆ ಇಲಾಖೆ, ಕೊಪ್ಪಳ**

ಬೆಳೆಗಳತ್ತ ಮುಖ ಮಾಡುತ್ತಿದ್ದಾರೆ. ಅಲ್ಲದೆ, ತೋಟಗಾರಿಕೆ ಇಲಾಖೆಯಲ್ಲಿ ಈವರೆಗೂ ಉಪ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿ, ಇತ್ತೀಚೆಗೆ ಜಂಟಿ ನಿರ್ದೇಶಕರಾಗಿ ಮುಂಬಡ್ತಿ ಪಡೆದಿರುವ ಕೃಷ್ಣ ಉಕ್ಕುಂದ ಅವರು, ಜಿಲ್ಲೆಯ ರೈತರಿಗೆ ಸಕಾರಾತ್ಮಕ ಮಾರ್ಗದರ್ಶನ, ಸರಕಾರದಿಂದ ಅಗತ್ಯ ನೆರವು ದೊರಕಿಸುತ್ತಿರುವುದರಿಂದ ತೋಟಗಾರಿಕೆ ಬೆಳೆಗಾರರಿಗೆ ಹೆಚ್ಚಿನ ಉತ್ತೇಜನ ಸಿಗುತ್ತಿದೆ.

ಪ್ರಸ್ತುತ ಜಿಲ್ಲೆಯಲ್ಲಿ ದಾಳಿಂಬೆ 8 ಸಾವಿರ ಹೆಕ್ಟೇರ್, ಬಾಳೆ 1 ಸಾವಿರ ಹೆಕ್ಟೇರ್, ದ್ರಾಕ್ಷಿ 500 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಕಳೆದ ದಶಕದ ಹಿಂದೆ ದಾಳಿಂಬೆ ಬೆಳೆಗೆ ಏಕಾಏಕಿ ದುಂಡಾಣು ರೋಗ ಬಿದ್ದಿದ್ದರಿಂದ ಜಿಲ್ಲೆಯ ಸಾವಿರಾರು ರೈತರು ಲಕ್ಷಾಂತರ ರೂ. ನಷ್ಟ ಅನುಭವಿಸಿದ್ದರು. ಕಳೆದ ಎರಡು

### ಏನಿದು ಒಪ್ಪಂದ ಕೃಷಿ?

**ದಾಳಿಂಬೆ, ಬಾಳೆ ಹಾಗೂ ದ್ರಾಕ್ಷಿ ಬೆಳೆಯಲು ಇಚ್ಛಿಸುವ ರೈತರಿಗೆ ಸಸಿಗಳನ್ನು ಕೊಡಲಾಗುತ್ತದೆ. ಬೆಳೆಯುವ ಮುನ್ನವೇ ರೈತರಿಗೆ ಹಣ್ಣಿನ ದರ ನಿಗದಿ ಮಾಡಲಾಗುತ್ತದೆ. ಬೆಳೆದು ಒಪ್ಪಂದ ಮಾಡಿಕೊಳ್ಳಲಾಗಿರುವ ಕಾಯಕ ಆಗ್ರೋ ಫಾರ್ಮ್ ಎಫ್‌ಪಿಒ ಮುಖಾಂತರ ಸ್ಪಂದನಾ ಫಾರ್ಮರ್ಸ್ ಕಂಪನಿಗೆ ಮಾರಾಟ ಮಾಡಬೇಕು.**

ವರ್ಷದಿಂದ ಹೊಸ ನಾವಿನ್ಯತೆಯೊಂದಿಗೆ ದಾಳಿಂಬೆ ಬೆಳೆಯಲು ತೋಟಗಾರಿಕೆ ಇಲಾಖೆ, ಪ್ರೋತ್ಸಾಹ ನೀಡುತ್ತಿರುವುದರಿಂದ ದಾಳಿಂಬೆ ಬೆಳೆ ಬೆಳೆಯುವ ರೈತರ ಸಂಖ್ಯೆಯು ದ್ವಿಗುಣಮುಖವಾಗಿದೆ. ಅಂತೆಯೇ ರೈತರಿಗೆ ಸೂಕ್ತ ಮಾರುಕಟ್ಟೆ ದೊರೆಯಲಿ ಎಂಬ ಉದ್ದೇಶದಿಂದ ಬೈ ಬ್ಯಾಕ್ ಪದ್ಧತಿ ಪರಿಚಯಿಸಲಾಗುತ್ತಿದೆ. ಉತ್ತಮ ಫಸಲುನೊಂದಿಗೆ ಬಾಳೆ ಬೆಳೆದರೂ ಮಾರುಕಟ್ಟೆಯಲ್ಲಿ ಏಕಾಏಕಿ ದರ ಕುಸಿದಿದ್ದರಿಂದ ರೈತರ ಪರಿಸ್ಥಿತಿ ದೇವರಿಗೆ ಪ್ರೀತಿ ಎಂಬಂತಿತ್ತು. ಹೀಗಾಗಿ ಬಾಳೆ ಬೆಳೆಗಾರರಿಗೂ ಅನುಕೂಲವಾಗಲಿ ಎಂಬ ಉದ್ದೇಶದಿಂದ ಒಪ್ಪಂದ ಕೃಷಿ ಪರಿಚಯಿಸಲಾಗುತ್ತಿದೆ. ಇದರಿಂದ ಎಕರೆಗೆ 10 ಲಕ್ಷ ರೂ. ವರೆಗೆ ನಿವ್ವಳ ಆದಾಯವನ್ನು ರೈತರು ತಮ್ಮದಾಗಿಸಿಕೊಳ್ಳಬಹುದು. ಹೀಗಾಗಿ ಈಗಾಗಲೇ ಹಲವು ರೈತರ ನೋಂದಣಿ ಪ್ರಕ್ರಿಯೆ ಭರದಿಂದ ಸಾಗಿದೆ.

### ರೈತರಿಗೆ ಒಪ್ಪಂದ ಕೃಷಿ ವರದಾನ

**ಈ ಸಮಯದಲ್ಲಿ ಹಣ್ಣಿನ ದರ ಕುಸಿದರೂ ಈ ಮುಂಚೆ ನಿಗದಿಪಡಿಸಿದ ದರದಲ್ಲೇ ಖರೀದಿ ಮಾಡಲಿದೆ. ಈ ರೀತಿ ಒಪ್ಪಂದದ ಮೂಲಕ ರೈತರಿಗೆ ಬೆಳೆಯಲು ಉತ್ತೇಜನ ನೀಡಲಾಗುತ್ತಿದೆ. ಇಲ್ಲಿ ತೋಟಗಾರಿಕೆ ಇಲಾಖೆಯೂ ರೈತರ ಹಾಗೂ ಕಂಪನಿ ಮಧ್ಯೆ ಸೇತುವೆಯಾಗಿ ಕೆಲಸ ಮಾಡಲಿದೆ. ಕಂಪನಿಯನ್ನು ರೈತರಿಗೆ ತೋಟಗಾರಿಕೆ ಇಲಾಖೆಯೇ ಪರಿಚಯಿಸಿದ್ದು, ಪೂರ್ಣ ಪ್ರಮಾಣದಲ್ಲಿ ವಿಶ್ವಾಸಕ್ಕೆ ಬಂದ ಬಳಿಕವೇ ಅನ್ನದಾತರು ಒಪ್ಪಂದ ಕೃಷಿಗೆ ಮುದ್ರೆ ಹಾಕಬಹುದು. ಈಗಾಗಲೇ ಟೊಮೊಟೊ, ಹಲಸು ಬೆಳೆ ಬೆಳೆಯುವ ರೈತರಿಗೆ ಒಪ್ಪಂದ ಕೃಷಿ ವರದಾನವಾಗಿರುವುದರಿಂದ ದಾಳಿಂಬೆ, ದ್ರಾಕ್ಷಿ ಹಾಗೂ ಬಾಳೆ ಬೆಳೆಗಾರರು ಒಪ್ಪಂದಕ್ಕೆ ಹೆಸರು ನೋಂದಾಯಿಸುತ್ತಿರುವುದು ವಿಶೇಷ.**

## ಭೀಮ ಪಥಸಂಚಲನಕ್ಕೆ ಮನವಿ ತಿರಸ್ಕಾರ

• ಉದಯವಾಹಿನಿ ಕೆಂಭಾವಿ



ಪಟ್ಟಣದಲ್ಲಿ ದಿ.4 ರಂದು ಭೀಮ ಪಥಸಂಚಲನ ಮಾಡಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿದ್ದರೂ ಕೂಡಾ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಬಸಪ್ಪಗೌಡ ದರ್ಶನಾಪೂರ ಇವರು ಜಿಲ್ಲಾಡಳಿತದ ಮೇಲೆ ಒತ್ತಡ ಹೇರಿ ನಾವು ಕೊಟ್ಟ ಮನವಿಯನ್ನು ತೀರಸ್ಕರಿ, ಆರ್.ಎಸ್.ಎಸ್ ಪಥಸಂಚಲನಕ್ಕೆ ಅನುಮತಿ ನೀಡುವಲ್ಲಿ ಪ್ರಮುಖ ಪತ್ರಾವಹಿಸಿದ್ದು ಸಚಿವರ ದಲಿತ ಮತ್ತು ಅಲ್ಪಸಂಖ್ಯಾತ ವಿರೋಧಿಯಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಇದನ್ನು ಕೆಂಭಾವಿ ಹೋಬಳಿ ಘಟಕದ ಭೀಮ ಆರ್ಮಿ ಉಗ್ರವಾಗಿ ಖಂಡಿಸುತ್ತಿದೆ. ಈ ಘಟನೆಯ ಹಿನ್ನಲೆಯಲ್ಲು ಮುಂಬರವ ಚುನಾವಣೆಯಲ್ಲಿ ದಲಿತ ಸಂಘಟನೆಗಳು ಹಾಗೂ ಅಲ್ಪಸಂಖ್ಯಾಯತರು ತಕ್ಕ ಉತ್ತರ ನೀಡುತ್ತೇವೆ. ಹಾಗೂ ಹಿಂದಿನ ಚುಣಾವಣೆಯಲ್ಲಿ ಮಾನ್ಯ ಸಚಿವರು ಆಯ್ಕೆಯಾಗಬೇಕಾದರೇ ದಲಿತರು ಹಾಗೂ ಅಲ್ಪಸಂಖ್ಯಾಯತರ ಮತಗಳಿಂದ ಆಯ್ಕೆಯಾಗಿರುವುದು ಮರೆತಿದ್ದಾರೆ. ಇಲ್ಲಿ ಆರ್.ಎಸ್.ಎಸ್‌ನವರು ತಮಗೆ ಮತ ಹಾಕಿರುವುದಿಲ್ಲ ಎಂಬುವುದು ಮರೆಯಬಾರದು ಎಂದು ಭೀಮ ಆರ್ಮಿಯ ಕೆಂಭಾವಿ ಹೋಬಳಿ ಘಟಕದ ಅಧ್ಯಕ್ಷ ಈರಪ್ಪ ಜೆ ಬಡಿಗೇರ ಹೇಳಿದರು.

## ಸಾಹಸಿ ಚಟುವಟಿಕೆ ಕ್ರೀಡೆಗಳಿಗೆ ಚಾಲನೆ

• ಉದಯವಾಹಿನಿ ಗದಗ

ನಗರದ ಬಿಂಕದಕಟ್ಟಿ ಮೃಗಾಲಯದ ಹತ್ತಿರದಲ್ಲಿರುವ ಸಾಲು ಮರದ ತಿಮ್ಮಕ್ಕ ಸಸ್ಯೋದ್ಯಾನಕ್ಕೆ ಬರುವವರು ಇನ್ನು ಮುಂದೆ ಸಾಹಸಿ ಕ್ರೀಡೆಗಳನ್ನು ಆಡಿ ಮನರಂಜನೆ ಪಡೆಯಬಹುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಹೇಳಿದರು. ಗದಗ ಅರಣ್ಯ ಪ್ರಾದೇಶಿಕ ವಿಭಾಗ ಹಾಗೂ ಗದಗ ಅರಣ್ಯ ಪ್ರಾದೇಶಿಕ ವಲಯ ಸಹಯೋಗದಲ್ಲಿ ಸಾಲು ಮರದ ತಿಮ್ಮಕ್ಕ ಸಸ್ಯೋದ್ಯಾನದಲ್ಲಿ ಪಿಕಲ್ ಬಾಲ್ ಮೈದಾನ, ಆರ್ಚರಿ ಕ್ರೀಡಾಂಗಣ, ಚಿಟ್ಟೆ ಪಾರ್ಕ ಹಾಗೂ ಸಾಹಸಿ ಚಟುವಟಿಕೆ ಕ್ರೀಡಾಂಗಣಕ್ಕೆ ಸಚಿವ ಎಚ್.ಕೆ.ಪಾಟೀಲ ಅವರು ಚಾಲನೆ ನೀಡಿ ಮಾತನಾಡಿದರು.

ಸಾಲು ಮರದ ತಿಮ್ಮಕ್ಕ ಸಸ್ಯೋದ್ಯಾನ ಒಂದು ಪ್ರವಾಸಿ ತಾಣವಾಗಿದೆ. ಒಂದು ದಿನದ ಪಿಕ್‌ನಿಕ್‌ಗಾಗಿ ಸಾಕಷ್ಟು ಶಾಲಾ ಮಕ್ಕಳು ಭೇಟಿ ನೀಡುತ್ತಿದ್ದಾರೆ. ಇನ್ನು ಮುಂದೆ ಸಸ್ಯೋದ್ಯಾನ ವೀಕ್ಷಣೆ ಜೊತೆಗೆ ಪಿಕಲ್ ಬಾಲ್, ಆರ್ಚರಿ ಕ್ರೀಡಾಂಗಣದಲ್ಲಿ ಬಿಲ್ಲು ಕ್ರೀಡೆ, ಚಿಟ್ಟೆ ಪಾರ್ಕನಲ್ಲಿ ಪತಂಗಗಳ ಕಲರವ, ಸಾಹಸ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಸಂಪೂರ್ಣ ಮನರಂಜನೆ ದೊರೆಯುವಂತೆ ಸರ್ಕಾರದಿಂದ ಸೌಲಭ್ಯಗಳನ್ನು ಒದಗಿಸಲಾಗಿದೆ. ಅವುಗಳ ಸದ್ಬಳಕೆಯನ್ನು ಇಲ್ಲಿ ಬರುವ ಮಕ್ಕಳು ಹಾಗೂ ಸಾರ್ವಜನಿಕರು ಪಡೆಯಬಹುದಾಗಿದೆ ಎಂದರು.

## ಆನ್‌ಲೈನ್‌ನಲ್ಲಿ ರೂ.24.73 ಲಕ್ಷ ವಂಚನೆ

• ಉದಯವಾಹಿನಿ ಹುಬ್ಬಳ್ಳಿ

ಆನ್‌ಲೈನ್ ಮಾರುಕಟ್ಟೆಯಲ್ಲಿ ಹಣಹೂಡಿಕೆ ಮಾಡಿದರೆ ಹೆಚ್ಚು ಲಾಭಗಳಿಸಬಹುದು ಎಂದು ನಗರದ ಬಸವಪ್ರಭು ಪಟ್ಟಣಶೆಟ್ಟಿ ಅವರಿಗೆ ನಂಬಿಸಿದ ವ್ಯಕ್ತಿಯೊಬ್ಬ, ಅವರಿಂದ ರೂ.24.73 ಲಕ್ಷ ವರ್ಗಾಯಿಸಿಕೊಂಡು ವಂಚಿಸಿದ್ದಾನೆ. ಬಸವಪ್ರಭು ಅವರಿಗೆ ಎಕ್ಸ್ ಖಾತೆಯಲ್ಲಿ ಪರಿಚಯವಾದ ವಂಚಕ, ಹಣ ಹೂಡಿಕೆ ಮಾಡುವುದರ ಬಗ್ಗೆ ಮಾಹಿತಿ ನೀಡಿದ್ದಾನೆ. ನಂತರ ಅವರ ಮೊಬೈಲ್ ಅನ್ನು ವಾಟ್ಸ್ ಆ್ಯಪ್ ಗ್ರೂಪ್‌ಗೆ ಸೇರಿಸಿ ಲಿಂಕ್ ಕಳುಹಿಸಿದ್ದ. ಅದನ್ನು ಡೌನ್‌ಲೋಡ್ ಮಾಡಿಸಿ, ಹಣ ಹೂಡಿಕೆ ಮಾಡಲು ಹೇಳಿ ವಂಚಿಸಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಹುಬ್ಬಳ್ಳಿ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಳವು: ಇಲ್ಲಿಯ ಹೊಸಗಟ್ಟೂರಿನ ಪಿ.ಬಿ. ರಸ್ತೆಯ ಅನಿಲ ಬದ್ದಿ ಅವರ ಮಾಲೀಕತ್ವದ ಮದ್ಯದಂಗಡಿಯ ತಗಡಿನ ಚಾವಣಿ ಮುರಿದು. ರೂ.1.30 ಲಕ್ಷ ನಗದು ಕಳವು ಮಾಡಲಾಗಿದೆ. ಬೆಂಡಿಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


## ಜನರ ವಿದ್ಯುತ್ ಸಮಸ್ಯೆಗಳಿಗೆ ಪರಿಹಾರ: ಪ್ರವೀಣ ಪಾಟೀಲ್ ಹರವಾಳ

• ಉದಯವಾಹಿನಿ ಕಲಬುರಗಿ

ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ್ ಹರವಾಳ ಅವರು ಜೆಸ್ಕಾಂ ನಿಗಮ ಕಚೇರಿಯಲ್ಲಿರುವ ಸಹಾಯವಾಣಿ ಕೊಠಡಿಯಲ್ಲಿ ವಿದ್ಯುತ್ ಗ್ರಾಹಕರ ಅಹವಾಲು ಆಲಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳ ವಿಲೇವಾರಿ ಖುದ್ದು ಗಮನಿಸಿ ಅದನ್ನು ಯಾವ ರೀತಿ ನಿರ್ವಹಿಸಲಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವ ಉದ್ದೇಶದಿಂದ ಮತ್ತು ಅಧಿಕಾರಿಗಳಿಗೆ ಸಲಹೆ ಸೂಚನೆಗಳನ್ನು ನೀಡುವ ಉದ್ದೇಶದಿಂದ ಅಧ್ಯಕ್ಷರು ಈ ಕಾರ್ಯಕ್ಕೆ ಮುಂದಾಗಿದ್ದಾರೆ.

ಜೆಸ್ಕಾಂ ನಿಗಮ ಕಚೇರಿಯಲ್ಲಿರುವ ಸಹಾಯವಾಣಿ ಕೊಠಡಿಯಲ್ಲಿ ಕೆಲ ಹೊತ್ತು ಕುಳಿತು ಕರೆಗಳನ್ನು ತಾವೇ


ಉದಯವಾಹಿನಿ ಚಿತ್ರ

ಸ್ವೀಕರಿಸಿ ಸಾರ್ವಜನಿಕರ ಅಹವಾಲು ಆಲಿಸಿದ ಪ್ರವೀಣ್ ಪಾಟೀಲ್ ಹರವಾಳ ಅವರು, ಜನರ ಕುಂದು ಕೊರತೆಗಳಿಗೆ ಸಿಬ್ಬಂದಿಯ ಸ್ಪಂದನೆಯನ್ನು ಗಮನಿಸಿ, ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಜನರಿಗೆ ಯಾವುದೇ ರೀತಿ ಕುಂದು ಕೊರತೆ ಉಂಟಾಗದಂತೆ ನೋಡಿಕೊಳ್ಳುವುದೇ ನಮ್ಮ ಗುರಿ. ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾದಾಗ ಜನರು ಜೆಸ್ಕಾಂ ಗ್ರಾಹಕ ಸೇವಾ ಕೇಂದ್ರವನ್ನು ಸಂಪರ್ಕಿಸಿ, ಸಹಾಯವಾಣಿ 1912 ಕ್ಕೆ ಕರೆಮಾಡಿ ಅಥವಾ ವಾಟ್ಸಪ್ ಸಂಖ್ಯೆ 9480847593 ಮೂಲಕ ನಿಮ್ಮ ದೂರನ್ನು ಹಂಚಿಕೊಳ್ಳಬಹುದು ಪರಿಹಾರ ಕಂಡುಕೊಳ್ಳಬಹುದು ಎಂದು ಈ ವೇಳೆ ಅಧ್ಯಕ್ಷರು ವಿನಂತಿಸಿದರು.

## ಸಿಎಂ ಸಿದ್ದರಾಮಯ್ಯರಿಂದ ಪ್ರಶಸ್ತಿ ಪಡೆದ ರಾಮದಾನ್ಯ ಚಿತ್ರದ ನಿರ್ಮಾಪಕ ಜಂಬಣ್ಣ ಮುಧೋಳ

• ಉದಯವಾಹಿನಿ ಯಲಬುರ್ಗಾ

2018 ರಲ್ಲಿ ಬಿಡುಗಡೆಯಾಗಿದ್ದ ಕರ್ನಾಟಕ ರಾಜ್ಯ ಸರ್ಕಾರದ ಉತ್ತಮ ಸಾಮಾಜಿಕ ಪರಿಣಾಮ ಬೀರುವ ಚಿತ್ರವಾಗಿ ಬೆಳ್ಳಿ ಪದಕ ಪಡೆದಿರುವ ಚಲನಚಿತ್ರ ರಾಮಧಾನ್ಯ ಚರಿತೆ' ಸಿನಿಮಾ ಇದು ನಾಟಕ ರೂಪದಲ್ಲಿ ನೂರಾರು ಪ್ರದರ್ಶನಗಳನ್ನ ಕಂಡಿದೆ. ರಾಜ್ಯ ಸರ್ಕಾರದಿಂದ 2018 ಹಾಗೂ 2019 ರ ಚಲನಚಿತ್ರ ವಾರ್ಷಿಕ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯಿತು.

ನ. 3 ರಂದು ನೆಡದ ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ. ಕಾರ್ಯಕ್ರಮ ದಲ್ಲಿ ಶ್ರೀ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಂದ ಪ್ರಶಸ್ತಿ ಪಡೆದ ಜಂಬಣ್ಣ ಹವಳದ ನಿರ್ಮಾಪಕರು ರಾಮಧಾನ್ಯ ಕನಕದಾಸರ ಕೃತಿ ಇವರಿಗೆ ಹಾಗೂ ನಿರ್ದೇಶಕ ಟಿ ಎನ್ ನಾಗೇಶ ಅವರಿಗೆ ಸನ್ಮಾನಿಸಿದರು.

ಇವರು ಮೂಲತಹ ಕೊಪ್ಪಳ ಜಿಲ್ಲೆಯ


ಉದಯವಾಹಿನಿ ಚಿತ್ರ

ಯಲಬುರ್ಗಾ ತಾಲೂಕಿನ ಮುಧೋಳ ಗ್ರಾಮದ ಜಂಬಣ್ಣ ಬಸಪ್ಪ ಹವಳದ ಅವರು ಈ ಗ್ರಾಮದಲ್ಲಿ ಹುಟ್ಟಿ ಬೆಳೆದಿದ್ದರೂ ಕುಟುಂಬದ ಆರ್ಥಿಕ ಪರಿಸ್ಥಿತಿಯ ಕಾರಣ ಕಾಲೇಜು ಶಿಕ್ಷಣ ಅರ್ಧಕ್ಕೆ ಮೊಟಕುಗೊಳಸಿ ಜೀವನೋಪಾಯಕ್ಕಾಗಿ ಬೆಂಗಳೂರು ಸೇರಬೇಕಾಯಿತು. ಬೆಂಗಳೂರಲ್ಲಿ ವಾರದ ಪಗಾರದ ಕೆಲಸಕ್ಕೆ ಸೇರಿ, ಕಮಿಷನ್ ಏಜೆನ್ಸಿ, ಜೊತೆಗೆ ರೀಯಲ್ ಎಸ್ಟೇಟ್ ಉದ್ಯೋಗದೊಂದಿಗೆ, ಆಕಸ್ಮಿಕವಾಗಿ ಚಿತ್ರರಂಗದತ್ತ ಆಸಕ್ತಿ ತೋರಿ ಸದಬಿರುಚಿಯ ಕನ್ನಡ ಚಿತ್ರಗಳನ್ನ ನಿರ್ಮಿಸಿದರು. 20 ವರ್ಷಗಳಲ್ಲಿ ಆರ್ಥಿಕ ಸಬಲತೆ ಪಡೆದರು. 2018–19 ನೇ ಸಾಲಿನ ಉತ್ತಮ ಸಾಮಾಜಿಕ ಪರಿಣಾಮ ಬೀರುವ ಚಲನಚಿತ್ರವಾಗಿ ರಾಮಧಾನ್ಯ ಕನಕದಾಸರ ಕೃತಿ ಆಧರಿಸಿದ ಚಿತ್ರ ಪ್ರಶಸ್ತಿ ಪಡೆದಿದು ಕೊಂಡಿದೆ. ಕೊಪ್ಪಳ ಜಿಲ್ಲೆಗೆ ಕೀರ್ತಿ ತಂದ ಅವರಿಗೆ ಮುಧೋಳದ ಗ್ರಾಮಸ್ಥರ ಎಲ್ಲರೂ ಅಭಿನಂದನೆಗಳನ್ನ ತಿಳಿಸಿದರು.

## ಬಿಸಿಯೂಟ ಗುಣಮಟ್ಟ ಕಾಯ್ದುಕೊಳ್ಳಿ

• ಉದಯವಾಹಿನಿ ಬೀದರ್

ದಕ್ಷಿಣ ಕ್ಷೇತ್ರದ ಅಮಲಾಪುರ ಗ್ರಾಮಪಂಚಾಯಿತಿ ಇದೀಗ ಗ್ರಾಮಪಂಚಾಯಿತಿಯಿಂದ ಮಹಾನಗರ ಪಾಲಿಕೆಗೆ ಸೇರ್ಪಡೆಗೊಂಡು ಹಲವು ತಿಂಗಳು ಕಳೆದರೂ ಯಾವುದೇ ಮೂಲ ಸೌಕರ್ಯ ಇನ್ನೂ ದೊರೆತಿಲ್ಲ ಎಂಬ ಗ್ರಾಮಸ್ಥರ ದೂರು ಹಿನ್ನಲೆಯಲ್ಲಿ ಅಧಿಕಾರಿಗಳೊಂದಿಗೆ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಗ್ರಾಮಸ್ಥರ ಅಹವಾಲು ಸ್ವೀಕರಿಸಿ ಮಾತನಾಡಿದರು.

ಜನರ ವಿಶ್ವಾಸಕ್ಕೆ ತಕ್ಕಂತೆ ಕಾರ್ಯನಿರ್ವಹಣೆ ಮಾಡಲಾಗುತ್ತಿದೆ. ಜನರ ಹಿತಕ್ಕಾಗಿ, ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ನಾನು ಸದಾ ದುಡಿಯುತ್ತೇನೆ. ಅಭಿವೃದ್ಧಿಯ ಕೆಲಸಗಳ ಮೂಲಕ ಜನರ ವಿಶ್ವಾಸವನ್ನು ಉಳಿಸಿಕೊಳ್ಳುವುದು ನನ್ನ ಕರ್ತವ್ಯ ಮಹಾನಗರ ಪಾಲಿಕೆಗೆ ಸೇರಿದ ಗ್ರಾಮಗಳಿಗೆ ಅನುದಾನ ಇನ್ನೂ ಬಿಡುಗಡೆ ಆಗದ ಹಿನ್ನೆಲೆಯಲ್ಲಿ ಗ್ರಾಮದ ಜನರು ಸಮಸ್ಯೆ ಎದುರಿಸುವಂತಾಗಿದೆ ಇಗಾಗಲೇ ಹೆಚ್ಚಿನ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಶೀಘ್ರ ಹಣ ಬಿಡುಗಡೆ ಆದರೆ ಹೆಚ್ಚಿನ ಮೂಲ ಸೌಲಭ್ಯ ಒದಗಿಸಲಾಗುವುದು ಸಧ್ಯಕ್ಕೆ ತುರ್ತಾಗಿ ಪ್ರಮುಖ

### ಸರ್ಕಾರಿ ಪ್ರೌಢಶಾಲೆಗೆ ಭೇಟಿ

**ಶಾಲೆಗೆ ಭೇಟಿ ನೀಡಿದ ಶಾಸಕರು ಅಡುಗೆ ಕೋಣೆಗೆ ತೆರಳಿ ಬಿಸಿಯೂಟ ತಯಾರಿಕೆಯನ್ನು ವೀಕ್ಷಿಸಿದರು. ರುಚಿ ಹಾಗೂ ಶುಚಿಯನ್ನು ಕಾಯ್ದುಗೊಳ್ಳುವುದರ ಜತೆಗೆ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು ಎಂದು ಸಿಬ್ಬಂದಿಗೆ ಸೂಚಿಸಿದರು ಬಳಿಕ ವಿದ್ಯಾರ್ಥಿಗಳೊಂದಿಗೆ ಬಿಸಿಯೂಟ ಸೇವಿಸಿದರು.**

ಮೂಲಭೂತ ಸೌಕರ್ಯ ಕಲ್ಪಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಗ್ರಾಮೀಣ ಮಟ್ಟದಲ್ಲಿ ರಸ್ತೆ, ನೀರು, ವಿದ್ಯುತ್ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಸರ್ಕಾರದ ಅನುದಾನವನ್ನು ಪ್ರಾಮಾಣಿಕವಾಗಿ ಬಳಸಲಾಗುತ್ತಿದೆ ಎಂದು ಅವರು



ಉದಯವಾಹಿನಿ ಚಿತ್ರ

ಹೇಳಿದರು. ಅಭಿವೃದ್ಧಿ ಎಂದರೆ ಕೇವಲ ಕಾಮಗಾರಿಗಳು ಅಲ್ಲ, ಜನರ ಜೀವನ ಮಟ್ಟವನ್ನು ಮೇಲಕ್ಕೆತ್ತುವುದು. ಅದಕ್ಕಾಗಿ ನಾನು ನಿರಂತರವಾಗಿ ಶ್ರಮಿಸುತ್ತೇನೆ ಎಂದು ಅವರು ಸ್ಪಷ್ಟಪಡಿಸಿದರು. ಪಾಟೀಲ, ಚಂದ್ರಯ್ಯ ಸ್ವಾಮಿ, ರಾಮಲು, ವೀರಶೆಟ್ಟಿ, ಸಚೀನ್ ಕೋಣಿ ಗ್ರಾಮದ ಮುಖಂಡರ ಬಸವರಾಜ ಶೇರಿಕರ, ಶಿವಶಂಕರ ಬಕ್ಕಾರೆಡ್ಡಿ ಉಪಸ್ಥಿತರಿದ್ದರು.

## ಚಿಲ್ಲರೆ ಸಿಗರೇಟ್ ಮಾರುವ ಅಂಗಡಿಗಳನ್ನು ಬಂದ್ ಮಾಡಲು ಸೂಚನೆ

• ಉದಯವಾಹಿನಿ ಮಂಗಳೂರು

ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್ ಮತ್ತು ತಂಬಾಕು ಉತ್ಪನ್ನಗಳನ್ನು ಸೇವಿಸಲು ಅವಕಾಶ ನೀಡುವ ಹಾಗೂ ಸಿಗರೇಟ್ಗಳನ್ನು ಚಿಲ್ಲರೆಯಾಗಿ ಮಾರಾಟ ಮಾಡುವ ಅಂಗಡಿ ಹೋಟೆಲ್ಗಳ ವಿರುದ್ಧ ಕಾರ್ಯಾಚರಣೆ ನಡೆಸಿ ಅವುಗಳನ್ನು ಮುಚ್ಚಲು ಕ್ರಮ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ರಾಜು. ಕೆ ಸೂಚಿಸಿದ್ದಾರೆ. ಅವರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್ ಸೇವನೆ ಹಾಗೂ ಪಾನ್ ಮತ್ತಿತರ ತಂಬಾಕುಗಳನ್ನು ಮಾರಾಟ ಮಾಡಲು ಅವಕಾಶವಿಲ್ಲ. ಸಿಗರೇಟ್ಗಳನ್ನು ಇಡೀ ಪ್ಯಾಕ್ನಲ್ಲಿ ಮಾರಾಟ ಮಾಡಬೇಕೇ ಹೊರತು ಸಿಂಗಲ್ ಆಗಿ ಚಿಲ್ಲರೆ ಸಿಗರೇಟ್ಗಳನ್ನು ಮಾರಾಟ ಮಾಡಲು ಅವಕಾಶವಿಲ್ಲ. ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಗ್ರಾಮ ಪಂಚಾಯತ್ಗಳು ಆಗ್ಗಿಂದಾಗೆ ಅಂಗಡಿ, ಹೋಟೆಲ್ ತಪಾಸಣೆ ನಡೆಸಬೇಕು. ಯಾವುದೇ ಅನಧಿಕೃತ ಮಾರಾಟ ಕಂಡು ಬಂದಲ್ಲಿ ಅಂತಹ ಅಂಗಡಿಗಳನ್ನು ಮುಚ್ಚಿಸಿ ಜಪ್ತಿ ಮಾಡುವಂತೆ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು. ಈ ಬಗ್ಗೆ ಮುಂದಿನ ಸಭೆಯೊಳಗೆ ಎಷ್ಟು ಅಂಗಡಿಗಳಿಗೆ ಭೇಟಿ ನೀಡಲಾಗಿದೆ, ಎಷ್ಟು ಉಲ್ಲಂಘನೆ ಕಂಡು ಬಂದಿದೆ, ದಂಡ ವಿಧಿಸಿರುವ ಹಾಗೂ ಅಂಗಡಿಗಳನ್ನು ಸೀಝ್ ಮಾಡಿರುವ ಬಗ್ಗೆ ಎಲ್ಲಾ ಅಧಿಕಾರಿಗಳು ವರದಿ ನೀಡಬೇಕು ಎಂದು ಅವರು ಆದೇಶಿಸಿದರು. ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ಪ್ರಕರಣಗಳು ಅಧಿಕಗೊಂಡಿದ್ದು, ಧೂಮಪಾನ ತಂಬಾಕು ಸೇವನೆಯೇ ಕಾರಣವಾಗಿದೆ. ಜನರ ಜೀವನ ಮತ್ತು ಆರೋಗ್ಯ ತುಂಬಾ ಮುಖ್ಯವಾಗಿದೆ. ಆರೋಗ್ಯದ ವಿರುದ್ಧ


ಉದಯವಾಹಿನಿ ಚಿತ್ರ

ಚೆಲ್ಲಾಟವಾಡುವವರನ್ನು ಯಾವುದೇ ಕಾರಣಕ್ಕೂ ಸಹಿಸಲಾಗದು ಎಂದು ಅವರು ತಿಳಿಸಿದರು.

**ಶಾಲಾ ಕಾಲೇಜುಗಳ ಬಳಿ ಸಂಪೂರ್ಣ ನಿಷೇಧ:** ಶಾಲಾ–ಕಾಲೇಜುಗಳ 100 ಮೀಟರ್ ಅಂತರದಲ್ಲಿ ಇರುವ ಅಂಗಡಿಗಳಲ್ಲಿ ಯಾವುದೇ ಕಾರಣಕ್ಕೂ ಬೀಡಿ, ಸಿಗರೇಟು, ಪಾನ್ ಮಸಾಲ ಹಾಗೂ ಇತರ ತಂಬಾಕು ಉತ್ಪನ್ನಗಳ ಮಾರಾಟಕ್ಕೆ ಅವಕಾಶವಿಲ್ಲ. ಈ ನಿಟ್ಟಿನಲ್ಲಿ ಆಯಾ ಶಾಲಾ ಕಾಲೇಜುಗಳ ಪ್ರಾಂಶುಪಾಲರು ಆಗಾಗ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. ಸಿಗರೇಟು ತಂಬಾಕು ಉತ್ಪನ್ನ ಮಾರಾಟ ಕಂಡು ಬಂದಲ್ಲಿ ಅಂತಹ ಅಂಗಡಿಗಳನ್ನು ತೆರವುಗೊಳಿಸಲು ಸ್ಥಳೀಯ ಸಂಸ್ಥೆಗೆ ವರದಿ ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು. ಈ ಬಗ್ಗೆ ಎಲ್ಲಾ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಮುಂದಿನ ಒಂದು ವಾರದೊಳಗೆ ವರದಿ ನೀಡಬೇಕು. ಹಾಗೂ ಮುಂದಿನ ಸಭೆಯೊಳಗೆ ಎಷ್ಟು ಅಂಗಡಿಗಳನ್ನು ಮುಚ್ಚಿಸಲಾಗಿದೆ ಎಂಬುವುದರ ಬಗ್ಗೆ ವರದಿ ನೀಡಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ನಿರ್ದೇಶಿಸಿದರು.

# ಬ್ರಿಮ್ಸ್ ಹಾಳಾಗಲು ಸಚಿವ ಖಂಡ್ರೆ ಕಾರಣ: ಸೋಮನಾಥ ಪಾಟೀಲ್

### ಭ್ರಷ್ಟಾಚಾರ ಹೆಚ್ಚಾಗಿದೆ, ಕೂಡಲೇ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು

• ಉದಯವಾಹಿನಿ ಬೀದರ್

ಇಲ್ಲಿಯ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ( ಬ್ರಿಮ್ಸ್) ಆಸ್ಪತ್ರೆ ವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಗಡಿ ಭಾಗದ ಜಿಲ್ಲಾ ಕೇಂದ್ರದಲ್ಲಿರುವ ಬ್ರಿಮ್ಸ್ ಆಸ್ಪತ್ರೆ ಇದೀಗ ಅಕ್ರಮ, ಭ್ರಷ್ಟಾಚಾರ, ಅವ್ಯವಸ್ಥೆಯ ಗೂಡಾಗಿದೆ. ಮೊದಲ ಬಾರಿಗೆ ಬ್ರಿಮ್ಸ್ ಈ ಪರಿಯಾಗಿ ಹಳಿ ತಪ್ಪಿ ಹಾಳಾಗಲು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ ಅಸಡ್ಡೆ, ನಿರ್ಲಕ್ಷ್ಯವೇ ಕಾರಣವಾಗಿದೆ ಎಂದು ಬಿಜೆಪಿ ಜಿಲ್ಲಾ ಅಧ್ಯಕ್ಷ ಸೋಮನಾಥ ಪಾಟೀಲ್, ಶಾಸಕರಾದ ಪ್ರಭು ಚವ್ಹಾಣ್, ಶರಣು ಸಲಗರ್, ಡಾ.ಶೈಲೇಂದ್ರ ಬೆಲ್ದಾಳೆ, ಡಾ. ಸಿದ್ದು ಪಾಟೀಲ್ ದೂರಿದ್ದಾರೆ.

**ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹ**

ಬ್ರಿಮ್ಸ್ ವ್ಯವಸ್ಥೆ ಹಾಳಾಗಿದೆ. ಇಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ. ಕೂಡಲೇ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಮೂರು ದಿನಗಳ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಅವರು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಅವರಿಗೆ ಪತ್ರ ಬರೆದು ವಿನಂತಿ ಮಾಡಿದ್ದರು. ಮಾಧ್ಯಮಗಳಲ್ಲಿ ಸಹ ಈ ಕುರಿತು ವರದಿ ಬಂದಿವೆ. ವೈದ್ಯಕೀಯ ಶಿಕ್ಷಣ ಸಚಿವರಿಗೆ ಬರೆದಿರುವ ಪತ್ರ, ಅದರಲ್ಲಿನ ಅಂಶಗಳನ್ನು ನೋಡಿದರೆ ಖಂಡ್ರೆ ಅವರು ಬ್ರಿಮ್ಸ್ ಆಸ್ಪತ್ರೆ ವಿಷಯದಲ್ಲಿ ಅಸಹಾಕರಾಗಿದ್ದಾರೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಜಿಲ್ಲಾ ಉಸ್ತುವಾರಿ ಹೊಣೆ ಹೊತ್ತುಕೊಂಡು ಒಂದು ಆಸ್ಪತ್ರೆ ವ್ಯವಸ್ಥೆಯನ್ನು ಸರಿ ದಾರಿಗೆ ತರುವುದು ಇವರಿಗೆ ಸಾಧ್ಯವಾಗುತ್ತಿಲ್ಲ. ಇದು ಸಚಿವರ ವೈಫಲ್ಯತೆ ಹಾಗೂ ನಿಷ್ಕ್ರಿಯತೆಯೂ ಸಾಬೀತುಪಡಿಸಿದೆ ಎಂದು ಹೇಳಿದ್ದಾರೆ.

ಈಶ್ವರ ಖಂಡ್ರೆ ಅವರು ಜಿಲ್ಲಾ ಉಸ್ತುವಾರಿ ಹೊಣೆ ಹೊತ್ತು ಎರಡೂವರೆ ವರ್ಷವಾಗುತ್ತಿದೆ. ಈ ಮುಂಚೆ ಸಹ ಎರಡು ವರ್ಷ ಅವರು ಸಚಿವರಾಗಿದ್ದರು. ಜಿಲ್ಲೆಯಲ್ಲಿನ ಎಲ್ಲ ಆಗುಹೋಗು ಜವಾಬ್ದಾರಿ ಉಸ್ತುವಾರಿ ಸಚಿವರ ಹೆಗಲ ಮೇಲಿರುತ್ತದೆ. ಆದರೆ ಬ್ರಿಮ್ಸ್ ಆಸ್ಪತ್ರೆ ವಿಷಯದಲ್ಲಿ ಸಚಿವರು ನನ್ನಿಂದ ಏನೂ ಸಾಧ್ಯವಾಗುತ್ತಿಲ್ಲ. ನೀವೇ ಇದು ಸುಧಾರಿಸಿ ಎಂದು ವೈದ್ಯಕೀಯ ಶಿಕ್ಷಣ ಸಚಿವರಿಗೆ



ಅಂಗಲಾಚಿರುವುದು ನೋಡಿದರೆ, ಬ್ರಿಮ್ಸ್ ಭ್ರಷ್ಟ ವ್ಯವಸ್ಥೆಯ ಮುಂದೆ ಸಚಿವ ಖಂಡ್ರೆಯವರು ಮಂಡಿಯೂರಿದರೆ ಎಂಬ ಅನುಮಾನ ಮೂಡುತ್ತದೆ ಎಂದು ಟೀಕಿಸಿದ್ದಾರೆ.

ಕಳೆದ ಅನೇಕ ತಿಂಗಳಿನಿಂದ 750 ಹಾಸಿಗೆ ಸಾಮಥ್ಯದ ಬ್ರಿಮ್ಸ್ ಆಸ್ಪತ್ರೆ ಬಗ್ಗೆ ಸಾರ್ವಜನಿಕರು, ರೋಗಿಗಳಿಂದ ನಿರಂತರವಾಗಿ ದೂರು ಬರುತ್ತಿವೆ. ಮಾಧ್ಯಮಗಳಲ್ಲಿ ಸತತವಾಗಿ ಈ ಬಗ್ಗೆ ಸುದ್ದಿಗಳು ಬರುತ್ತಿವೆ. ಇಡೀ ಸರ್ಕಾರದ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ನಿಟ್ಟಿನಲ್ಲಿ ಬ್ರಿಮ್ಸ್ ವ್ಯವಸ್ಥೆ ಹಾಳಾಗಿದೆ. ಖುದ್ದು ಸಚಿವ ಖಂಡ್ರೆ ಅವರು ಸಹ ವೈದ್ಯಕೀಯ ಶಿಕ್ಷಣ ಸಚಿವರಿಗೆ ಬರೆದಿರುವ ಪತ್ರದಲ್ಲಿ ಬ್ರಿಮ್ಸ್ ನಿತ್ಯ ಒಂದಿಲ್ಲೊಂದು ವಿವಾದಕ್ಕೆ ಸಿಲುಕುತ್ತಿದ್ದು, ಇದರಿಂದ ರಾಜ್ಯ ಸರ್ಕಾರಕ್ಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವನಾಗಿರುವ ನನಗೆ ಮುಜುಗರಕ್ಕೆ ಸಿಲುಕಿಸುವಂತೆ ಮಾಡಿದೆ ಎಂದು ಹೇಳಿದ್ದಾರೆ. ಹಾಗಾದರೆ ಈ ಮುಜುಗರದ ಪರಿಸ್ಥಿತಿ ನಿರ್ಮಾಣ ಆಗುವವರೆಗೆ ನೀವು ಯಾಕೆ ಸುಮ್ಮನಿದ್ದಿರಿ? ಜಿಲ್ಲಾ ಉಸ್ತುವಾರಿ ಸಚಿವರಾಗಿ ಆಸ್ಪತ್ರೆ ಸಮಸ್ಯೆ ನಿವಾರಿಸುವ, ಅಕ್ರಮ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ, ರೋಗಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನು ಕೊಡಿಸುವ ಹೊಣೆ ನಿಮ್ಮದಿಲ್ಲವೆ? ಇದಕ್ಕೆ ಖಂಡ್ರೆ ಅವರೇ ಉತ್ತರಿಸಬೇಕು ಎಂದು ಹೇಳಿದ್ದಾರೆ.

> **ವೈದ್ಯಕೀಯ ಶಿಕ್ಷಣ ಸಚಿವರಿಗೆ ಪತ್ರ ಬರೆದರೆ ಜಿಲ್ಲಾ ಉಸ್ತುವಾರಿ ಸಚಿವರ ಕೆಲಸ ಮುಗಿತಾ? ಹಾಗಾದರೆ ಜಿಲ್ಲೆಗೆ ಉಸ್ತುವಾರಿ ಸಚಿವರು ಏಕೆ ಬೇಕು? ಆಸ್ಪತ್ರೆಯಲ್ಲಿ ಸಮಸ್ಯೆ ಇದ್ದರೆ ತಕ್ಷಣ ಅದಕ್ಕೆ ಸರ್ಜರಿ ಮಾಡಿ ಜನಹಿತ, ರೋಗಿಗಳ ಹಿತ ಕಾಪಾಡುವುದು ನಿಮ್ಮ ಹೊಣೆ? ಎರಡೂವರೆ ವರ್ಷದಿಂದ ಈ ಕಡೆ ಇಣುಕಿ ನೋಡಿಲ್ಲ. ಇಲ್ಲಿ ಏನಾಗುತ್ತಿದೆ? ಏನು ಮಾಡಬೇಕಿದೆ ಎಂಬ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಿಲ್ಲ. ಸಂಬಂಧಿತ ಇಲಾಖೆ ಸಚಿವರಿಗೆ, ಹಿರಿಯ ಅಧಿಕಾರಿಗಳಿಗೆ ಇಲ್ಲಿಗೆ ಕರೆಯಿಸಿ ಸಭೆ ನಡೆಸಿ ಅವ್ಯವಸ್ಥೆಗೆ ಚಾಟಿ ಬೀಸುವ ಕೆಲಸ ಮಾಡಿಲ್ಲ. ಇದರ ಪರಿಣಾಮ ಇಂದು ಬ್ರಿಮ್ಸ್ ಆಸ್ಪತ್ರೆ ಸುಧಾರಣೆಯಾಗದ ರೀತಿಯಲ್ಲಿ ಅವ್ಯವಸ್ಥೆ ಗೂಡಾಗಿ ನಿಂತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. –ಸೋಮನಾಥ ಪಾಟೀಲ್**

ಬ್ರಿಮ್ಸ್ ಆಸ್ಪತ್ರೆಯಲ್ಲಿ ನೇಮಕ ಮಾಡುವಾಗ ನಿಯಮಗಳನ್ನು ಗಾಳಿಗೆ ತೂರಲಾಗಿದೆ. ಅಕ್ರಮ ನಡೆದಿದೆ ಎಂದು ನೀವೇ ಹೇಳುತ್ತಿರುವಿರಿ. ಹಾಗಾದರೆ ನೇಮಕಾತಿ ನಡೆಯುವ ಮುನ್ನ ಇತ್ತ ಗಮನಹರಿಸಿಲ್ಲವೇಕೆ? ವೈದ್ಯಕೀಯ ಶಿಕ್ಷಣ ಇಲಾಖೆ ಅಧೀನದಲ್ಲಿ ಬರುವ ಬ್ರಿಮ್ಸ್ ಸ್ವಾಯತ್ತ ಸಂಸ್ಥೆ ಎನಿಸಿದರೂ ಜಿಲ್ಲಾ ಉಸ್ತುವಾರಿ ಸಚಿವರಿಗೆ ಬಿಟ್ಟಿಲ್ಲ. ಜಿಲ್ಲಾಡಳಿತಕ್ಕೂ ಮೇಲಿಲ್ಲ. ಜನರ ಹಿತದಿಂದ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳು ಜಿಲ್ಲೆಯ ಪ್ರತಿಯೊಂದು ಇಲಾಖೆ, ಸಂಸ್ಥೆ ಉಸ್ತುವಾರಿಯನ್ನು ನೋಡಬೇಕಾಗುತ್ತದೆ.

ಸಚಿವರು ಇದರ ಬಗ್ಗೆ ಗಂಭೀರತೆ ಪ್ರದರ್ಶಿಸಿಲ್ಲ, ಜಿಲ್ಲಾಡಳಿತವೂ ಕೇರ್ ಮಾಡಿಲ್ಲ. ಹೀಗಾಗಿ ನಿತ್ಯ ಇಲ್ಲಿ ದೂರು, ಆರೋಪಗಳು ಸಾಮಾನ್ಯವಾಗಿವೆ ಎಂದು ಹೇಳಿದ್ದಾರೆ. ಈ ಭಾಗದ ಹೃದಯ ರೋಗಿಗಳಿಗೆ ವರದಾನ ಆಗಬೇಕಾದ ಕ್ಯಾಥ್ ಲಾಬ್ ಸುಮಾರು 15 ಕೋಟಿ ರೂ. ವೆಚ್ಚದಲ್ಲಿ ಮಾಡಲಾಗಿದೆ. ಇದರ ಉದ್ಘಾಟನೆ ಮುಖ್ಯಮಂತ್ರಿ ಕೈಯಿಂದಲೇ ಮಾಡಿಸಲಾಗಿದೆ. ಆದರೆ ಈವರೆಗೆ ಇದು ಆರಂಭವಾಗಿಲ್ಲ. ಬಹುತೇಕ ಪೀಠೋಪಕರ ತುಕ್ಕು ಹಿಡಿಯುತ್ತಿವೆ. ಹೃದ್ರೋಗಿಗಳು ಖಾಸಗಿ ಆಸ್ಪತ್ರೆಗೆ ಹೋಗಿ ಹೈರಾಣಾಗುತ್ತಿದ್ದಾರೆ.

ಬಡವರು ಹಣವಿಲ್ಲದೆ ಜೀವವೇ ಕಳೆದುಕೊಳ್ಳುವ ಸ್ಥಿತಿ ಎದುರಾಗಿದೆ. ಆದರೆ ಇಲ್ಲಿ ಕ್ಯಾಥ್ ಲ್ಯಾಬ್ ಆರಂಭ ಮಾಡುತ್ತಿಲ್ಲ. ಇದೇ ರೀತಿ ಎಂಆರ್ ಐ, ಸಿಟಿ ಸ್ಕ್ಯಾನ್ ಮಾಡುವ ಸಮಸ್ಯೆಯಿದೆ. ಹೀಗೆ ಏಕೆ? ಖಾಸಗಿ ವೈದ್ಯರ, ಆಸ್ಪತ್ರೆಗಳ ಒತ್ತಡದಿಂದ ಹೀಗಾಗುತ್ತಿದ್ದೆಯೇ ಎಂದು ಪ್ರಶ್ನಿಸಿದ್ದಾರೆ.

ಉದಯ ವಾಹಿನಿ

ಪ್ರಾದೇಶಿಕ

ಗುರುವಾರ 06 ನವೆಂಬರ್ 2025



## ನ್ಯೂಜಿಲ್ಯಾಂಡ್‌ನಲ್ಲಿ ವಾಣಿಜ್ಯ, ಕೈಗಾರಿಕಾ ಸಚಿವ ಪಿಯೂಷ್ ಗೋಯಲ್

**ಆಕ್ಲೆಂಡ್:** ಪ್ರಸ್ತಾವಿತ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆಗಳ ಪ್ರಗತಿಯನ್ನು ಪರಿಶೀಲಿಸಲು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ನ್ಯೂಜಿಲ್ಯಾಂಡ್‌ಗೆ ಆಗಮಿಸಿದ್ದಾರೆ. ನಡೆಯುತ್ತಿರುವ ಮಾತುಕತೆಯ ಪ್ರಗತಿಯನ್ನು ಪರಿಶೀಲಿಸಲು ನ್ಯೂಜಿಲೆಂಡ್‌ನಲ್ಲಿರಲು ಸಂತೋಷವಾಗಿದೆ ಎಂದು ಗೋಯಲ್ ಎಕ್ಸ್‌ನ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.



ಸಮಗ್ರ, ಪರಸ್ಪರ ಪ್ರಯೋಜನಕಾರಿ ಆರ್ಥಿಕ ಪಾಲುದಾರಿಕೆಗಾಗಿ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಎರಡೂ ದೇಶಗಳು ಎದುರು ನೋಡುತ್ತಿವೆ ಎಂದು ಅವರು ಹೇಳಿದರು. ನಮ್ಮ ಎರಡೂ ದೇಶಗಳ ನಡುವಿನ ಸಹಯೋಗ ಮತ್ತು ಹೂಡಿಕೆಗಾಗಿ ಹೊಸ ಮಾರ್ಗಗಳನ್ನು ಅನ್ವೇಷಿಸಲು ನಾನು ಹೂಡಿಕೆದಾರರೊಂದಿಗೆ ಉದ್ಯಮದ ನಾಯಕರನ್ನು ಸಹ ಭೇಟಿ ಮಾಡುತ್ತೇನೆ ಎಂದು ಗೋಯಲ್ ಹೇಳಿದರು. ಭಾರತ-ನ್ಯೂಜಿಲೆಂಡ್ ಮಾತುಕತೆಗಳ ನಾಲ್ಕನೇ ಸುತ್ತು ನ. 3 ರಂದು ಆಕ್ಲೆಂಡ್‌ನಲ್ಲಿ ಪ್ರಾರಂಭವಾಯಿತು.

ಮಾ. 16, 2025ರಂದು ಮಾತುಕತೆಗಳನ್ನು ಔಪಚಾರಿಕವಾಗಿ ಪ್ರಾರಂಭಿಸಲಾಯಿತು. ನ್ಯೂಜಿಲೆಂಡ್‌ನೊಂದಿಗೆ ಭಾರತದ ದ್ವಿಪಕ್ಷೀಯ ಸರಕು ವ್ಯಾಪಾರವು 2024-25 ರಲ್ಲಿ 1.3 ಬಿಲಿಯನ್ ಆಗಿದ್ದು, ಹಿಂದಿನ ವರ್ಷಕ್ಕಿಂತ ಸುಮಾರು 49 ಪ್ರತಿಶತದಷ್ಟು ಬೆಳವಣಿಗೆಯನ್ನು ದಾಖಲಿಸಿದೆ. ನ್ಯೂಜಿಲೆಂಡ್‌ಗೆ ಭಾರತದ ಪ್ರಮುಖ ಸರಕುಗಳ ರಫ್ತುಗಳಲ್ಲಿ ಬಟ್ಟೆ, ಬಟ್ಟೆಗಳು, ಗೃಹ ಜವಳಿ ಸೇರಿವೆ ಔಷಧಗಳು, ವೈದ್ಯಕೀಯ ಸರಬರಾಜುಗಳು ಸಂಸ್ಕರಿಸಿದ ಪೆಟ್ರೋಲ್ ಕೃಷಿ ಉಪಕರಣಗಳು, ಯಂತ್ರೋಪಕರಣಗಳವರ ಟ್ರಾಕ್ಟರ್‌ಗಳು, ನೀರಾವರಿ ಉಪಕರಣಗಳು, ಆಟೋ, ಕಬ್ಬಿಣ ಮತ್ತು ಉಕ್ಕು, ಕಾಗದದ ಉತ್ಪನ್ನಗಳು, ಎಲೆಕ್ಟ್ರಾನಿಕ್ಸ್, ಸೀಗಡಿ, ವಜ್ರಗಳು, ಬಾಸ್ಮತಿ ಅಕ್ಕಿ. ಪ್ರಮುಖ ಆಮದುಗಳು ಕೃಷಿ ಸರಕುಗಳು, ಖನಿಜಗಳು, ಸೇಬುಗಳು, ಕಿವಿಹಣ್ಣು, ಕುರಿಮರಿ, ಹಾಲಿನ ಅಲ್ಬುಮಿನ್, ಲ್ಯಾಕ್ಟೋಸ್ ಸಿರಪ್, ಕೋಕಿಂಗ್ ಕಲ್ಲಿದ್ದಲು, ಮರದ ದಿಮ್ಮಿಗಳು ಮತ್ತು ಮರದ ದಿಮ್ಮಿ, ಉಣ್ಣೆ ಮತ್ತು ಸ್ಕ್ರ್ಯಾಪ್ ಲೋಹಗಳಂತಹ ಮಾಂಸ ಉತ್ಪನ್ನಗಳಿವೆ.

# ಅಮೆರಿಕದಲ್ಲಿ ಭಾರತೀಯ ಮಹಿಳೆಗೆ ಗೆಲುವು

## ಘಜಾಲಾ ಹಶ್ಮಿ ವರ್ಜೀನಿಯಾದ ನೂತನ ಲೆಫ್ಟಿನೆಂಟ್ ಗವರ್ನರ್

**ವಾಷಿಂಗ್ಟನ್:** ಅಮೆರಿಕದ ರಾಜಕೀಯದಲ್ಲಿ ಭಾರತೀಯ ಮೂಲದ ಮತ್ತೊಬ್ಬರು ಮಹತ್ವದ ಹುದ್ದೆಗೇರಿದ್ದಾರೆ. ಡೆಮಾಕ್ರಟಿಕ್ ಪಕ್ಷದ ಘಜಾಲಾ ಹಶ್ಮಿ ಅವರು ವರ್ಜೀನಿಯಾದ ಲೆಫ್ಟಿನೆಂಟ್ ಗವರ್ನರ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜಯಭೇರಿ ಬಾರಿಸಿದ್ದಾರೆ. ಅವರು ತಮ್ಮ ಪ್ರತಿಸ್ಪರ್ಧಿ ರಿಪಬ್ಲಿಕನ್ ಪಕ್ಷದ ಜಾನ್ ರೀಡ್ ಅವರನ್ನು ಪರಾಭವಗೊಳಿಸಿದ್ದಾರೆ. ಈ ಗೆಲುವಿನೊಂದಿಗೆ, ಘಜಾಲಾ ಅವರು ಪ್ರತಿನಿಧಿಸುತ್ತಿದ್ದ 15ನೇ ಸೆನೆಟೋರಿಯಲ್ ಡಿಸ್ಟ್ರಿಕ್ಟ್ ಸ್ಥಾನಕ್ಕೆ ವಿಶೇಷ ಚುನಾವಣೆ ನಡೆಯಬೇಕಿದೆ. ಘಜಾಲಾ ಅವರು ಈ ಹಿಂದೆ ವರ್ಜೀನಿಯಾ ಸೆನೆಟ್‌ನಲ್ಲಿ ಸೇವೆ ಸಲ್ಲಿಸಿದ ಮೊದಲ ಮುಸ್ಲಿಂ, ಮೊದಲ ದಕ್ಷಿಣ ಏಷ್ಯಾದ ಅಮೆರಿಕನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ಭಾರತದಿಂದ ಅಮೆರಿಕಕ್ಕೆ ವಲಸೆ

**ರಾಜಕೀಯ ಪಯಣ:** 2019ರಲ್ಲಿ ರಾಜಕೀಯ ಪ್ರವೇಶಿಸಿದ ಘಜಾಲಾ ಹಶ್ಮಿ, ಮೊದಲ ಪ್ರಯತ್ನದಲ್ಲೇ ರಿಪಬ್ಲಿಕನ್ ಪಕ್ಷದ ಹಿಡಿತದಲ್ಲಿದ್ದ ರಾಜ್ಯ ಸೆನೆಟ್ ಸ್ಥಾನವನ್ನು ಗೆದ್ದು ಅಚ್ಚರಿ ಮೂಡಿಸಿದ್ದರು. ಐದು ವರ್ಷಗಳ ನಂತರ, 2024ರಲ್ಲಿ, ಅವರು ಸೆನೆಟ್‌ನ ಶಿಕ್ಷಣ, ಆರೋಗ್ಯ ಸಮಿತಿಯ ಅಧ್ಯಕ್ಷರಾಗಿ ನೇಮಕಗೊಂಡರು. ಇದು ಡೆಮಾಕ್ರಟಿಕ್ ಪಕ್ಷದ ಪ್ರಮುಖ ಆದ್ಯತೆಗಳಾದ ಸಾರ್ವಜನಿಕ ಶಿಕ್ಷಣ ಮತ್ತು ಚುನಾವಣೆಯ ಸ್ವಾತಂತ್ರ್ಯದ ವಿಷಯದಲ್ಲಿ ಮಹತ್ವದ ನಾಯಕತ್ವದ ಹುದ್ದೆಯಾಗಿತ್ತು. ವಸತಿ, ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿನ ಅಸಮಾನತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ.

**ಹೈದರಾಬಾದ್‌ನಿಂದ ಅಮೆರಿಕಕ್ಕೆ:** ಘಜಾಲಾ ಹಶ್ಮಿ 1964ರಲ್ಲಿ ಹೈದರಾಬಾದ್‌ನ ಮಲಕ್‌ಪೇಟ್‌ನಲ್ಲಿ ಜಿಯಾ ಹಶ್ಮಿ ಮತ್ತು ತನ್ವೀರ್ ಹಶ್ಮಿ ದಂಪತಿಯ ಪುತ್ರಿಯಾಗಿ ಜನಿಸಿದರು. ತಮ್ಮ ನಾಲ್ಕನೇ ವಯಸ್ಸಿನಲ್ಲಿ, ತಾಯಿ, ಹಿರಿಯ ಸಹೋದರನೊಂದಿಗೆ ಭಾರತದಿಂದ ಅಮೆರಿಕಕ್ಕೆ ವಲಸೆ ಹೋಗಿ, ಅಲ್ಲಿ ಜಾರ್ಜಿಯಾದಲ್ಲಿದ್ದ ತಮ್ಮ ತಂದೆಯೊಂದಿಗೆ ಸೇರಿಕೊಂಡರು.



**ಮಮ್ದಾನಿ ಬೆನ್ನಲ್ಲೇ ಮತ್ತೊರ್ವ ಭಾರತೀಯ ಮೂಲದವರಿಗೆ ಉನ್ನತ ಹುದ್ದೆ**

**ನ್ಯೂಯಾರ್ಕ್ ಮೇಯರ್ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷಕ್ಕೆ ಸೇರಿದ ಇನ್ನೋರ್ವ ಭಾರತೀಯ ಮೂಲದ ವ್ಯಕ್ತಿ ಜೊಹ್ರಾನ್ ಮಮ್ದಾನಿ ಗೆಲುವು ಸಾಧಿಸಿದ್ದಾರೆ. ಇದೀಗ ಘಜಾಲಾ ಹಶ್ಮಿ ಅವರು ವರ್ಜೀನಿಯಾದ ಲೆಫ್ಟಿನೆಂಟ್ ಗವರ್ನರ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜಯಭೇರಿ ಬಾರಿಸಿದ್ದು, ಇಬ್ಬರು ಭಾರತೀಯ ಮೂಲದವರು ಅದರಲ್ಲೂ ಇಬ್ಬರೂ ಮುಸ್ಲಿಂ ಸಮುದಾಯಕ್ಕೆ ಸೇರಿದವರು ಆಯ್ಕೆಯಾದಂತಾಗಿದೆ.**

ನಾಲ್ಕನೇ ವಯಸ್ಸಿನಲ್ಲಿ, ತಾಯಿ, ಹಿರಿಯ ಸಹೋದರನೊಂದಿಗೆ ಭಾರತದಿಂದ ಅಮೆರಿಕಕ್ಕೆ ವಲಸೆ ಹೋಗಿ, ಅಲ್ಲಿ ಜಾರ್ಜಿಯಾದಲ್ಲಿದ್ದ ತಮ್ಮ ತಂದೆಯೊಂದಿಗೆ ಸೇರಿಕೊಂಡರು.

ಘಜಾಲಾ ಅವರ ತಂದೆ, ಪ್ರೊಫೆಸರ್ ಜಿಯಾ ಹಶ್ಮಿ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಯಾಗಿದ್ದು, ದಕ್ಷಿಣ ಕೆರೊಲಿನಾ ವಿಶ್ವವಿದ್ಯಾಲಯದಿಂದ ಅಂತರರಾಷ್ಟ್ರೀಯ ಸಂಬಂಧ ವಿಷಯದ ಮೇಲೆ ಪಿಎಚ್‌ಡಿ ಪಡೆದಿದ್ದಾರೆ. ಅವರ ತಾಯಿ ತನ್ವೀರ್ ಹಶ್ಮಿ ಅವರು ಉಸ್ಮಾನಿಯಾ ವಿಶ್ವವಿದ್ಯಾಲಯದ ಮಹಿಳಾ ಕಾಲೇಜಿನಿಂದ ಪದವಿ ಪಡೆದಿದ್ದರು. ಘಜಾಲಾ ಅವರು ಜಾರ್ಜಿಯಾ ಸದರ್ನ್ ವಿಶ್ವವಿದ್ಯಾಲಯದಿಂದ ಬಿಎ ಪದವಿ ಮತ್ತು ಅಟ್ಲಾಂಟಾದ ಎಮೋರಿ ವಿಶ್ವವಿದ್ಯಾಲಯದಿಂದ ಅಮೆರಿಕನ್ ಸಾಹಿತ್ಯದಲ್ಲಿ ಪಿಎಚ್‌ಡಿ ಪಡೆದಿದ್ದಾರೆ. 1991ರಲ್ಲಿ, ಅವರು ತಮ್ಮ ಪತಿ ಅಝರ್ ರಫೀಕ್ ಅವರೊಂದಿಗೆ ರಿಚ್ಮಂಡ್ ಪ್ರದೇಶಕ್ಕೆ ತೆರಳಿದರು. ಈ ದಂಪತಿಗೆ ಯಾಸ್ಮಿನ್ ಮತ್ತು ನೂರ್ ಎಂಬ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ರಾಜಕೀಯಕ್ಕೆ ಬರುವ ಮುನ್ನ ಘಜಾಲಾ ಹಶ್ಮಿ ಸುಮಾರು 30 ವರ್ಷಗಳ ಕಾಲ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರು ರಿಚ್ಮಂಡ್ ವಿಶ್ವವಿದ್ಯಾಲಯ ಮತ್ತು ನಂತರ ರೆನಾಲ್ಡ್ಸ್ ಸಮುದಾಯ ಕಾಲೇಜಿನಲ್ಲಿ ಬೋಧಕರಾಗಿದ್ದರು. ರೆನಾಲ್ಡ್ಸ್ ಕಾಲೇಜಿನಲ್ಲಿ ಅವರು ಸೆಂಟರ್ ಫಾರ್ ಎಕ್ಸಲೆನ್ಸ್ ಇನ್ ಟೀಚಿಂಗ್ ಅಂಡ್ ಲರ್ನಿಂಗ್ ಸಂಸ್ಥೆಯ ಸ್ಥಾಪಕ ನಿರ್ದೇಶಕಿಯಾಗಿಯೂ ಕಾರ್ಯನಿರ್ವಹಿಸಿದ್ದರು.

- ■ ವರ್ಜೀನಿಯಾದ ಲೆಫ್ಟಿನೆಂಟ್ ಗವರ್ನರ್ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಭಾರತೀಯ ಮೂಲದ ಘಜಾಲಾ ಹಶ್ಮಿ ಗೆಲುವು
- ■ ವರ್ಜೀನಿಯಾ ಸೆನೆಟ್‌ಗೆ ಆಯ್ಕೆಯಾದ ಮೊದಲ ಮುಸ್ಲಿಂ ಮತ್ತು ಮೊದಲ ದಕ್ಷಿಣ ಏಷ್ಯಾದ ಅಮೆರಿಕನ್ ಎಂಬ ಹೆಗ್ಗಳಿಕೆ
- ■ 1964ರಲ್ಲಿ ಹೈದರಾಬಾದ್‌ನಲ್ಲಿ ಜನಿಸಿದ್ದ ಘಜಾಲಾ, ನಾಲ್ಕನೇ ವಯಸ್ಸಿನಲ್ಲಿ ಅಮೆರಿಕಕ್ಕೆ ವಲಸೆ
- ■ 30 ವರ್ಷಗಳ ಕಾಲ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿ, 2019ರಲ್ಲಿ ರಾಜಕೀಯ ಪ್ರವೇಶ ಮಾಡಿದ್ದ ಘಜಾಲಾ

## ಮಿನಿ ನ್ಯೂಸ್

### ಬಾಹ್ಯಾಕಾಶ ನಿಲ್ದಾಣದಲ್ಲಿ ಸಿಲುಕಿಕೊಂಡ ಚೀನಿ ಸಿಬ್ಬಂದಿ

**ಬೀಜಿಂಗ್:** ಬಾಹ್ಯಾಕಾಶ ನಿಲ್ದಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳ ವಾಪಸಾತಿಯನ್ನು ಸಣ್ಣ ಬಾಹ್ಯಾಕಾಶ ಶಿಲಾವಶೇಷದಿಂದಾಗಿ ಶಂಕಿತ ಪರಿಣಾಮದಿಂದಾಗಿ ಮುಂದೂಡಲಾಗಿದೆ ಎಂದು ಚೀನಾ ಮಾನವಸಹಿತ ಬಾಹ್ಯಾಕಾಶ ಸಂಸ್ಥೆ ಇಲ್ಲಿ ಪ್ರಕಟಿಸಿದೆ.

ಗಗನಯಾತ್ರಿಗಳ ಸುರಕ್ಷತೆ ಮತ್ತು ಕಾರ್ಯಾಚರಣೆಯ ಯಶಸ್ಸನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ವಾಪಸಾತಿಯನ್ನು ವಿಳಂಬಗೊಳಿಸುವ ನಿರ್ಧಾರ ಹೊಂದಿದೆ ಎಂದು ಸಂಸ್ಥೆ ತಿಳಿಸಿದೆ. ಚೀನಾ ಪ್ರತಿ ಆರು ತಿಂಗಳಿಗೊಮ್ಮೆ ನಿಲ್ದಾಣ ಸಿಬ್ಬಂದಿಯನ್ನು ಬದಲಾಯಿಸುತ್ತದೆ. ಶನಿವಾರ, ಸಿಬ್ಬಂದಿಯನ್ನು ಹೊತ್ತ ಶೆನ್‌ಝೌ-20 ಬಾಹ್ಯಾಕಾಶ ನೌಕೆಯು ಶೆನ್‌ಝೌ-21 ಸಿಬ್ಬಂದಿಯೊಂದಿಗೆ ತನ್ನ ಕಕ್ಷೆಯೊಳಗೆ ಹಸ್ತಾಂತರವನ್ನು ಪೂರ್ಣಗೊಳಿಸಿತು ಮತ್ತು ಬುಧವಾರ ಭೂಮಿಗೆ ಮರಳಲು ನಿರ್ಧರಿಸಲಾಗಿತ್ತು.

ನಿಲ್ದಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮೂವರು ಸದಸ್ಯರ ಸಿಬ್ಬಂದಿ ಹಸ್ತಾಂತರ ಸಮಾರಂಭವನ್ನು ನಡೆಸಿ ಮಂಗಳವಾರ ಬಾಹ್ಯಾಕಾಶ ನಿಲ್ದಾಣದ ಕೀಲಿಗಳನ್ನು ವರ್ಗಾಯಿಸಿದರು. ಇಲ್ಲಿಯವರೆಗೆ, ಶೆನ್‌ಝೌ-20 ತ್ರಿಮೂರ್ತಿಗಳಾದ ಚೆನ್ ಡಾಂಗ್, ಚೆನ್ ಝೊಂಗ್ರುಯಿ, ವಾಂಗ್ ಜೀ ತಮ್ಮ ಎಲ್ಲಾ ಯೋಜಿತ ಕಾರ್ಯಗಳನ್ನು ಪೂರ್ಣಗೊಳಿಸಿದ್ದಾರೆ ಮತ್ತು ಬುಧವಾರ ಉತ್ತರ ಚೀನಾದ ಇನ್ನರ್ ಮಂಗೋಲಿಯಾ ಸ್ವಾಯತ್ತ ಪ್ರದೇಶದ ಡಾಂಗ್‌ಫೆಂಗ್ ಲ್ಯಾಂಡಿಂಗ್ ಸೈಟ್‌ಗೆ ಮರಳಲು ಸಿದ್ಧರಾಗಿದ್ದರು ಎಂದು ಅಧಿಕೃತ ಮಾಧ್ಯಮ ವರದಿಗಳು ತಿಳಿಸಿವೆ. ಆದರೆ, ಅವರ ವಾಪಸಾತಿಯನ್ನು ಸದ್ಯ ಮುಂದೂಡಲಾಗಿದೆ. ಚೀನಾ ಕಳೆದ ಶುಕ್ರವಾರ ಶೆನ್‌ಝೌ-21 ಸಿಬ್ಬಂದಿ ಬಾಹ್ಯಾಕಾಶ ನೌಕೆಯನ್ನು ಉಡಾವಣೆ ಮಾಡಿತು, ಆರು ತಿಂಗಳ ಕಾರ್ಯಾಚರಣೆಯಲ್ಲಿ ಮೂರು ಗಗನಯಾತ್ರಿಗಳನ್ನು ತನ್ನ ಕಕ್ಷೆಯಲ್ಲಿರುವ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಿತು.

# ನ್ಯೂಯಾರ್ಕ್ ಮೇಯರ್ ಆಗಿ ಭಾರತೀಯ ಮೂಲದ ಜೋಹ್ರಾನ್ ಮಮ್ದಾನಿ ಆಯ್ಕೆ

**ನ್ಯೂಯಾರ್ಕ್:** ನ್ಯೂಯಾರ್ಕ್ ನಗರದ ಮೇಯರ್ ಆಗಿ ಭಾರತೀಯ ಮೂಲದ ಜೋಹ್ರಾನ್ ಮಮ್ದಾನಿ ಭಾರಿ ಬಹುಮತದಿಂದ ಆಯ್ಕೆ ಆಗಿದ್ದಾರೆ. ತೀವ್ರ ಪೈಪೋಟಿಯಿಂದ ಕೂಡಿದ್ದ ನ್ಯೂಯಾರ್ಕ್ ನಗರದ ಮೇಯರ್ ಚುನಾವಣೆಯಲ್ಲಿ 34 ವರ್ಷದ ಭಾರತೀಯ ಮೂಲದ ಪ್ರಜಾಪ್ರಭುತ್ವ ಸಮಾಜವಾದಿ ಶಾಸಕ ಜೋಹ್ರಾನ್ ಮಮ್ದಾನಿ ಅದ್ಭುತ ಗೆಲುವು ಸಾಧಿಸಿದರು, ಇದರೊಂದಿಗೆ ಅವರು ಅಮೆರಿಕದ ಅತಿದೊಡ್ಡ ನಗರದ ಚುಕ್ಕಾಣಿ ಹಿಡಿದ ಮೊದಲ ದಕ್ಷಿಣ ಏಷ್ಯಾ, ಮುಸ್ಲಿಂ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಭಾರತೀಯ ಮೂಲದ ಪೋಷಕರ ಉಗಾಂಡಾ ಮೂಲದ ಮಮ್ದಾನಿ ಅವರ ತಾಯಿ ಪ್ರಸಿದ್ಧ ಚಲನಚಿತ್ರ ನಿರ್ಮಾಪಕಿ ಮೀರಾ ನಾಯರ್ ಮತ್ತು ತಂದೆ ಶೈಕ್ಷಣಿಕ ಮಹಮೂದ್ ಮಮ್ದಾನಿ ಆಗಿದ್ದಾರೆ. ಮಾಜಿ ಗವರ್ನರ್ ಆಂಡ್ರ್ಯೂ ಕ್ಯುಮೊ, ರಿಪಬ್ಲಿಕನ್ ಅಭ್ಯರ್ಥಿ ಕರ್ಟಿಸ್ ಸ್ಲಿವಾ ಅವರನ್ನು ಮಮ್ದಾನಿ ಸೋಲಿಸಿದರು. ಅವರು ಮೇಯರ್ ಚುನಾವಣೆಯಲ್ಲಿ 948,202 ಮತಗಳನ್ನು (ಶೇಕಡಾ 50.6)



ಗಳಿಸಿ, ಶೇ. 83 ರಷ್ಟು ಮತಗಳನ್ನು ಗಳಿಸಿದರು.

ಅವರು ತಿಂಗಳುಗಳಿಂದ ಮೇಯರ್ ಚುನಾವಣೆಯಲ್ಲಿ ಮುಂಚೂಣಿಯಲ್ಲಿದ್ದರು, ನಿನ್ನೆ ರಿಪಬ್ಲಿಕನ್ ಅಭ್ಯರ್ಥಿ ಕರ್ಟಿಸ್ ಸ್ಲಿವಾ, ರಾಜಕೀಯ ಹೆವಿವೇಯ್ಟ್ ಮಾಜಿ ನ್ಯೂಯಾರ್ಕ್ ರಾಜ್ಯ ಗವರ್ನರ್ ಆಂಡ್ರ್ಯೂ ಕ್ಯುಮೊ ಅವರನ್ನು ಸೋಲಿಸಿದರು, ಅವರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಚುನಾವಣೆಯ ಮುನ್ನಾದಿನದಂದು ಮಾತ್ರ ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅನುಮೋದನೆಯನ್ನು ಪಡೆದುಕೊಂಡಿದ್ದರು. ಕ್ಯುಮೊ 776,547 ಮತಗಳನ್ನು (ಶೇ. 41.3) ಗಳಿಸಿದರೆ, ಸ್ಲಿವಾ 137,030 ಮತಗಳನ್ನು ಪಡೆದರು. 1969ರ ನಂತರ ಮೊದಲ ಬಾರಿಗೆ ಎರಡು ಮಿಲಿಯನ್ ಮತಗಳು ಚಲಾವಣೆಯಾಗಿವೆ ಎಂದು ಚುನಾವಣಾ ಮಂಡಳಿ ತಿಳಿಸಿದೆ, ಮ್ಯಾನ್‌ಹ್ಯಾಟನ್‌ನಲ್ಲಿ 444,439 ಮತಗಳು, ನಂತರ ಬ್ರಾಂಕ್ಸ್ (187,399), ಬ್ರೂಕ್ಲಿನ್ (571,857), ಕ್ವೀನ್ಸ್ (421,176), ಸ್ಟೇಟನ್ ಐಲ್ಯಾಂಡ್ (123,827) ಮತಗಳು ಚಲಾವಣೆಯಾಗಿವೆ. ನ್ಯೂಯಾರ್ಕ್ ನಗರದ ಮೇಯರ್ ಹುದ್ದೆಗೆ ಡೆಮಾಕ್ರಟಿಕ್ ಪ್ರಾಥಮಿಕ ಚುನಾವಣೆಯಲ್ಲಿ ಮಮ್ದಾನಿ ಕ್ಯುಮೊ ಅವರನ್ನು ಸೋಲಿಸಿದ್ದರು. ಈ ವರ್ಷದ ಜೂನ್‌ನಲ್ಲಿ ವಿಜಯಶಾಲಿ ಎಂದು ಘೋಷಿಸಲಾಯಿತು. ಕಾರ್ಮಿಕ ವರ್ಗದ ನ್ಯೂಯಾರ್ಕ್ ನಿವಾಸಿಗಳ

ದೇಶದಲ್ಲಿ ಕಠಿಣ ಆರ್ಥಿಕ

ಜೀವನ ವೆಚ್ಚವನ್ನು ಕಡಿಮೆ ಮಾಡಲು ಜೋಹ್ರಾನ್ ಮಮ್ದಾನಿ ಮೇಯರ್ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದಾರೆ ಎಂದು ಅವರ ಪ್ರಚಾರವು ಯುವ ರಾಜಕಾರಣಿ ಯುವಕರು, ಕಾರ್ಮಿಕ ವರ್ಗದ ನ್ಯೂಯಾರ್ಕರ್‌ಗಳಲ್ಲಿ ಬೆಂಬಲವನ್ನು ಗಳಿಸುತ್ತಲೇ ಇದ್ದರು, ಏಕೆಂದರೆ ಅವರು ದೇಶದಲ್ಲಿ ಕಠಿಣ ಆರ್ಥಿಕ, ರಾಜಕೀಯ ವಾತಾವರಣದ ನಡುವೆ ಹೆಚ್ಚಿನ ವೆಚ್ಚಗಳು, ಉದ್ಯೋಗ ಅಭದ್ರತೆಯ ಹೊರೆಯಿಂದ ತತ್ತರಿಸುತ್ತಿದ್ದಾರೆ. ಮಮ್ದಾನಿಯವರ ಗೆಲುವಿನೊಂದಿಗೆ, ನ್ಯೂಯಾರ್ಕ್ ನಗರ, ಅಮೆರಿಕವು ಹೊಸ ರಾಜಕೀಯ ಮತ್ತು ಸೈದ್ಧಾಂತಿಕ ಯುಗವನ್ನು ಪ್ರವೇಶಿಸಿದವು, ಈಗ ಪ್ರಜಾಪ್ರಭುತ್ವ ಸಮಾಜವಾದಿಗಳು ಬಂಡವಾಳಶಾಹಿಯ ಭದ್ರಕೋಟೆಯ ಚುಕ್ಕಾಣಿ ಹಿಡಿದಿದ್ದಾರೆ. ಮಮ್ದಾನಿ ಉಗಾಂಡಾದ ಕಂಪಾಲಾದಲ್ಲಿ ಹುಟ್ಟಿ ಬೆಳೆದರು, 7 ವರ್ಷದವರಾಗಿದ್ದಾಗ ತಮ್ಮ ಕುಟುಂಬದೊಂದಿಗೆ ನ್ಯೂಯಾರ್ಕ್ ನಗರಕ್ಕೆ ತೆರಳಿದ್ದರು.


### ಟ್ರಂಪ್ ಜೊತೆ ಮೋದಿ ರಹಸ್ಯ ಮಾತುಕತೆ ಪ್ರಧಾನಿ ಮೌನ ಪ್ರಶ್ನಿಸಿದ ಕೈ

**ನವದೆಹಲಿ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಿ ಮೋದಿ ಪರಸ್ಪರ ಆಗಾಗ್ಗೆ ಮಾತನಾಡುತ್ತಾರೆ ಎಂದು ಶ್ವೇತಭವನ ತಿಳಿಸಿದೆ ಆದರೂ ಮೋದಿ ಅವರು ಇದನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿರುವುದು ಏಕೆ ಎಂದು ಕಾಂಗ್ರೆಸ್ ಪ್ರಶ್ನಿಸಿದೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಸಂವಹನ ಉಸ್ತುವಾರಿ, ಜೈರಾಮ್ ರಮೇಶ್ ಅವರು ವಾಷಿಂಗ್ಟನ್‌ನೊಂದಿಗಿನ ಸಂಬಂಧಗಳ ಬಗ್ಗೆ ಪ್ರಧಾನಿಯನ್ನು ಟೀಕಿಸಿದರು ಮತ್ತು ಮೇ 10 ರಂದು ಸಂಜೆ 5.37 ಕ್ಕೆ ಅಮೆರಿಕ ವಿದೇಶಾಂಗ ಕಾರ್ಯದರ್ಶಿಯ ಘೋಷಣೆಯಿಂದ ಮಾತ್ರ ಆಪರೇಷನ್ ಸಿಂಧೂರ್ ಅನ್ನು ನಿಲ್ಲಿಸಲಾಗಿದೆ ಎಂದು ಭಾರತದ ಜನರು ತಿಳಿದುಕೊಂಡರು ಎಂದು ಗಮನಸೆಳೆದರು. ಅಧ್ಯಕ್ಷ ಟ್ರಂಪ್ ಮತ್ತು ಪ್ರಧಾನಿ ಮೋದಿ ವ್ಯಾಪಾರ ಒಪ್ಪಂದದ ಕುರಿತು ಪರಸ್ಪರ ಆಗಾಗ್ಗೆ ಮಾತನಾಡುತ್ತಿದ್ದಾರೆ ಎಂದು ಶ್ವೇತಭವನದ ವಕ್ತಾರೆ ಕ್ಯಾರೋಲಿನ್ ಲೀವಿಟ್ ಅವರಿಂದ ಭಾರತದ ಜನರು ತಿಳಿದುಕೊಂಡಿದ್ದಾರೆ ಎಂದು ರಮೇಶ್ ಎಕ್ಸ್ ಮಾಡಿದ್ದಾರೆ.

ಭಾರತ-ಅಮೆರಿಕ ಸಂಬಂಧದ ಭವಿಷ್ಯದ ಬಗ್ಗೆ ಟ್ರಂಪ್ ತುಂಬಾ ಸಕಾರಾತ್ಮಕ ಮತ್ತು ಬಲವಾಗಿ ಭಾವಿಸುತ್ತಾರೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ಹೇಳಿದ ನಂತರ ಅವರ ಹೇಳಿಕೆಗಳು ಬಂದವು. ಅವರು ಅದರ ಬಗ್ಗೆ ತುಂಬಾ ಸಕಾರಾತ್ಮಕ ಮತ್ತು ಬಲವಾಗಿ ಭಾವಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ನಿಮಗೆ ತಿಳಿದಿರುವಂತೆ, ಅವರು ಇತ್ತೀಚೆಗೆ, ಕೆಲವು ವಾರಗಳ ಹಿಂದೆ, ಓವಲ್ ಕಚೇರಿಯಲ್ಲಿ ದೀಪಾವಳಿ ಆಚರಿಸಿದಾಗ ಪ್ರಧಾನಿ ಅವರೊಂದಿಗೆ ನೇರವಾಗಿ ಮಾತನಾಡಿದರು, ಎಂದು ಲೀವಿಟ್ ಪತ್ರಿಕಾಗೋಷ್ಠಿಯಲ್ಲಿ ಭಾರತ-ಅಮೆರಿಕ ಸಂಬಂಧಗಳ ಭವಿಷ್ಯದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಲೀವಿಟ್ ಹೇಳಿದರು.

## ಕೊಲೆ ಪ್ರಕರಣ: ವೇದಂ ಗಡಿಪಾರಿಗೆ ಕೋರ್ಟ್ ತಡೆ

**ಫಿಲಡೆಲ್ಫಿಯಾ:** ಯಾವುದೇ ತಪ್ಪು ಮಾಡದಿದ್ದರೂ, 43 ವರ್ಷಗಳನ್ನು ಅಮೆರಿಕದ ಜೈಲಿನಲ್ಲಿ ಕಳೆದಿರುವ ಭಾರತ ಮೂಲದ ವೇದಂ ಸುಬ್ರಹ್ಮಣ್ಯಂ ಅವರನ್ನು ಗಡಿಪಾರು ಮಾಡದಂತೆ ಅಮೆರಿಕದ ಎರಡು ನ್ಯಾಯಾಲಯಗಳು ವಲಸೆ ಅಧಿಕಾರಿಗಳಿಗೆ ಆದೇಶಿಸಿವೆ. 64 ವರ್ಷದ ವೇದಂ ಅವರನ್ನು ಲೂಸಿಯಾನದ ಅಲೆಕ್ಸಾಂಡ್ರಿಯಾದಲ್ಲಿರುವ ವಲಸಿಗರ ಬಂಧನ ಕೇಂದ್ರದಲ್ಲಿರಿಸಲಾಗಿದೆ. ಕೊಲೆ ಪ್ರಕರಣವೊಂದರಲ್ಲಿ ಬಂಧನಕ್ಕೆ ಒಳಗಾಗಿದ್ದ ಅವರು ನಾಲ್ಕು ದಶಕಗಳ ಕಾನೂನು ಹೋರಾಟದ ನಂತರ ತಿಂಗಳ ಹಿಂದೆಯಷ್ಟೇ ಜೈಲಿನಿಂದ ಬಿಡುಗಡೆಯಾಗಿದ್ದರು. ಕೊಲೆ ಪ್ರಕರಣದ ಶಿಕ್ಷೆ ರದ್ದುಗೊಂಡ ಕಾರಣ ಅಕ್ಟೋಬರ್ 3ರಂದು ಜೈಲಿನಿಂದ ಹೊರಬಂದಿದ್ದರು.



ವಲಸೆ ಮೇಲ್ಮನವಿ ಬ್ಯೂರೋ ಈ ಪ್ರಕರಣವನ್ನು ಪರಿಶೀಲಿಸಬೇಕೇ ಅಥವಾ ಬೇಡವೇ ಎಂದು ನಿರ್ಧರಿಸುವವರೆಗೆ ಗಡಿಪಾರಿಗೆ ತಡೆ ನೀಡಲಾಗಿದೆ ಎಂದು ನ್ಯಾಯಾಧೀಶರು ತಿಳಿಸಿದರು. ವೇದಂ 9 ತಿಂಗಳ ಮಗುವಾಗಿದ್ದಾಗ ತಂದೆ-ತಾಯಿಯೊಂದಿಗೆ ಕಾನೂನು ಬದ್ಧವಾಗಿ ಅಮೆರಿಕ ಪ್ರವೇಶಿಸಿದ್ದರು. 1980ರಲ್ಲಿ ನಡೆದಿದ್ದ ಸ್ನೇಹಿತನ ಕೊಲೆ ಪ್ರಕರಣ ಒಂದರಲ್ಲಿ ವೇದಂ ಹೆಸರನ್ನೂ ಪೊಲೀಸರು ಆರೋಪ ಪಟ್ಟಿಯಲ್ಲಿ ಸೇರಿಸಿದ್ದರು. ತಾವು ನಿರ್ದೋಷಿ ಎನ್ನುವುದನ್ನು ಸಾಬೀತುಪಡಿಸಲು ಅವರು ನಾಲ್ಕು ದಶಕಗಳ ಹೋರಾಟ ನಡೆಸಿದ್ದರು. 20ವರ್ಷ ವಯಸ್ಸಾಗಿದ್ದಾಗ ವೇದಂ ಅವರ ಮೇಲೆ ಮಾದಕ ವಸ್ತು ಸಾಗಾಟದ ಆರೋಪದಲ್ಲಿ ಪ್ರಕರಣ ದಾಖಲಾಗಿತ್ತು.

**ಕೊಲೆ ಪ್ರಕರಣ ಏನು?:** ಸುಬ್ರಹ್ಮಣ್ಯಂ ವೇದಂ ಥಾಮಸ್ ಕಿನ್ನರ್ ಪೆನ್ಸಿಲ್ವೇನಿಯಾ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ 1980ರಲ್ಲಿ ಸಹಪಾಠಿಗಳಾಗಿದ್ದರು. ಕಿನ್ನರ್ ಕೊಲೆ ಬೆನ್ನಲ್ಲೇ ವೇದಂ ಹೆಸರು ಕೇಳಿಬಂದಿತ್ತು. ಕೊನೆಯ ಬಾರಿ ಕಿನ್ನರ್ ಅವರೊಂದಿಗೆ ಕಾಣಿಸಿಕೊಂಡಿದ್ದು ಸುಬ್ರಹ್ಮಣ್ಯಂ ಎಂದು ಹೇಳಿ ಪೊಲೀಸರು ಅವರನ್ನು ಬಂಧಿಸಿದ್ದರು.

ಈ ವರ್ಷದ ಆಗಸ್ಟ್ ತಿಂಗಳಲ್ಲಿ ವೇದಂ ಪರ ವಕೀಲರು, ಪ್ರಾಸಿಕ್ಯೂಟರ್‌ಗಳು ಎಂದೂ ಬಹಿರಂಗಪಡಿಸದ ಸಾಕ್ಷ್ಯವೊಂದನ್ನು ನ್ಯಾಯಾಲಯದ ಗಮನಕ್ಕೆ ತಂದರು. ಇದನ್ನು ಪರಿಶೀಲಿಸಿದ ನ್ಯಾಯಾಧೀಶರು, ವೇದಂ ಶಿಕ್ಷೆಯನ್ನು ರದ್ದುಗೊಳಿಸುವ ತೀರ್ಮಾನ ಪ್ರಕಟಿಸಿದ್ದರು.

**ಮುಕ್ತಿ ಪಡೆದ ಸಂತಸ**

**ಜೈಲುವಾಸದಿಂದ ಮುಕ್ತಿ ಪಡೆದ ಸಂತಸ ಹೆಚ್ಚು ಸಮಯ ಇರಲಿಲ್ಲ. ಬಂಧನದಿಂದ ಬಿಡುಗಡೆಯಾದ ತಕ್ಷಣವೇ ವಲಸೆ ಅಧಿಕಾರಿಗಳು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು. ಅವರನ್ನು ಗಡಿಪಾರು ಮಾಡುವ ಸಿದ್ಧತೆ ನಡೆಯುತ್ತಿರುವಾಗಲೇ ಇದೀಗ ಎರಡು ನ್ಯಾಯಾಲಯಗಳು ತಡೆ ನೀಡಿವೆ.**

## ಮತಪಟ್ಟಿಯಿಂದ ಒಂದು ಹೆಸರು ತೆಗೆದರೂ ಮೋದಿ ಸರ್ಕಾರ ಪತನ

**ಕೋಲ್ಕತ್ತಾ:** ಚುನಾವಣೆ ನಡೆಯಲಿರುವ ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿ ಕುರಿತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬಿಜೆಪಿ ಚುನಾವಣಾ ಆಯೋಗದ ಮೇಲೆ ಹರಿಹಾಯ್ದಿದ್ದಾರೆ. ರಾಜ್ಯದ ಮತದಾರರ ಪಟ್ಟಿಯಿಂದ ಒಂದೇ ಒಂದು ಮತದಾರರ ಹೆಸರನ್ನು ತೆಗೆದುಹಾಕಿದರೆ, ಮೋದಿ ಸರ್ಕಾರದ ಪತನ ಅನಿವಾರ್ಯ ಎಂದು ಅವರು ಎಚ್ಚರಿಸಿದ್ದಾರೆ.

ರಾಜ್ಯದ ಜನರಿಗೆ ಭರವಸೆ

ಒಂದೇ ಒಂದು ಮಾನ್ಯ ಮತದಾರರ ಹೆಸರನ್ನು ತೆಗೆದುಹಾಕಲಾಗುವುದಿಲ್ಲ ಎಂದು ರಾಜ್ಯದ ಜನರಿಗೆ ಭರವಸೆ ನೀಡಿದ್ದಾರೆ. ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಅವರು ಎಸ್‌ಐಆರ್‌ರನ್ನು ಮೂಕ, ಅದೃಶ್ಯ ವಂಚನೆ ಎಂದು ಕರೆದಿದ್ದಾರೆ. ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗವು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತಿದೆ ಎಂದು ಆರೋಪಿಸಿದ್ದಾರೆ. ತಮ್ಮ ಪಕ್ಷವು ಸ್ಥಾಪಿಸಿರುವ ಸಹಾಯ ಶಿಬಿರಗಳನ್ನು ಉಲ್ಲೇಖಿಸುತ್ತಾ, ಮುಖ್ಯಮಂತ್ರಿ, ನಿಮ್ಮ ಬಳಿ ದಾಖಲೆಗಳಿಲ್ಲದಿದ್ದರೆ, ನಮ್ಮ ಶಿಬಿರಗಳಿಗೆ ಬನ್ನಿ. ನಾವು ಯಾವುದೇ ಬೆಲೆ ತೆತ್ತಾದರೂ ನಿಮಗೆ ಸಹಾಯ ಮಾಡುತ್ತೇವೆ. ಅಗತ್ಯವಿದ್ದರೆ, ನಿಮಗೆ ಸಹಾಯ



ಮಾಡಲು ನಾವು ನಮ್ಮ ಪಾತ್ರೆಗಳನ್ನು ಸಹ ಮಾರಾಟ ಮಾಡುತ್ತೇವೆ ಎಂದು ಹೇಳಿದ್ದಾರೆ. ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮತ್ತು ಅವರ ಸೋದರಳಿಯ ಅಭಿಷೇಕ್ ಕೋಲ್ಕತ್ತಾದಲ್ಲಿ ಎಸ್‌ಐಆರ್ ವಿರುದ್ಧ ಬೃಹತ್ ಮೆರವಣಿಗೆ ನಡೆಸಿದ್ದಾರೆ. ಮೆರವಣಿಗೆ ಮುಗಿದ ನಂತರ ಜನಸಮೂಹವನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ, ನಾವು ನಮ್ಮ ಹೋರಾಟವನ್ನು ಮುಂದುವರಿಸಬೇಕು ಕೇಂದ್ರ ಸಂಸ್ಥೆಗಳಿಗೆ ಭಯಪಡಬೇಡಿ. ಇದೆಲ್ಲವೂ ಚುನಾವಣೆಗಳಿಂದಾಗಿ ನಡೆಯುತ್ತಿದೆ. ಅಗತ್ಯವಿದ್ದರೆ ಕಾನೂನು ಸಹಾಯವನ್ನು ಪಡೆಯಿರಿ. ನಿಮ್ಮ ದೀದಿ ಇಲ್ಲಿದ್ದಾರೆ. ನಾನು ನಿಮ್ಮಗಾಗಿ ಏನು ಬೇಕಾದರೂ ಮಾಡಲು ಸಿದ್ಧ ಅವರು ನಿಮ್ಮನ್ನು ಗಡೀಪಾರು ಮಾಡಲು ಬಲಪ್ರಯೋಗ ಮಾಡಿದರೆ, ಇನ್ನೂ ಅನೇಕರು ಬಲಪ್ರಯೋಗವನ್ನು ಎದುರಿಸಬೇಕಾಗುತ್ತದೆ. ಅಲ್ಪಸಂಖ್ಯಾತರು ಚಿಂತಿಸಬೇಕಾಗಿಲ್ಲ ಎಂದು ಭರವಸೆ ನೀಡಿದ್ದಾರೆ.

### ಕಾರಿನಲ್ಲಿ ಸಾಗಿಸುತ್ತಿದ್ದ 2.14 ಕೋಟಿ ಮೌಲ್ಯದ ಡ್ರಗ್ಸ್ ವಶ, ನಾಲ್ವರ ಬಂಧನ

**ಥಾಣೆ:** ಮಹಾರಾಷ್ಟ್ರದ ಥಾಣೆ ನಗರದಲ್ಲಿ ಕಾರಿನಲ್ಲಿ ಸಾಗಿಸುತ್ತಿದ್ದ 2.14 ಕೋಟಿ ರೂ. ಮೌಲ್ಯದ ಮೆಫೆಡ್ರೋನ್ ವಶಪಡಿಸಿಕೊಂಡಿರುವ ಪೊಲೀಸರು, ಈ ಸಂಬಂಧ ನಾಲ್ವರನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಂಜೆ ಚಾರ್ಯೆ ಪ್ರದೇಶದ ಎಂಟಿಎನ್‌ಎಲ್ ಕಚೇರಿ ಬಳಿಯ ಸ್ಥಳದಲ್ಲಿ ಅನುಮಾನದ ಆಧಾರದ ಮೇಲೆ ಪೊಲೀಸರ ಮಾದಕ ದ್ರವ್ಯ ವಿರೋಧಿ ಘಟಕದ ಅಧಿಕಾರಿಗಳು ಕಾರೊಂದನ್ನು ತಡೆದು ಪರಿಶೀಲನೆ ನಡೆಸಿದ್ದಾರೆ. ಕಾರಿನಿಂದ 1.716 ಕಿಲೋಗ್ರಾಂಗಳಷ್ಟು ಮೆಫೆಡ್ರೋನ್ ವಶಪಡಿಸಿಕೊಂಡಿದ್ದಾರೆ.

ಇದು ನಿಷೇಧಿತ ಸಂಶ್ಲೇಷಿತ ಉತ್ತೇಜಕವಾಗಿದ್ದು, ಇದರ ಮೌಲ್ಯ 2,14,32,000 ರೂ.ಗಳಾಗಿದ್ದು, ವಾಹನವನ್ನು ಸಹ ವಶಪಡಿಸಿಕೊಂಡಿದ್ದಾರೆ ಎಂದು ನೌಪಾಡಾ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪೊಲೀಸರು ಕಾರು ಚಾಲಕ ಇಮ್ರಾನ್ ಅಲಿಯಾಸ್ ಬಚ್ಚು ಕಿಝುರ್ ಖಾನ್ (37), ಉದ್ಯಮಿ ವಕಾಸ್ ಅಬ್ದುಲ್‌ರಬ್ ಖಾನ್ (30), ರೈತ ಟಕುದ್ದೀನ್ ರಫೀಕ್ ಖಾನ್ (30) ಮತ್ತು ಕಾರ್ಮಿಕ ಕಮಲೇಶ್ ಅಜಯ್ ಚೌಹಾಣ್ (23) ಅವರನ್ನು ಬಂಧಿಸಿದ್ದಾರೆ, ಇವರೆಲ್ಲರೂ ಮಧ್ಯಪ್ರದೇಶದವರು ಎಂದು ಅವರು ಹೇಳಿದರು. ಆರೋಪಿಗಳ ವಿರುದ್ಧ ಮಾದಕ ದ್ರವ್ಯಗಳು ಮತ್ತು ಮನೋವಿಕೃತ ವಸ್ತುಗಳ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಅದರ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಗಂಡನನ್ನು ಕೊಂದು ಅಡುಗೆ ಮನೆಯೊಳಗೆ ಹೂತಿಟ್ಟ ಪತ್ನಿ

**ಅಹಮದಾಬಾದ್:** ಪ್ರಿಯತಮನ ಜೊತೆ ಸೇರಿಕೊಂಡು ಗಂಡನನ್ನು ಬರ್ಬರ ಕೊಲೆ ಮಾಡಿರುವ ಪತ್ನಿಯು, ಮೃತದೇಹವನ್ನು ತುಂಡು ತುಂಡಾಗಿಸಿ ಅಡುಗೆ ಮನೆಯಲ್ಲಿ ಹೂತು ಹಾಕಿರುವ ಘಟನೆಯು ಅಹಮದಾಬಾದ್‌ನಲ್ಲಿ ಜರುಗಿದ್ದು, ಬುಧವಾರ ಬೆಳಕಿಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸಿನಿಮಿಯ ಶೈಲಿಯ ಈ ಘಟನೆಯು ಮಲಯಾಳಂ ಸಿನಿಮಾ ದೃಶ್ಯವನ್ನು ನೆನಪಿಗೆ ತರುವಂತಿದೆ ಎಂದಿದ್ದಾರೆ. ಮೇಸ್ತ್ರಿಯಾಗಿ ಕೆಲಸ ಮಾಡುತ್ತಿದ್ದ ಬಿಹಾರ ಮೂಲದ ಸಮೀರ್ ಅನ್ಸಾರಿ ಅವರು 2016ರಲ್ಲಿ ಅಹಮದಾಬಾದ್‌ಗೆ ವಲಸೆ ಬಂದಿದ್ದರು. ರೂಬಿ ಜೊತೆ ಪ್ರೀತಿಸಿ ಮದುವೆಯಾಗಿದ್ದ ಅವರಿಗೆ ಇಬ್ಬರು ಮಕ್ಕಳು ಕೂಡ ಇದ್ದರು ಎಂದು ಹೇಳಿದ್ದಾರೆ. ಕೆಲವು ವರ್ಷಗಳಿಂದ ರೂಬಿಗೆ ಅದೇ ಬಡಾವಣೆಯಲ್ಲಿದ್ದ ಇಮ್ರಾನ್ ವಘೇಲಾ ಎನ್ನುವವನ ಜೊತೆ ಪ್ರೇಮಾಂಕುರವಾಗಿತ್ತು. ಪತ್ನಿಯ ಅಕ್ರಮ ಸಂಬಂಧದ ವಿಷಯ ಅನ್ಸಾರಿಗೆ ತಿಳಿದು, ದಂಪತಿಗಳ ನಡುವೆ ಜಗಳವಾಗಿತ್ತು ಎಂದು ತಿಳಿಸಿದ್ದಾರೆ.

ಕೆಲವು ತಿಂಗಳಿನಿಂದ ಅನ್ಸಾರಿ ನಾಪತ್ತೆಯಾಗಿದ್ದಾರೆ ಎನ್ನುವ ಸುಳಿವಿನ ಆಧಾರದಲ್ಲಿ ತನಿಖೆ ನಡೆಸುತ್ತಿದ್ದ ಪೊಲೀಸರಿಗೆ ಮಂಗಳವಾರ ರಾತ್ರಿ ಅವರ ಮನೆಯ ಅಡುಗೆ ಮನೆಯೊಳಗೆ ಹೂತಿಟಿದ್ದ ಮೃತದೇಹದ ಅವಶೇಷಗಳು ಪತ್ತೆಯಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ವರ್ಷದ ಹಿಂದೆ ರೂಬಿ ಹಾಗೂ ವಘೇಲಾ ಸೇರಿಕೊಂಡು ಅನ್ಸಾರಿಯನ್ನು ಮನೆಯೊಳಗೆ ಕೊಲೆ ಮಾಡಿದ್ದಾರೆ. ಇದಕ್ಕಾಗಿ ವಘೇಲಾ ಅವರ ಇಬ್ಬರು ಸಂಬಂಧಿಕರು ಸಹಾಯ ಮಾಡಿದ್ದಾರೆ.

**ಕೊಲೆ ಮಾಡಿದ ನಂತರ ಅವರ ಮೃತದೇಹವನ್ನು ತುಂಡು ತುಂಡಾಗಿ ಕತ್ತರಿಸಿ, ಅಡುಗೆ ಮನೆಯೊಳಗೆ ಗುಂಡಿ ತೋಡಿ ಹೂತಿಡಲಾಗಿದೆ, ಘಟನೆಯ ನಂತರ ಕೆಲವು ತಿಂಗಳು ಅದೇ ಮನೆಯಲ್ಲಿ ವಾಸವಿದ್ದ ರೂಬಿ, ನಂತರ ತಲೆ ಮರೆಸಿಕೊಂಡಿದ್ದು, ವಘೇಲಾ ಅವರನ್ನು ಬಂಧಿಸಲಾಗಿದೆ. ಅವರು ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.**

## ನಾರಿಯರಿಗೆ ನಗದು ಯೋಜನೆ; ರಾಜ್ಯಗಳ ಬೊಕ್ಕಸಕ್ಕೆ ಹೊರೆ

**ನವದೆಹಲಿ:** ಪ್ರಸಕ್ತ ಆರ್ಥಿಕ ವರ್ಷದ ಮಹಿಳೆಯರಿಗೆ ನೇರ ನಗದು ಯೋಜನೆಗಾಗಿ ದೇಶದ 12 ರಾಜ್ಯಗಳು 1.68 ಲಕ್ಷ ಕೋಟಿಯನ್ನು ಮೀಸಲಿಟ್ಟಿದೆ ಎಂದು ಪಿಆರ್‌ಎಸ್ ಲೆಜಿಸ್ಲೆಟಿವ್ ರಿಸರ್ಚ್ ತನ್ನ ವರದಿಯಲ್ಲಿ ಹೇಳಿದೆ. ಮೂರು ವರ್ಷಗಳ ಹಿಂದೆ ಕೇವಲ 2 ರಾಜ್ಯಗಳು ಮಾತ್ರ ಮಹಿಳೆಯರಿಗೆ ನಗದು ನೀಡುವ ಯೋಜನೆಗಳನ್ನು ಹೊಂದಿದ್ದವು. ಇಂಥ ಸೌಲಭ್ಯ ನೀಡುತ್ತಿರುವ ರಾಜ್ಯಗಳ ಸಂಖ್ಯೆ ಈಗ 12ಕ್ಕೆ ಏರಿಕೆಯಾಗಿದೆ. ಆದರೆ 12ರಲ್ಲಿ ಆರು ರಾಜ್ಯಗಳ ಆದಾಯ ಕೊರತೆಯನ್ನು ಈ ವರ್ಷ ಎದುರಿಸುವುದಾಗಿ ಹೇಳಿಕೊಂಡಿವೆ. ಮಹಿಳಾ ಕೇಂದ್ರಿತ ಕಲ್ಯಾಣ ಯೋಜನೆಗಳು ತ್ವರಿತವಾಗಿ ವಿಸ್ತರಣೆಗೊಳ್ಳುತ್ತಿವೆ. ಇವುಗಳಿಂದ ಬೊಕ್ಕಸಕ್ಕೆ ಹೊರೆಯಾಗುತ್ತಿದೆ ಎಂದು ವರದಿ ಮಾಡಿದೆ. ಷರತ್ತು ರಹಿತ ನಗದು ವರ್ಗಾವಣೆ ಯೋಜನೆಗಳ ಮೂಲಕ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ




ಮಹಿಳೆಯರ ಸಬಲೀಕರಣಕ್ಕೆ ಮಾಸಿಕ ನೇರ ನಗದು ಪಾವತಿ ಸೌಲಭ್ಯಗಳನ್ನು ರಾಜ್ಯಗಳು ಜಾರಿಗೆ ತಂದಿವೆ.

ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ಸರ್ಕಾರಗಳು ತಮ್ಮ ಬಜೆಟ್‌ನಲ್ಲಿ ಮಹಿಳೆಯರಿಗೆ ಮೀಸಲಿಡುವ ಹಣದ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಿವೆ. ಹಿಂದಿನ ಬಜೆಟ್‌ನಲ್ಲಿ ಮಹಿಳೆಯರಿಗೆ ಶೇ. 15ರಷ್ಟು ಮೀಸಲಿಟ್ಟಿದ್ದ ಈ ರಾಜ್ಯಗಳು, ಈಗ ಶೇ. 31ಕ್ಕೆ ಹೆಚ್ಚಿಸಿವೆ. ತಮಿಳುನಾಡಿನ ಕಲೈಗ್ನರ್ ಮಗಳಿರ್ ಉರಿ ತೊಗೈ ತಿಟ್ಟಂ, ಮಧ್ಯಪ್ರದೇಶದ ಲಾಡ್ಲಿ ಬೆಹ್ನಾ ಯೋಜನೆ, ಕರ್ನಾಟಕದ ಗೃಹ ಲಕ್ಷ್ಮಿ ಯೋಜನೆಗಳ ಮೂಲಕ ಸರ್ಕಾರಗಳು ಮಹಿಳೆಯರಿಗೆ ಮಾಸಿಕ 1000ದಿಂದ 1,500 ನಗದು ನೀಡುತ್ತಿವೆ. ಇದು ಒಂದೆಡೆ ಮಹಿಳೆಯರ ಸಬಲೀಕರಣಕ್ಕೆ ರಾಜ್ಯಗಳು ಕೈಗೊಂಡ ಜನಪ್ರಿಯ ಕಾರ್ಯಕ್ರಮಗಳು. ಆದರೆ ಇಂಥ ಯೋಜನೆಗಳು ರಾಜ್ಯಗಳ ಬೊಕ್ಕಸಕ್ಕೆ ದೊಡ್ಡ ಹೊರೆಯಾಗಿವೆ ಎಂದೂ ಈ ವರದಿ ಎಚ್ಚರಿಸಿದೆ. ಮಹಾರಾಷ್ಟ್ರ ಸರ್ಕಾರವು ಏಪ್ರಿಲ್ 2025 ರಲ್ಲಿ ಸಿಎಂ ಲಡ್ಕಿ ಬಹಿನ್ ಯೋಜನೆಯಡಿ ಮಾಸಿಕ ಪಾವತಿಯನ್ನು ಕಡಿತಗೊಳಿಸಿ ತನ್ನ ವಿತ್ತೀಯ ಕೊರತೆಯನ್ನು ಸರಿಪಡಿಸಲು ಪ್ರಯತ್ನಿಸಿತು. ಮತ್ತೊಂದೆಡೆ ಜಾರ್ಖಂಡ್ ಸರ್ಕಾರವು 2024ರ ಕೊನೆಯಲ್ಲಿ ಸಿಎಂ ಮೈಯಾನ್ ಸಮ್ಮಾನ್ ಯೋಜನೆಯಡಿಯಲ್ಲಿ ಪಾವತಿಗಳನ್ನು ತಿಂಗಳಿಗೆ 2,500 ಕ್ಕೆ ಹೆಚ್ಚಿಸಿದೆ.

# ಲೂಯಿವಿಲ್‌ನಲ್ಲಿ ಕಾರ್ಗೋ ವಿಮಾನ ಪತನ 3 ಸಾವು

## ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಮಾಹಿತಿ ನೀಡಿದ ಕೆಂಟಕಿ ಗವರ್ನರ್ ಆಂಡಿ ಬೆಶಿಯರ್

**ಲೂಯಿವಿಲ್:** ಅಮೆರಿಕಾದಲ್ಲಿ ಸರ್ಕಾರಿ ಕಾರ್ಯಾಚರಣೆ ಸ್ಥಗಿತಗೊಂಡಿದ್ದು, ಈಗಾಗಲೇ ಜನ ಕಂಗಾಲಾಗಿದ್ದಾರೆ. ಈಗ ಇದರ ನಡುವೆ ಸರಕುಗಳನ್ನು ಹೊತ್ತು ಸಾಗುತ್ತಿದ್ದ ಯುಪಿಎಸ್ ಕಾರ್ಗೋ ವಿಮಾನ ಪತನಗೊಂಡು 3 ಜನರು ಸಾವನ್ನಪ್ಪಿದ ದುರ್ಘಟನೆ ಸಂಭವಿಸಿದೆ. ಸಂಜೆ, ಕೆಂಟಕಿಯ ಲೂಯಿವಿಲ್ ಮುಹಮ್ಮದ್ ಅಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹವಾಯಿಗೆ ಹೊರಟಿದ್ದ ಮೆಕ್‌ಡೊನೆಲ್ ಡೌಗ್ಲಾಸ್ ಎಂಡಿ -11 ಕಾರ್ಗೋ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆದ ಸ್ವಲ್ಪ ಹೊತ್ತಿನಲ್ಲೇ ವಿಮಾನ ಹೊತ್ತಿ ಉರಿದು ಪತನಗೊಂಡಿದೆ, ಇದರಿಂದ ದಟ್ಟ ಕಪ್ಪು ಹೊಗೆ ಆಕಾಶದೆತ್ತರಕ್ಕೆ ಹಬ್ಬಿದೆ. ಇನ್ನು ಈ ದುರಂತದಲ್ಲಿ 3 ಸಿಬ್ಬಂದಿ ಸಾವನ್ನಪ್ಪಿದ್ದು, 11ಜನರು ಗಾಯಗೊಂಡಿದ್ದಾರೆ.

**ಸ್ಥಳಿಯರ ಕ್ಯಾಮೆರದಲ್ಲಿ ವಿಡಿಯೋ ಸರೆ:** ಸ್ಥಳಿಯರ ಕ್ಯಾಮೆರಾದಲ್ಲಿ ವಿಡಿಯೋದಲ್ಲಿ ವಿಮಾನ ಹಾರಾಟ ಆರಂಭಿಸುವಾಗ ಅದರ ಎಡಭಾಗದ ಇಂಜಿನ್ ಬೆಂಕಿಯಿಂದ ಹೊತ್ತಿ ಉರಿಯುತ್ತಿರುವುದು ಕಂಡುಬಂದಿದೆ. ಇದಾದ ಕೆಲವೇ ಕ್ಷಣಗಳಲ್ಲಿ ವಿಮಾನ ನೆಲಕ್ಕಪ್ಪಳಿಸಿದ್ದು, ವಿಮಾನ ಸ್ಪೋಟಗೊಂಡು, ಬೆಂಕಿಯ ಕೆನ್ನಾಲಿಗೆ ಆಗಸದೆತ್ತರಕ್ಕೆ ಚಿಮ್ಮಿದೆ. ಈ ದುರ್ಘಟನೆ ಅಮೆರಿಕದ ಕಾಲಮಾನ ಸುಮಾರು ಸಂಜೆ 5:15 ರ ಸುಮಾರಿಗೆ ಸಂಭವಿಸಿದೆ ಎಂದು ಫೆಡರಲ್ ವಿಮಾನಯಾನ ಆಡಳಿತ ತಿಳಿಸದೆ. ಇನ್ನು ವಿಮಾನ

11 ಜನರಿಗೆ ಗಾಯ



ಪತನಕ್ಕೆ ಕಾರಣವನ್ನು ನ್ಯಾಷನಲ್ ಟ್ರಾನ್ಸ್‌ಪೋರ್ಟೇಷನ್ ಸೇಫ್ಟಿ ಬೋರ್ಡ್ ತನಿಖೆ ನಡೆಸಲಿದೆ.

**ದುರಂತದ ವಿಡಿಯೋಗಳನ್ನು ನೋಡಿದವರಿಗೆ ಇದರ ಭೀಕರತೆ ಅರಿವಾಗುತ್ತದೆ. ನಾವು ಕಳೆದುಕೊಂಡ ಕೆಂಟಕಿ ಜನತೆ ಅಥವಾ ಇತರರ ಸಾವಿನ ಸಂಖ್ಯೆ ಸಾಧ್ಯವಾದಷ್ಟು ಕಡಿಮೆ ಇರಲಿ ಎಂದು ಪ್ರಾರ್ಥಿಸೋಣ.**

**-ಬೆಶಿಯರ್**

**ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದ ಕೆಂಟುಕಿ ಗವರ್ನರ್:** ಇನ್ನು, ಈ ಘಟನೆಯ ಕುರಿತು ಮಾಹಿತಿ ನೀಡಿರುವ ಕೆಂಟಕಿ ಗವರ್ನರ್ ಆಂಡಿ ಬೆಶಿಯರ್ ಈ ದುರಂತದಲ್ಲಿ ಕನಿಷ್ಠ ಮೂವರು ಮೃತಪಟ್ಟಿರುವುದಾಗಿ ಮತ್ತು 11 ಮಂದಿ ಗಾಯಗೊಂಡಿರುವುದಾಗಿ ಖಚಿತಪಡಿಸಿದ್ದಾರೆ. ಗಾಯಗೊಂಡವರಲ್ಲಿ ಕೆಲವರು ಗಂಭೀರವಾಗಿ ಗಾಯಗೊಂಡಿದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

**ವಿಮಾನ ದುರಂತದ ಕುರಿತು ಮೊದಲೇ ಎಚ್ಚರಿಕೆ ನೀಡಿದ್ದ ಸಾರಿಗೆ ಕಾರ್ಯದರ್ಶಿ ಸೀನ್ ಡಫಿ:** ಅಮೆರಿಕಾದಲ್ಲಿ ಸರ್ಕಾರಿ ಕಾರ್ಯಾಚರಣೆ ಸ್ಥಗಿತಗೊಂಡಿದ್ದು, ಇದು ವಿಮಾನಯಾನ ಕಾರ್ಯಾಚರಣೆಗಳಿಗೆ ಅಡ್ಡಿಯುಂಟು ಮಾಡಿದೆ. ಈ ಕುರಿತು ಹಿಂದೆಯೇ ಸಾರಿಗೆ ಕಾರ್ಯದರ್ಶಿ ಸೀನ್ ಡಫಿ, ವಿಮಾನ ಸಂಚಾರ ನಿಯಂತ್ರಣ ಸಿಬ್ಬಂದಿ ಕೊರತೆಯಿಂದಾಗಿ ಭಾರಿ ಗೊಂದಲ ಉಂಟಾಗಬಹುದು, ಸರ್ಕಾರದ ಈ ನಿರ್ಧಾರದಿಂದ ವಿಮಾನ ಸಂಚಾರ ನಿಯಂತ್ರಣಾಧಿಕಾರಿಗಳ ಕೊರತೆ ಉಂಟಾಗಲಿದ್ದು, ನಾವು ಕೆಲವು ವಾಯುಪ್ರದೇಶಗಳನ್ನು ಮುಚ್ಚಬೇಕಾಗಬಹುದು ಎಂದು ಮುನ್ನೆಚ್ಚರಿಕೆ ನೀಡಿದ್ದರು.

ಇನ್ನು, ಈ ಮಾತು ಸಾಬೀತಾಗುವಂತೆ ಈಗ ಕಾರ್ಗೋ ವಿಮಾನ ಪತನಗೊಂಡಿದೆ. ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಡಫಿ ಅಪಘಾತದ ದೃಶ್ಯಗಳನ್ನು ಹೃದಯವಿದ್ರಾವಕ ಎಂದು ಬಣ್ಣಿಸಿದ್ದು, ದಯವಿಟ್ಟು ಈ ಭಯಾನಕ ಅಪಘಾತದಿಂದ ಆಘಾತಕ್ಕೊಳಗಾದ ಲೂಯಿವಿಲ್ ಜನತೆ, ವಿಮಾನ ದುರಂತದಲ್ಲಿ ಗಾಯಗೊಂಡ ಸಿಬ್ಬಂದಿಗಾಗಿ ಪ್ರಾರ್ಥಿಸೋಣ ಎಂದು ಬರೆದುಕೊಂಡು ತಮ್ಮ ಸಂತಾಪ ಸೂಚಿಸಿದ್ದಾರೆ.

**ಸರಕು ಸಾಗಿಸುವ ಕಾರ್ಯ**

**ಲೂಯಿವಿಲ್ ಯುಪಿಎಸ್‌ನ ಪ್ರಮುಖ ಅಮೆರಿಕಾದ ವಿಮಾನ ಕೇಂದ್ರವಾಗಿದೆ. ಯುಪಿಎಸ್ ಪ್ರತಿದಿನ ಸುಮಾರು 2,000 ವಿಮಾನಗಳನ್ನು 200ಕ್ಕೂ ಹೆಚ್ಚು ಪ್ರದೇಶಗಳಿಗೆ ಸರಕು ಸಾಗಿಸುವ ಕಾರ್ಯ ನಿರ್ವಹಿಸುತ್ತದೆ. ಈ ಲಾಜಿಸ್ಟಿಕ್ಸ್ ದೈತ್ಯ ಸಂಸ್ಥೆಯು 516 ವಿಮಾನಗಳ ಫ್ಲೀಟ್ ಹೊಂದಿದೆ. ಇದರಲ್ಲಿ 294 ವಿಮಾನಗಳು ಸ್ವಂತವಾಗಿದ್ದು, ಉಳಿದವು ಗುತ್ತಿಗೆ, ಚಾರ್ಟರ್ ಮೂಲಕ ಪಡೆದ ವಿಮಾನಗಳಾಗಿವೆ. ಇಂತಹ ವಿಮಾನಯಾನದಲ್ಲಿ ಭೀಕರ ದುರಂತ ಸಂಭವಿಸಿದ್ದು, ತನಿಖೆ ಬಳಿಕ ಪತನಕ್ಕೆ ನಿಖರವಾದ ಕಾರಣ ಹೊರ ಬೀಳಲಿದೆ.**



## ಹೊಸ ಸಿನಿಮಾ ಕುಸಿದ ಎಪಿಕ್

ಎಸ್.ಎಸ್. ರಾಜಮೌಳಿ ನಿರ್ದೇಶನದ 'ಬಾಹುಬಲಿ: ದಿ ಎಪಿಕ್' ಮರು-ಬಿಡುಗಡೆ ಆರಂಭದಲ್ಲಿ ಉತ್ತಮಗಳಿಕೆ ಕಂಡರೂ, ಈಗ ತೀವ್ರ ಕುಸಿತ ಕಂಡಿದೆ. ಇತ್ತೀಚೆಗೆ ಕೇವಲ 13 ಲಕ್ಷ ರೂ. ಗಳಿಸಿದ್ದು, ರಾತ್ರಿ ವೇಳೆಗೆ 1 ಕೋಟಿ ರೂ. ಒಳಗೆ ಕಲೆಕ್ಷನ್ ಮಾಡುವ ಸಾಧ್ಯತೆಯಿದೆ. ಈ ಸಿನಿಮಾ ಒಟ್ಟಾರೆ 27 ಕೋಟಿ ರೂ. ಗಳಿಕೆ ಮಾಡಿದೆ.

ಎಸ್‌ಎಸ್ ರಾಜಮೌಳಿ ನಿರ್ದೇಶನ ಮಾಡಿದ 'ಬಾಹುಬಲಿ' ಸಿನಿಮಾ ರಿಲೀಸ್ ಆಗಿ 10 ವರ್ಷಗಳು ಕಳೆದಿವೆ. ಈ ಹಿನ್ನೆಲೆಯಲ್ಲಿ ಮೊದಲ ಭಾಗ ಹಾಗೂ ಎರಡನೇ ಭಾಗ ಸೇರಿ 'ಬಾಹುಬಲಿ: ದಿ ಎಪಿಕ್' ಎಂದು ಮಾಡಿ ರಿಲೀಸ್ ಮಾಡಲಾಯಿತು. ಈ ಚಿತ್ರ ಮೊದಲ ಕೆಲವು ದಿನ ಒಳ್ಳೆಯ ಕಲೆಕ್ಷನ್ ಮಾಡಿತು. ಆದರೆ, ಈಗ ಚಿತ್ರದ ಗಳಿಕೆಯಲ್ಲಿ ಸಾಕಷ್ಟು ಕುಸಿತ ಕಂಡಿದೆ. ಬುಧವಾರ (ನವೆಂಬರ್ 4) ಈ ಸಿನಿಮಾ ಕೇವಲ 13 ಲಕ್ಷ ರೂಪಾಯಿ ಗಳಿಕೆ ಮಾಡಿದೆ. ರಾತ್ರಿ ವೇಳೆಗೆ ಈ ಚಿತ್ರದ ಗಳಿಕೆ ಕೋಟಿ ಒಳಗೆ ಇರಲಿದೆ ಎನ್ನಲಾಗುತ್ತಿದೆ.

'ಬಾಹುಬಲಿ' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ 650 ಕೋಟಿ ರೂಪಾಯಿ ಹಾಗೂ 'ಬಾಹುಬಲಿ 2' ಸಿನಿಮಾ ವಿಶ್ವ ಬಾಕ್ಸ್ ಆಫೀಸ್‌ನಲ್ಲಿ 1800 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. ಈಗ ರಾಜಮೌಳಿ ಅವರು ಎರಡೂ ಸಿನಿಮಾಗಳನ್ನು ಸೇರಿಸಿ 'ಬಾಹುಬಲಿ ದಿ ಎಪಿಕ್' ಸಿನಿಮಾ ಮಾಡಿದರು. ಈ ಸಿನಿಮಾ ಮೊದಲ ಕೆಲವು ದಿನ ಒಳ್ಳೆಯ ಕಲೆಕ್ಷನ್ ಮಾಡಿತು. ಆದರೆ, ಈಗ ಚಿತ್ರದ ಗಳಿಕೆ ತಗ್ಗಿದೆ. 'ಬಾಹುಬಲಿ: ದಿ ಎಪಿಕ್' ಚಿತ್ರದ ಅವಧಿ ಮೂರು ಗಂಟೆ 44 ನಿಮಿಷ. ಇದು ತುಂಬಾನೇ ದೀರ್ಘ ಸಮಯ. ನೋಡಿದ ಚಿತ್ರಕ್ಕೆ ಮತ್ತೆ ಇಷ್ಟು ದೀರ್ಘ ಸಮಯ ವ್ಯಯಿಸಬೇಕು ಎಂದರೆ ಅದು ದೊಡ್ಡ ಚಾಲೆಂಜ್. ಹೀಗಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಜನ ಸಿನಿಮಾ ನೋಡದಿರಲು ಇದೂ ಒಂದು ಕಾರಣ ಇರಬಹುದು. ಸದ್ಯ ಈ ಸಿನಿಮಾದ ಒಟ್ಟಾರೆ ಗಳಿಕೆ 27 ಕೋಟಿ ರೂಪಾಯಿ ಆಗಿದೆ. ಬಾಹುಬಲಿ ಸಿನಿಮಾ ರಿಲೀಸ್ ಆಗಿದ್ದು ಅಕ್ಟೋಬರ್ 31ರಂದು. ಈ ವೇಳೆ 9.65 ಕೋಟಿ ರೂಪಾಯಿ ಗಳಿಕೆ ಮಾಡಿತು.

**ಕೇವಲ 1 ಕೋಟಿ ರೂ. ಗಳಿಕೆ**

## ಬಾಲಿವುಡ್‌ಗೆ ಬಲ್ಲಾಳದೇವ



ರಾಣಾ ದಗ್ಗುಬಾಟಿ ದಕ್ಷಿಣ ಭಾರತದ ಬಲು ಜನಪ್ರಿಯ ನಟ. ಒಳ್ಳೆಯ ನಟರಾಗಿರುವ ಜೊತೆಗೆ ಉದ್ಯಮಿಯೂ ಆಗಿರುವ ರಾಣಾ ದಗ್ಗುಬಾಟಿ ಹಲವು ಉದ್ಯಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇದೀಗ ರಾಣಾ ದಗ್ಗುಬಾಟಿ ಅವರು ಸಿನಿಮಾ ನಿರ್ಮಾಪಕನಾಗಿ ಬಾಲಿವುಡ್‌ಗೆ ಕಾಲಿಟ್ಟಿದ್ದು, ವಿಶೇಷ ಕತೆಯೊಂದನ್ನು ಸಿನಿಮಾಕ್ಕಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ನಿರ್ದೇಶನಕ್ಕೆ ಹಾಲಿವುಡ್ ತಂತ್ರಜ್ಞರ ಕರೆ ತಂದಿದ್ದಾರೆ. ರಾಣಾ ದಗ್ಗುಬಾಟಿ ತೆಲುಗು ಚಿತ್ರರಂಗದ ಸ್ಟಾರ್ ನಟರುಗಳಲ್ಲಿ ಒಬ್ಬರು. 'ಬಾಹುಬಲಿ' ಸಿನಿಮಾದ ಅವರ ಬಲ್ಲಾಳದೇವ ಪಾತ್ರ ಮರೆಯಲಾಗದು. ನಟರಾಗಿರುವ ರಾಣಾ ದಗ್ಗುಬಾಟಿ ಒಳ್ಳೆಯ ಉದ್ಯಮಿಯೂ ಹೌದು. ನಟನಾಗುವ ಮುಂಚೆಯೇ ಸ್ಪಿರಿಟ್ ಹೆಸರಿನ ನಿರ್ಮಾಣ ಸಂಸ್ಥೆ ಪ್ರಾರಂಭಿಸಿದ್ದ ರಾಣಾ ದಗ್ಗುಬಾಟಿ, ವಿಎಫ್‌ಎಕ್ಸ್ ಸ್ಟುಡಿಯೋ ಸಹ ಪ್ರಾರಂಭಿಸಿದ್ದರು. ನಟನೆ ಜೊತೆಗೆ ಸಿನಿಮಾದ ಹಲವು ವಿಭಾಗಗಳ ಉದ್ಯಮ ಹೊಂದಿರುವ ರಾಣಾ ದಗ್ಗುಬಾಟಿ ಇದೀಗ ಬಾಲಿವುಡ್ ಸಿನಿಮಾ ನಿರ್ಮಾಣಕ್ಕೆ ಮುಂದಾಗಿದ್ದಾರೆ. ರಾಮಾ ನಾಯ್ಡು ಸ್ಟುಡಿಯೋದ ಉದ್ಯಮ, ನಿರ್ಮಾಣ ಕಾರ್ಯಗಳನ್ನು ನೋಡಿಕೊಳ್ಳುತ್ತಲೇ ತಮ್ಮ ಸ್ಪಿರಿಟ್ ಮೀಡಿಯಾ ಸಂಸ್ಥೆಯಿಂದಲೂ ಸಿನಿಮಾ ನಿರ್ಮಾಣವನ್ನು ರಾಣಾ ದಗ್ಗುಬಾಟಿ ಆರಂಭಿಸಿದ್ದಾರೆ. ದುಲ್ಕರ್ ಸಲ್ಮಾನ್ ನಟನೆಯ 'ಕಾಂತಾ' ಹೆಸರಿನ ಸಿನಿಮಾ ಅನ್ನು ರಾಣಾ ದಗ್ಗುಬಾಟಿ ನಿರ್ಮಾಣ ಮಾಡುತ್ತಿದ್ದಾರೆ. 'ಕಾಂತಾ' ಸಿನಿಮಾ ಬಿಡುಗಡೆಗೆ ಮುಂಚೆಯೇ ರಾಣಾ ದಗ್ಗುಬಾಟಿ ಸ್ಪಿರಿಟ್ ಮೀಡಿಯಾದ ಹೊಸ ಪ್ರಾಜೆಕ್ಟ್ ಘೋಷಣೆ ಮಾಡಿದ್ದಾರೆ. ರಾಣಾ ದಗ್ಗುಬಾಟಿ ಈಗಾಗಲೇ ಹಲವು ಬಾಲಿವುಡ್ ಸಿನಿಮಾಗಳಲ್ಲಿ ತಮ್ಮನ್ನು ಉದ್ಯಮಿಯಾಗಿ ತೊಡಗಿಸಿಕೊಂಡಿದ್ದಾರೆ. ವಿತರಣೆ, ಪ್ರಚಾರ ಇನ್ನೂ ಕೆಲವು ಕಾರ್ಯಗಳಲ್ಲಿ ರಾಣಾ ದಗ್ಗುಬಾಟಿ ಹಿಂದಿಯ ಸಾಕಷ್ಟು ಪ್ರಾಜೆಕ್ಟ್ ಮಾಡಿದ್ದಾರೆ.

**'ಕಾಂತಾ' ಹೆಸರಿನ ಸಿನಿಮಾ**



## ರುಕ್ಮಿಣಿ ರಾಧಾಕೃಷ್ಣ ಸಿನಿಮಾದಲ್ಲಿ ಬಿಗ್ ಬಾಸ್ ಮೋಕ್ಷಿತಾ

'ಬಿಗ್ ಬಾಸ್' ರಿಯಾಲಿಟಿ ಶೋನಲ್ಲಿ ಸ್ಪರ್ಧಿಸಿದವರಿಗೆ ಸಿನಿಮಾ ಅವಕಾಶಗಳು ಕೂಡ ಸಿಗುತ್ತವೆ. ನಟಿ ಮೋಕ್ಷಿತಾ ಪೈ ಅವರು 'ಬಿಗ್ ಬಾಸ್ ಕನ್ನಡ ಸೀಸನ್ 11' ಸ್ಪರ್ಧಿ ಆಗಿದ್ದರು. ಈಗ ಅವರು ಹೊಸ ಸಿನಿಮಾ ಒಪ್ಪಿಕೊಂಡಿದ್ದಾರೆ. 'ರುಕ್ಮಿಣಿ ರಾಧಾಕೃಷ್ಣ' ಎಂಬುದು ಈ ಸಿನಿಮಾದ ಶೀರ್ಷಿಕೆ. ಇತ್ತೀಚೆಗೆ ಈ ಸಿನಿಮಾದ ಮುಹೂರ್ತ ಸಮಾರಂಭ ನಡೆಯಿತು. ಈ ಸಿನಿಮಾದಲ್ಲಿ ಭರತ್ ಕುಮಾರ್ ಅವರು ಹೀರೋ ಆಗಿ ನಟಿಸುತ್ತಿದ್ದಾರೆ. ಮೋಕ್ಷಿತಾ ಪೈ ಜೊತೆ ರಿಯಾ ಸಚ್‌ದೇವ್ ಕೂಡ ನಾಯಕಿ ಆಗಿದ್ದಾರೆ. ಪ್ರಾಣ್ ಸುವರ್ಣ ಅವರು 'ರುಕ್ಮಿಣಿ ರಾಧಾಕೃಷ್ಣ' ಸಿನಿಮಾಗೆ ನಿರ್ದೇಶನ ಮಾಡುತ್ತಿದ್ದಾರೆ. ಕಳೆದ 14 ವರ್ಷಗಳಿಂದ ಚಿತ್ರರಂಗದಲ್ಲಿ ಪ್ರಾಣ್ ಸುವರ್ಣ ಅವರು ಆಕ್ಟೀವ್ ಆಗಿದ್ದಾರೆ. ಸಹ-ನಿರ್ದೇಶಕನಾಗಿ ಮತ್ತು ಬರಹಗಾರನಾಗಿ ಕೆಲಸ ಮಾಡಿ ಅನುಭವ ಪಡೆದಿದ್ದಾರೆ. ಸ್ವತಂತ್ರ ನಿರ್ದೇಶಕನಾಗಿ ಪ್ರಾಣ್ ಸುವರ್ಣ ಅವರ ಚೊಚ್ಚಲ ಸಿನಿಮಾ 'ರುಕ್ಮಿಣಿ ರಾಧಾಕೃಷ್ಣ'. ನಟ ಭರತ್ ಕುಮಾರ್ ಅವರು ಈಗಾಗಲೇ ಬಿಡುಗಡೆಗೆ ಸಿದ್ಧವಾಗಿರೋ 'ಮೆಜೆಸ್ಟಿಕ್ 2' ಸಿನಿಮಾದಲ್ಲಿ ಅಭಿನಯಿಸಿದ್ದಾರೆ.

ಈಗ ಅವರು 'ರುಕ್ಮಿಣಿ ರಾಧಾಕೃಷ್ಣ' ಸಿನಿಮಾವನ್ನು ಕೈಗೆತ್ತಿಕೊಂಡಿದ್ದಾರೆ. ಅವರಿಗೆ ಜೋಡಿಯಾಗಿ ಮೋಕ್ಷಿತಾ ಪೈ ಮತ್ತು ರಿಯಾ ಸಚ್‌ದೇವ್ ಅವರು ಅಭಿನಯಿಸಲಿದ್ದಾರೆ.

**ಕೆಲಸ ಮಾಡಿ ಅನುಭವ**

## ಟಾಕ್ಸಿಕ್ ನಟಿಯ ಮಾತು



ರಾಕಿಂಗ್ ಸ್ಟಾರ್ ಯಶ್ ಹೊರತು ಪಡಿಸಿ ಟಾಕ್ಸಿಕ್ ಸಿನಿಮಾದ ತಾರಾಗಣದ ಕುರಿತು ಈವರೆಗೂ ಯಾವುದೇ ಅಧಿಕೃತ ಮಾಹಿತಿ ಹೊರಬಿದ್ದಿಲ್ಲ. ಕಲಾವಿದರೂ ಟಾಕ್ಸಿಕ್ ಕುರಿತಾಗಿ ಮಾತನಾಡಿರಲಿಲ್ಲ. ಆದರೀಗ ಮೊದಲ ಬಾರಿಗೆ ಚಿತ್ರದ ಓರ್ವ ನಾಯಕಿ ಟಾಕ್ಸಿಕ್ ಕುರಿತಾಗಿ ಮಾತನಾಡಿದ್ದಾರೆ. ಈ ಮೂಲಕ ಈಕೆ ನಟಿಸಿರುವ ಗುಮಾನೆಗೆ ಅಧಿಕೃತ ಮುದ್ರೆ ಒತ್ತಿದ್ದಾರೆ. ಆಕೆಯೇ ನಟಿ ಹ್ಯೂಮಾ ಖುರೇಶಿ.

ಟಾಕ್ಸಿಕ್‌ನಲ್ಲಿ ಭರ್ತಿ ಅರ್ಧ ಡಜನ್ ಖ್ಯಾತ ನಟಿಯರು ನಟಿಸಿರುವ ಸುದ್ದಿ ಇದೆ. ಆ ಲಿಸ್ಟ್‌ನಲ್ಲಿ ಹ್ಯೂಮಾ ಖುರೇಶಿ ಕೂಡ ಇದ್ದಾರೆ. ಇದೀಗ ಹ್ಯೂಮಾ ಮೊದಲ ಬಾರಿಗೆ ಅಧಿಕೃತವಾಗಿ ತಾವು ಟಾಕ್ಸಿಕ್ ಸಿನಿಮಾದಲ್ಲಿ ನಟಿಸಿರುವ ಬಗ್ಗೆ ಹೇಳಿಕೊಂಡಿದ್ದಾರೆ. ಯುಟ್ಯೂಬ್ ವಾಹಿನಿಯ ಸಂದರ್ಶನವೊಂದಕ್ಕೆ ಮಾತನಾಡುತ್ತಾ ಟಾಕ್ಸಿಕ್ ನನ್ನ ಮುಂಬರುವ ದೊಡ್ಡ ಸಿನಿಮಾ ಪ್ರಾಜೆಕ್ಟ್ ಎಂದಿದ್ದಾರೆ. ಯಶ್ ಬಗ್ಗೆ ಮಾತನಾಡಿರುವ ಹ್ಯೂಮಾ, ಯಶ್ ಅವರಂತಹ ಸೂಪರ್‌ಸ್ಟಾರ್, ಗೀತು ಮೋಹನ್‌ದಾಸ್ ಅವರಂತಹ ಸಮರ್ಥ ನಿರ್ದೇಶಕಿಯ ಜೊತೆ ಕೆಲಸ ಮಾಡುವ ಅವಕಾಶ ನನಗೆ ಸಿಕ್ಕಿದ್ದು ನನ್ನ ಪುಣ್ಯ. ಟಾಕ್ಸಿಕ್ ಅದ್ಭುತ ಅನುಭವವನ್ನು ನನಗೆ ನೀಡಿದೆ. ಅಸಾಮಾನ್ಯ, ಅನನ್ಯವಾದ ಲೋಕವನ್ನು ಟಾಕ್ಸಿಕ್‌ನಲ್ಲಿ ಸೃಷ್ಟಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

**ಅವಕಾಶ ಸಿಕ್ಕಿದ್ದು ನನ್ನ ಪುಣ್ಯ**

## ಅಬ್ಬಬ್ಬಾ ಧನ್ಯ ಇಷ್ಟೊಂದ್ ಹಾಟಾ



ಸ್ಯಾಂಡಲ್‌ವುಡ್ ನಟಿ ಧನ್ಯ ರಾಮ್ ಕುಮಾರ್ ಇದೀಗ ಸೋಶಿಯಲ್ ಮೀಡಿಯಾದಲ್ಲಿ ಹಲ್‌ಚಲ್ ಸೃಷ್ಟಿಸುವ ಫೋಟೊ ಪೋಸ್ಟ್ ಮಾಡಿದ್ದಾರೆ.

ಮಾಲ್ಡೀವ್ಸ್‌ನಲ್ಲಿ ಸಮುದ್ರದ ಮಧ್ಯೆ ನಿಂತು ಸಖತ್ ಹಾಟ್ ಪೋಸ್ ಕೊಟ್ಟಿದ್ದಾರೆ. ಮಲ್ಡೀವ್ಸ್ ಪ್ರವಾಸದ ಫೋಟೋ ಡಂಪ್ ಮಾಡಿರುವ ಧನ್ಯ ರಾಮ್ ಕುಮಾರ್ ನೀಲಿ ಬಣ್ಣದ ಧಿರಿಸಿನಲ್ಲಿ ಮನಮೋಹಕ ಲುಕ್‌ನೊಂದಿಗೆ ಕಂಗೊಳಿಸಿದ್ದಾರೆ. ಧನ್ಯ ಪೋಸ್ಟ್ ಮಾಡಿರುವ ಫೋಟೊಗೆ ಭಾರೀ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಅಭಿಮಾನಿಗಳು ಬೆಂಕಿ ಎಂದು ಕಾಮೆಂಟ್ ಮಾಡುತ್ತಿದ್ದಾರೆ. ಸಿಕ್ಕಾಪಟ್ಟೆ ಹಾಟ್ ಆಗಿ ಧನ್ಯ ಕಾಣಿಸ್ಕೊಂಡಿದ್ದಾರೆ. ಕನ್ನಡ ಸಿನಿಮಾಗಳಲ್ಲಿ ಬ್ಯುಸಿಯಾಗಿರುವ ಧನ್ಯ ಆಗಾಗ ತಾಯಿ ಜೊತೆ ಹೆಚ್ಚೆಚ್ಚು ಪ್ರವಾಸಕ್ಕೆ ಹೋಗುತ್ತಿರುತ್ತಾರೆ. ಇತ್ತೀಚೆಗಷ್ಟೇ ಮಾಲ್ಡೀವ್ಸ್ ಪ್ರವಾಸಕ್ಕೆ ತೆರಳಿದ್ದ ಧನ್ಯ ಅಲ್ಲಿ ಕ್ಯಾಪ್ಚರ್ ಮಾಡಿರುವ ಫೋಟೋಗಳನ್ನ ಇನ್ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ.

## 16 ದಿನಗಳಲ್ಲಿ ಭಾರತ ಮತ್ತು ಪಾಕಿಸ್ತಾನ ನಾಲ್ಕು ಬಾರಿ ಮುಖಾಮುಖಿ



**ಹಾಂಗ್ ಕಾಂಗ್ ಸಿಕ್ಸಸ್‌ನಲ್ಲಿ ಮೊದಲ ಹಣಾಹಣಿ**

2025 ರ ಏಷ್ಯಾಕಪ್‌ನಲ್ಲಿ ಭಾರತ ಹಾಗೂ ಪಾಕಿಸ್ತಾನ ತಂಡಗಳು ಮೂರು ಬಾರಿ ಮುಖಾಮುಖಿಯಾಗಿದ್ದವು. ಈ ಮೂರು ಪಂದ್ಯಗಳಲ್ಲೂ ಭಾರತವೇ ಗೆದ್ದಿತ್ತು. ಇದೀಗ ಭಾರತ ಮತ್ತು ಪಾಕಿಸ್ತಾನ ಕ್ರಿಕೆಟ್ ಅಂಗಳದಲ್ಲಿ ಮತ್ತೊಮ್ಮೆ ಕಾದಾಡಲು ಕಣಕ್ಕಿಳಿಯಲಿವೆ. ಅದು ಒಂದೆರಡು ಬಾರಿಯಲ್ಲ. ಬದಲಿಗೆ ಕೆಲವೇ ದಿನಗಳ ಅಂತರದಲ್ಲಿ ನಾಲ್ಕು ಬಾರಿ ಮುಖಾಮುಖಿಯಾಗುತ್ತಿವೆ. ಭಾರತ ಹಾಗೂ ಪಾಕಿಸ್ತಾನ ಪಂದ್ಯಕ್ಕಾಗಿ ವರ್ಷಗಟ್ಟಲೇ ಕಾದುಕುಳಿತುಕೊಳ್ಳಬೇಕಾದ ಸ್ಥಿತಿ ಇದೆ. ಏಕೆಂದರೆ ಈ ಎರಡು ತಂಡಗಳು ಐಸಿಸಿ ಈವೆಂಟ್‌ನಲ್ಲಿ ಮಾತ್ರ ಪರಸ್ಪರ ಪಂದ್ಯವನ್ನಾಡುತ್ತವೆ. ಅಂತಹದರಲ್ಲಿ ಇದೀಗ ಈ ಎರಡು ದೇಶಗಳ ಕ್ರಿಕೆಟ್ ತಂಡಗಳು ಕೇವಲ 16 ದಿನಗಳ ಅಂತರದಲ್ಲಿ 4 ಬಾರಿ ಮುಖಾಮುಖಿಯಾಗಲಿವೆ.

ಮೊದಲಿಗೆ ಉಭಯ ತಂಡಗಳು ಹಾಂಗ್ ಕಾಂಗ್ ಸಿಕ್ಸಸ್ ಪಂದ್ಯಾವಳಿಯಲ್ಲಿ ಪಂದ್ಯವನ್ನಾಡಲಿವೆ. ಈ ಪಂದ್ಯ ನವೆಂಬರ್ 7, 2025 ರಂದು ಹಾಂಗ್ ಕಾಂಗ್‌ನಲ್ಲಿ ನಡೆಯಲಿದೆ. ಇದು 6 ಓವರ್‌ಗಳ ಸ್ವರೂಪವಾಗಿರುವ ಕಾರಣ ಎರಡು ತಂಡಗಳ ಆಟಗಾರರ ಪ್ರದರ್ಶನ ಹೇಗಿರುತ್ತದೆ ಎಂಬುದನ್ನು ನೋಡಲು ಎಲ್ಲರೂ ಉತ್ಸುಕರಾಗಿದ್ದಾರೆ. ಮೇಲೆ ಹೇಳಿದಂತೆ ಈ ಲೀಗ್‌ನಲ್ಲಿ ಒಂದು ತಂಡಕ್ಕೆ ಕೇವಲ 6 ಓವರ್‌ಗಳ ಇನ್ನಿಂಗ್ಸ್ ಸಿಗುವ ಕಾರಣ ಅಭಿಮಾನಿಗಳು ಬೌಂಡರಿ ಮತ್ತು ಸಿಕ್ಸರ್‌ಗಳ ಮಳೆ ಸುರಿಯುವುದನ್ನು ನೋಡಬಹುದಾಗಿದೆ. ಲೀಗ್ ಹಂತದ ಬಳಿಕ ಎರಡೂ ತಂಡಗಳು ನಾಕೌಟ್ ಸುತ್ತು ತಲುಪಿದರೆ ಅಲ್ಲಿಯೂ ಸಹ ಮತ್ತೊಮ್ಮೆ ಮುಖಾಮುಖಿಯಾಗಲಿವೆ. ಇದರರ್ಥ ಒಂದೇ ಪಂದ್ಯಾವಳಿಯಲ್ಲಿ ಭಾರತ-ಪಾಕಿಸ್ತಾನ ನಡುವಿನ ಪಂದ್ಯವನ್ನು ಎರಡು ಬಾರಿ ವೀಕ್ಷಿಸಬಹುದು

**ರೈಸಿಂಗ್ ಸ್ಟಾರ್ಸ್ ಏಷ್ಯಾಕಪ್‌ನಲ್ಲೂ ಸ್ಪರ್ಧೆ**

ಇದರ ನಂತರ, ನವೆಂಬರ್ 14 ರಂದು ಪ್ರಾರಂಭವಾಗುವ ರೈಸಿಂಗ್ ಸ್ಟಾರ್ಸ್ ಏಷ್ಯಾಕಪ್ ನಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳು ನವೆಂಬರ್ 16 ರಂದು ಪರಸ್ಪರ ಮುಖಾಮುಖಿಯಾಗಲಿವೆ. ಈ ಪಂದ್ಯಾವಳಿಯು ಯುವ ಆಟಗಾರರಿಗೆ ಒಂದು ವೇದಿಕೆಯಾಗಿದ್ದು, ಎರಡೂ ದೇಶಗಳ ಉದಯೋನ್ಮುಖ ತಾರೆಗಳು ತಮ್ಮ ಛಾಪು ಮೂಡಿಸಲು ಉತ್ಸುಕರಾಗಿರುತ್ತಾರೆ. ಈ ಲೀಗ್ ಹಂತದ ಘರ್ಷಣೆಯ ನಂತರ, ಎರಡೂ ತಂಡಗಳು ಸೆಮಿಫೈನಲ್ ಅಥವಾ ಫೈನಲ್ ತಲುಪಿದರೆ, ಮತ್ತೆ ಪರಸ್ಪರ ಮುಖಾಮುಖಿಯಾಗಬಹುದು. ಇದರರ್ಥ ಈ ಪಂದ್ಯಾವಳಿಯಲ್ಲಿಯೂ ಎರಡು ಪಂದ್ಯಗಳು ನಡೆಯುವ ಸಾಧ್ಯತೆ ಇದೆ.

ಹೀಗಾಗಿ, ಭಾರತ ಮತ್ತು ಪಾಕಿಸ್ತಾನ ತಂಡಗಳು ನವೆಂಬರ್‌ನಲ್ಲಿ ಕನಿಷ್ಠ ಎರಡು ಬಾರಿ ಮುಖಾಮುಖಿಯಾಗಲಿವೆ. ನಂತರ ಈ ಎರಡೂ ತಂಡಗಳು ಈ ಎರಡು ಲೀಗ್‌ಗಳ ನಾಕೌಟ್ ಹಂತಕ್ಕೆ ಅರ್ಹತೆ ಪಡೆದರೆ, ಒಟ್ಟು ನಾಲ್ಕು ಬಾರಿ ಮುಖಾಮುಖಿಯಾಗಬಹುದು. ಇದು ಕ್ರಿಕೆಟ್ ಅಭಿಮಾನಿಗಳಿಗೆ ಹಬ್ಬಕ್ಕಿಂತ ಕಡಿಮೆಯಿಲ್ಲ.

## ಆಶಸ್ ಸರಣಿಗೆ ಬಲಿಷ್ಠ ತಂಡ ಪ್ರಕಟ




ನವೆಂಬರ್ 21 ರಿಂದ ಶುರುವಾಗಲಿರುವ ಇಂಗ್ಲೆಂಡ್ ವಿರುದ್ಧದ ಆಯಶಸ್ ಸರಣಿಯ ಮೊದಲ ಪಂದ್ಯಕ್ಕೆ ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅಲಭ್ಯರಾಗಿದ್ದಾರೆ. ಕಮಿನ್ಸ್ ಅನುಪಸ್ಥಿತಿಯಲ್ಲಿ ಆಸ್ಟ್ರೇಲಿಯಾ ತಂಡವನ್ನು ಮೊದಲ ಮ್ಯಾಚ್‌ನಲ್ಲಿ ಅನುಭವಿ ಆಟಗಾರ ಸ್ಟೀವ್ ಸ್ಮಿತ್ ಮುನ್ನಡೆಸಲಿದ್ದಾರೆ. ಇಂಗ್ಲೆಂಡ್ ವಿರುದ್ಧದ ಪ್ರತಿಷ್ಠಿತ ಆಯಶಸ್ ಸರಣಿಯ ಮೊದಲ ಪಂದ್ಯಕ್ಕೆ ಆಸ್ಟ್ರೇಲಿಯಾ ತಂಡವನ್ನು ಪ್ರಕಟಿಸಲಾಗಿದೆ. ಈ ತಂಡವನ್ನು ಸ್ಟೀವ್ ಸ್ಮಿತ್ ಮುನ್ನಡೆಸಲಿರುವುದು ವಿಶೇಷ. ಆಸ್ಟ್ರೇಲಿಯಾ ಟೆಸ್ಟ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಸೊಂಟದ ಮೂಳೆಯ ನೋವಿನಿಂದ ಬಳಲುತ್ತಿದ್ದು, ಹೀಗಾಗಿ ನವೆಂಬರ್ 21 ರಂದು ಆರಂಭವಾಗಲಿರುವ ಮೊದಲ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. ಇತ್ತ ಪ್ಯಾಟ್ ಕಮಿನ್ಸ್ ಅನುಪಸ್ಥಿತಿಯಲ್ಲಿ ಆಸ್ಟ್ರೇಲಿಯಾ ತಂಡವನ್ನು ಮೊದಲ ಪಂದ್ಯದಲ್ಲಿ ಸ್ಟೀವ್ ಸ್ಮಿತ್ ಮುನ್ನಡೆಸಲಿದ್ದಾರೆ. ಇನ್ನು ಉಳಿದ ಪಂದ್ಯಗಳಿಂದಲೂ ಕಮಿನ್ಸ್ ಹೊರಗುಳಿದರೆ ಸ್ಮಿತ್ ನಾಯಕನಾಗಿ ಮುಂದುವರೆಯಲಿದ್ದಾರೆ.

ಅಂದಹಾಗೆ ಸ್ಟೀವ್ ಸ್ಮಿತ್ ಈ ಹಿಂದೆ ಆಸ್ಟ್ರೇಲಿಯಾ ತಂಡದ ನಾಯಕನಾಗಿ ಕಾಣಿಸಿಕೊಂಡಿದ್ದರು. ಸ್ಮಿತ್ ಮುಂದಾಳತ್ವದಲ್ಲಿ 40 ಟೆಸ್ಟ್ ಪಂದ್ಯಗಳಲ್ಲಿ ಕಣಕ್ಕಿಳಿದಿದ್ದ ಆಸೀಸ್ ಪಡೆ 23 ಗೆಲುವು ದಾಖಲಿಸಿತ್ತು. ಇನ್ನು ಸ್ಮಿತ್ ನಾಯಕತ್ವದಲ್ಲಿ ಆಸ್ಟ್ರೇಲಿಯಾ ಸೋತಿರುವುದು ಕೇವಲ 10 ಮ್ಯಾಚ್‌ಗಳನ್ನು ಮಾತ್ರ. ಇನ್ನುಳಿದ 7 ಪಂದ್ಯಗಳಲ್ಲಿ ಡ್ರಾ ಸಾಧಿಸಿದೆ.

ಇನ್ನು 15 ಸದಸ್ಯರುಗಳ ಈ ತಂಡಕ್ಕೆ ಯುವ ಸ್ಫೋಟಕ ದಾಂಡಿಗ ಸ್ಯಾಮ್ ಕೋನ್‌ಸ್ಟಾಸ್ ಆಯ್ಕೆಯಾಗಿಲ್ಲ. ಬದಲಾಗಿ ಜೇಕ್ ವೆದರಾಲ್ಡ್‌ಗೆ ಚೊಚ್ಚಲ ಬಾರಿಗೆ ಅವಕಾಶ ನೀಡಲಾಗಿದೆ. ಹಾಗೆಯೇ ಬ್ರೆಂಡನ್ ಡಾಗೆಟ್‌ಗೆ 7 ವರ್ಷಗಳ ನಂತರ ಮತ್ತೊಮ್ಮೆ ಆಸ್ಟ್ರೇಲಿಯಾ ಟೆಸ್ಟ್ ತಂಡದಲ್ಲಿ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

## ತಲೆ ಕೆಳಗಾದ ಕೆಕೆಆರ್ ರಾಹುಲ್ ಲೆಕ್ಕಾಚಾರ



ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19ರ ಮಿನಿ ಹರಾಜಿಗೂ ಮುನ್ನ ಕೆಎಲ್ ರಾಹುಲ್ ಕೊಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೆ ಸೇರ್ಪಡೆಯಾಗಲಿದ್ದಾರೆ ಎಂಬ ಸುದ್ದಿಗೆ ತಾತ್ಕಾಲಿಕ ಬ್ರೇಕ್ ಬಿದ್ದಿದೆ. ಇದಕ್ಕೆ ಮುಖ್ಯ ಕಾರಣ ಮೂರು ಡೀಲ್‌ಗಳು ತಿರಸ್ಕೃತವಾಗಿರುವುದು. ಅಂದರೆ ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿಯು ಕೆಎಲ್ ರಾಹುಲ್ ಅವರನ್ನು ಮಾರಾಟ ಮಾಡಲು ಮೂರು ಸ್ವಾಪ್ ಡೀಲ್ ಗಳನ್ನು ಮುಂದಿಟ್ಟಿದ್ದರು. ಆದರೆ ಈ ಡೀಲ್‌ಗಳನ್ನು ಕೆಕೆಆರ್ ಫ್ರಾಂಚೈಸಿ ತಿರಸ್ಕರಿಸಿದೆ ಎಂದು ವರದಿಯಾಗಿದೆ. ಇದಕ್ಕೂ ಮುನ್ನ ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಯು ಕೆಎಲ್ ರಾಹುಲ್ ಖರೀದಿಗಾಗಿ ಕ್ಯಾಶ್ ಡೀಲ್‌ಗೆ ಮುಂದಾಗಿದ್ದರು. ಆದರೆ ಈ ಡೀಲ್‌ಗೆ ಡೆಲ್ಲಿ ಕ್ಯಾಪಿಟಲ್ಸ್ ಒಪ್ಪಿರಲಿಲ್ಲ. ಬದಲಾಗಿ ಸ್ಟಾರ್ ಆಟಗಾರರ ಸ್ವಾಪ್ ಡೀಲ್‌ಗೆ ಬೇಡಿಕೆಯಿಟ್ಟಿದ್ದರು. ಆ ಬೇಡಿಕೆಗಳೆಂದರೆ ಸುನಿಲ್ ನರೈನ್‌ನನ್ನು ನೀಡಿದರೆ ಕೆಎಲ್ ರಾಹುಲ್ ಅವರನ್ನು ನೀಡುವುದಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ತಿಳಿಸಿತ್ತು. ಆದರೆ ಈ ಡೀಲ್ ಅನ್ನು ಕೆಕೆಆರ್ ಫ್ರಾಂಚೈಸಿ ಒಪ್ಪಿಕೊಂಡಿರಲಿಲ್ಲ. ಕೆಎಲ್ ರಾಹುಲ್ ಬದಲಿಗೆ ರಿಂಕು ಸಿಂಗ್, ಅಂಗ್‌ಕ್ರಿಶ್ ರಘುವಂಶಿಯನ್ನು ನೀಡಬೇಕೆಂಬ ಬೇಡಿಕೆ ಡೆಲ್ಲಿ ಕ್ಯಾಪಿಟಲ್ಸ್ ಮುಂದಿಟ್ಟಿದೆ. ಆದರೆ ಇಬ್ಬರು ಯುವ ಆಟಗಾರರನ್ನು ಬಿಟ್ಟು ಕೊಡಲು ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿ ಒಪ್ಪಿಲ್ಲ. ಹರ್ಷಿತ್ ರಾಣಾ ಹಾಗೂ ಅಂಗ್‌ಕ್ರಿಶ್ ರಘುವಂಶಿಯ ಬದಲಿಗೆ ಕೆಎಲ್ ರಾಹುಲ್ ಅವರನ್ನು ಸ್ವಾಪ್ ಡೀಲ್ ಮಾಡಿಕೊಳ್ಳಲು ಡೆಲ್ಲಿ ಕ್ಯಾಪಿಟಲ್ಸ್ ಮುಂದಾಗಿದೆ. ಆದರೆ ಈ ಡೀಲ್ ಕೂಡ ಕುದುರಿಕೊಂಡಿಲ್ಲ. ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಯು ತನ್ನ ಖಾಯಂ ಸದಸ್ಯರುಗಳನ್ನು ಬಿಟ್ಟು ಕೊಡಲು ಮುಂದಾಗುತ್ತಿಲ್ಲ.

## ಆರ್‌ಸಿಬಿ ತಂಡಕ್ಕೆ ಹೊಸ ಕೋಚ್ ನೇಮಕ




ವುಮೆನ್ಸ್ ಪ್ರೀಮಿಯರ್ ಲೀಗ್ ಮೆಗಾ ಹರಾಜಿಗೂ ಮುನ್ನ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಹಿಳಾ ತಂಡದ ಮುಖ್ಯ ಕೋಚ್ ಬದಲಾಗಿದ್ದಾರೆ. ಕಳೆದ ಬಾರಿ ಆರ್‌ಸಿಬಿ ತಂಡದ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದ ಲ್ಯೂಕ್ ವಿಲಿಯಮ್ಸ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಅವರ ಬದಲಿಗೆ ಮಲೋಲನ್ ರಂಗರಾಜನ್ ಅವರು ಹೊಸ ಕೋಚ್ ಆಗಿ ನೇಮಕವಾಗಿದ್ದಾರೆ.

ಮಲೋಲನ್ ರಂಗರಾಜನ್ ಈ ಹಿಂದೆ ಆರ್‌ಸಿಬಿ ಫ್ರಾಂಚೈಸಿಯ ಸ್ಕೌಟಿಂಗ್ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದರು. ಅಲ್ಲದೆ ಕೆರಿಬಿಯನ್ ಪ್ರೀಮಿಯರ್ ಲೀಗ್‌ನಲ್ಲಿ ನೆವಿಸ್ ಪ್ಯಾಟ್ರಿಯಾಟ್ಸ್ ತಂಡದ ಸಹಾಯಕ ಕೋಚ್ ಆಗಿ ಕಾಣಿಸಿಕೊಂಡಿದ್ದರು. ಇದೀಗ ವುಮೆನ್ಸ್ ಪ್ರೀಮಿಯರ್ ಲೀಗ್‌ನಲ್ಲಿ ಮುಖ್ಯ ಕೋಚ್ ಆಗಿ ಹೊಸ ಇನಿಂಗ್ಸ್ ಆರಂಭಿಸಲು ಸಜ್ಜಾಗಿದ್ದಾರೆ. ಇನ್ನು ಮಲೋಲನ್ ರಂಗರಾಜನ್ ಅವರೊಂದಿಗೆ ಇಂಗ್ಲೆಂಡ್‌ನ ಮಾಜಿ ವೇಗಿ ಅನ್ಯಾ ಶ್ರಬ್ಸೋಲ್ ಅವರು ಆರ್‌ಸಿಬಿ ತಂಡದ ಹೊಸ ಬೌಲಿಂಗ್ ಕೋಚ್ ಆಗಿ ಕಾರ್ಯ ನಿರ್ವಹಿಸಲಿದ್ದಾರೆ.

**ವುಮೆನ್ಸ್ ಪ್ರೀಮಿಯರ್ ಲೀಗ್ ಹರಾಜು ಯಾವಾಗ:** ವುಮೆನ್ಸ್ ಪ್ರೀಮಿಯರ್ ಲೀಗ್ ಮೆಗಾ ಹರಾಜು ನವೆಂಬರ್ 26 ರಿಂದ 29 ರೊಳಗೆ ನಡೆಯಲಿದೆ. ಈ ಹರಾಜಿಗೂ ಮುನ್ನ ಎಲ್ಲಾ ಫ್ರಾಂಚೈಸಿಗಳು ತಾವು ಉಳಿಸಿಕೊಂಡಿರುವ ಆಟಗಾರ್ತಿಯರ ಪಟ್ಟಿಯನ್ನು ಸಲ್ಲಿಸಬೇಕು. ಇಲ್ಲಿ ಆಟಗಾರ್ತಿಯರನ್ನು ತಂಡದಲ್ಲೇ ಉಳಿಸಿಕೊಳ್ಳಲು ಐದು ಆಯ್ಕೆಗಳನ್ನು ನೀಡಲಾಗಿದೆ. ಅಂದರೆ ಒಂದು ಫ್ರಾಂಚೈಸಿ ಒಟ್ಟು ಐವರನ್ನು ರಿಟೈನ್ ಮಾಡಿಕೊಳ್ಳಬಹುದು. ಹೀಗೆ ರಿಟೈನ್ ಮಾಡಿಕೊಳ್ಳುವ ಮೊದಲ ಆಟಗಾರ್ತಿಗೆ 3.50 ಕೋಟಿ ರೂ, ಎರಡನೇ ಆಟಗಾರ್ತಿಗೆ 2.50 ಕೋಟಿ ರೂ, ಮೂರನೇ ಆಟಗಾರ್ತಿಗೆ 1.75 ಕೋಟಿ ರೂ, ನಾಲ್ಕನೇ ಆಟಗಾರ್ತಿಗೆ 1 ಕೋಟಿ ರೂ. ಹಾಗೂ ಐದನೇ ಆಟಗಾರ್ತಿಗೆ 50 ಲಕ್ಷ ರೂ. ನಿಗದಿ ಮಾಡಲಾಗಿದೆ.

## 6,084 ದಿನಗಳ ಕಾಯುವಿಕೆ ಅಂತ್ಯ



ಭಾರತ ಮಹಿಳಾ ತಂಡ ಕೊನೆಗೂ ತನ್ನ ಐಸಿಸಿ ಟ್ರೋಫಿ ಬರವನ್ನು ನೀಗಿಸಿಕೊಂಡಿದೆ. ಭಾನುವಾರ ನಡೆದ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾವನ್ನು ಸೋಲಿಸಿದ ಹರ್ಮನ್ ಪಡೆ ಮೊದಲ ಬಾರಿಗೆ ಮಹಿಳಾ ಏಕದಿನ ವಿಶ್ವಕಪ್ ಎತ್ತಿಹಿಡಿದಿದೆ. ಇದೀಗ ತಂಡವನ್ನು ಗೆಲುವಿನತ್ತ ಮುನ್ನಡೆಸಿದ ನಾಯಕಿ ಹರ್ಮನ್‌ಪ್ರೀತ್ ಕೌರ್ ವಿಶ್ವಕಪ್ ಗೆಲುವನ್ನು ಶಾಶ್ವತವಾಗಿ ನೆನಪಿನಲ್ಲಿಟ್ಟುಕೊಳ್ಳುವ ಸಲುವಾಗಿ ತಮ್ಮ ತೋಳಿನ ಮೇಲೆ ವಿಶ್ವಕಪ್ ಟ್ರೋಫಿಯ ಟ್ಯಾಟೂವನ್ನು ಹಾಕಿಸಿಕೊಂಡಿದ್ದಾರೆ. ವಿಶ್ವಕಪ್ ಫೈನಲ್ ಮುಗಿದ ಮರು ದಿನ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ವಿಶ್ವಕಪ್ ಟ್ರೋಫಿಯ ಟ್ಯಾಟೂ ಹಾಕಿಸಿಕೊಂಡಿರುವ ಫೋಟೋಗಳನ್ನು ಹರ್ಮನ್ ಹಂಚಿಕೊಂಡಿದ್ದಾರೆ. ಹರ್ಮನ್‌ಗೆ ಈ ವಿಶ್ವಕಪ್ ಗೆಲುವು ಮತ್ತಷ್ಟು ವಿಶೇಷವಾಗಿದ್ದು, ಐಸಿಸಿ ಟ್ರೋಫಿಯನ್ನು ಗೆದ್ದ ಮೊದಲ ಭಾರತೀಯ ಮಹಿಳಾ ನಾಯಕಿ ಎಂಬ ದಾಖಲೆಯನ್ನು ಇತಿಹಾಸದ ಪುಟದಲ್ಲಿ ದಾಖಲಿಸಿದ್ದಾರೆ.

**ವಿಶ್ವಕಪ್ ಟ್ರೋಫಿ ಟ್ಯಾಟೂ**

**ಭಾರತದ ಮೊದಲ ನಾಯಕಿ:** ಹರ್ಮನ್‌ಪ್ರೀತ್ ಹಂಚಿಕೊಂಡಿರುವ ಫೋಟೋದಲ್ಲಿ ವಿಶ್ವಕಪ್ ಟ್ರೋಫಿಯ ಟ್ಯಾಟೂ ಜೊತೆಗೆ ವಿಶ್ವಕಪ್ ಗೆದ್ದ ವರ್ಷ ಹಾಗೂ 52 ಎಂಬ ಸಂಖ್ಯೆಯನ್ನು ಬರೆಸಿದ್ದಾರೆ. 52 ಎಂಬ ಸಂಖ್ಯೆಯೂ ಎರಡು ವಿಶೇಷತೆಗಳನ್ನು ಹೊಂದಿದ್ದು, ಮೊದಲನೆಯದ್ದು, 52 ವರ್ಷಗಳ ಮಹಿಳಾ ಏಕದಿನ ವಿಶ್ವಕಪ್ ಇತಿಹಾಸದಲ್ಲಿ ಭಾರತ ಮೊದಲ ಬಾರಿಗೆ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದರೆ, ಎರಡನೇಯದ್ದು, ಫೈನಲ್ ಪಂದ್ಯದಲ್ಲಿ ಟೀಂ ಇಂಡಿಯಾ, ದಕ್ಷಿಣ ಆಫ್ರಿಕಾ ತಂಡವನ್ನು 52 ರನ್‌ಗಳಿಂದ ಸೋಲಿಸಿ ಟ್ರೋಫಿ ಎತ್ತಿಹಿಡಿದಿತ್ತು. ಈ ಟ್ಯಾಟೂ ಫೋಟೋವನ್ನು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿರುವ ಹರ್ಮನ್, ಇದು ನನ್ನ ಚರ್ಮ ಮತ್ತು ಹೃದಯದಲ್ಲಿ ಶಾಶ್ವತವಾಗಿ ಅಚ್ಚೊತ್ತಿದೆ ಎಂದು ಶೀರ್ಷಿಕೆಯಲ್ಲಿ ಬರೆದುಕೊಂಡಿದ್ದಾರೆ. ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪ್ರವೇಶಿಸಿದ ಮೊದಲ ದಿನದಿಂದಲೂ ವಿಶ್ವಕಪ್ ಟ್ರೋಫಿಗಾಗಿ ಕಾಯುತ್ತಿದ್ದೆ ಎಂದು ಹರ್ಮನ್‌ಪ್ರೀತ್ ಕೌರ್ ಬರೆದಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966